ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಕಾಸ್‌ಗಂಜ್ ಪ್ರಕರಣದ
ಹುತಾತ್ಮ ಅಥವಾ ಗಲಭೆಕೋರ?
ಚಂದನ ಗುಪ್ತಾ



ಸಂಪುಟ 12 | ಸಂಚಿಕೆ 06 | ಫೆಬ್ರವರಿ 05–11, 2018 | ಪುಟ 16 | ರೂ.10/-

Web : www.janashakthi.co.in e-mail : janashakthi2007@gmail.com



"ಸೌಹಾರ್ದತೆಗಾಗಿ ಕರ್ನಾಟಕ" ಮೈಕೊಡವಿ ಎದ್ದು ನಿಂತಾಗ..



ಪ್ರಚಾರದ ಗಿಮಿಕ್ ಗಳ ವಂಚಕ ಬಜೆಟ್





3ನೇ BSNL ಗುತ್ತಿಗೆ ಕಾರ್ಮಿಕರ ಸಮ್ಮೇಳನ



ತೆಲಂಗಾಣದಲ್ಲಿ ಬಹುಜನ ಎಡರಂಗ

ಜ. 30: ಕಾರ್ಮಿಕರ ಜೈಲು ಭರೋ

ಹುತಾತ್ಮ ದಿನದಂದು ದೇಶಾದ್ಯಂತ ಕಾರ್ಮಿಕರ ಜೈಲ್‌ಭರೋ ಸತ್ಯಾಗ್ರಹ



ಮಹಾತ್ಮ ಗಾಂಧಿ ಹುತಾತ್ಮರಾದ ದಿನದ 70ನೇ ವಾರ್ಷಿಕದಂದು, ಅಂದರೆ ಜನವರಿ 30ರಂದು ದೇಶಾದ್ಯಂತ ಕಾರ್ಮಿಕರು 'ಜೈಲ್ ಭರೋ' ಸತ್ಯಾಗ್ರಹ ನಡೆಸಿದರು. ಕಳೆದ ನವಂಬರ್‌ನಲ್ಲಿ ದೇಶದ ರಾಜಧಾನಿಗೆ ಬಂದು ತಮ್ಮ 12 ಅಂಶಗಳ ಆಗ್ರಹ ಪಟ್ಟಿಯನ್ನು ದೇಶವನ್ನು ಆಳುತ್ತಿರುವವರ ಮುಂದಿಟ್ಟ ಮೂರು ದಿನಗಳ 'ಮಹಾಪಡಾವ್' ನಲ್ಲಿ ನಿರ್ಧರಿಸಿದಂತೆ, 10 ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಕರೆಗೆ ಓಗೊಟ್ಟು ಈ ದೇಶವ್ಯಾಪಿ ಕಾರ್ಯಕ್ರಮ ನಡೆಯಿತು.

ದಿಲ್ಲಿಯಲ್ಲಿ ಪೋಲೀಸರ ತಡೆಗಳನ್ನು ದಾಟಿ ಸಂಸದ್ ಭವನದತ್ತ ಸಾಗಿದ ಕಾರ್ಮಿಕರನ್ನು ಪೊಲೀಸರು ಬಂಧಿಸಿದರು. ಅದರ ಮೊದಲು ನಡೆದ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಅಮರ್‌ಜಿತ್ ಕೌರ್, ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್‌ಸೇನ್ ಮತ್ತಿತರ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಮುಖಂಡರು ಮಾತನಾಡಿದರು.

'ಅಮನ್ ಕಾ ಐಲಾನ್'– ಶಾಂತಿ –ಸಾಮರಸ್ಯಕ್ಕಾಗಿ ಎಸ್‌ಎಫ್‌ಐ ಪ್ರಚಾರಾಂದೋಲನ

ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್‌ಎಫ್‌ಐ)ನ ಕೇಂದ್ರೀಯ ಕಾರ್ಯಕಾರಿ ಸಮಿತಿ ಗಣತಂತ್ರ ದಿನವಾದ ಜನವರಿ 26ರಿಂದ ಫೆಬ್ರುವರಿ 14ರ ವರೆಗೆ ನಮ್ಮ ಸಂವಿಧಾನಿಕ ಮೌಲ್ಯಗಳನ್ನು ಉಳಿಸಿಕೊಳ್ಳುವುದಕ್ಕಾಗಿ ದೇಶಾದ್ಯಂತ ವಿದ್ಯಾರ್ಥಿಗಳು 'ಅಮನ್ ಕಾ ಐಲಾನ್'(ಸಾಮರಸ್ಯದ ಘೋಷಣೆ' ಎಂಬ ಪ್ರಚಾರಾಂದೋಲನವನ್ನು ನಡೆಸುವುದಾಗಿ ಹೇಳಿಕೆಯೊಂದರಲ್ಲಿ ತಿಳಿಸಿದೆ. ಕೇಂದ್ರದಲ್ಲಿ ಆಳುತ್ತಿರುವವರ ವಿಚಾರಗಳು ಸಂವಿಧಾನಿಕ ಮೌಲ್ಯಗಳ ಮೇಲೆ ಯುದ್ಧ ನಡಸುವಂತದ್ದಾದ್ದರಿಂದ ಜಾತ್ಯಾತೀತ, ಪ್ರಜಾಸತ್ತಾತ್ಮಕ ಗಣರಾಜ್ಯದ ವಿಚಾರದ ಮೇಲೆ ಅವರು ದಾಳಿ ನಡೆಸುತ್ತಿರುವ ಸಂದರ್ಭದಲ್ಲಿ ನಮ್ಮ ಈ ಸಂವಿಧಾನಿಕ ಮೌಲ್ಯಗಳನ್ನು ಉಳಿಸಿಕೊಳ್ಳಲು, ಈ ಪ್ರಚಾರಾಂದೋಲನ ವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅದು ತಿಳಿಸಿದೆ.

ಇದರ ಭಾಗವಾಗಿ ದೇಶದ ವಿವಿಧ ಸ್ಥಳಗಳಲ್ಲಿ ವಿವಿಧ ಕಾರ್ಯಕ್ರಮಗಳು ನಡೆಯಲಿವೆ ಈಗಾಗಲೇ ಗಾಂಧೀಜಿ ಹುತಾತ್ಮರಾದ ಜನವರಿ 30ರಂದು ದಿಲ್ಲಿಯಲ್ಲಿ ಒಂದು ರಾಷ್ಟ್ರೀಯ ಸಮಾವೇಶ ನಡೆದಿದೆ. ದೇಶದೆಲ್ಲೆಡೆಗಳಿಂದ 200ಕ್ಕೂ ಹೆಚ್ಚು ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದರು. ಟಾಟಾ ಸಮಾಜ ವಿಜ್ಞಾನಗಳ ಸಂಸ್ಥೆ(ಟಿಐಎಸ್‌ಎಸ್)ನ ಪ್ರೊ. ರಾಮ್ ಪುನಿಯಾನಿ ಇದನ್ನು ಉದ್ಘಾಟಿಸಿದರು, ಎಸ್‌ಎಫ್‌ಐನ ಅಖಿಲ ಭಾರತ ಅಧ್ಯಕ್ಷ ವಿ ಪಿ ಸಾನು ಇದರ ಅಧ್ಯಕ್ಷತೆ ವಹಿಸಿದರು. ಶಿಕ್ಷಣದ ಮೂಲ ಪ್ರಶ್ನೆಗಳ ಆಧಾರದಲ್ಲಿ ವಿದ್ಯಾರ್ಥಿಗಳನ್ನು ಒಂದುಗೂಡಿಸಲು, ಕೇಸರಿ ಪರಿವಾರದ ಕೋಮುವಾದಿ ರಾಜಕೀಯದ ವಿರುದ್ಧ ಎಲ್ಲ ಪ್ರಗತಿಪರ, ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯತೆಯನ್ನು ಬಲಪಡಿಸಲು ಈ ಸಮಾವೇಶ ನಿರ್ಧರಿಸಿತು.

ಇಂತಹ ಇನ್ನೊಂದು ರಾಷ್ಟ್ರೀಯ ಸಮಾವೇಶ ಬೆಂಗಳೂರಿನಲ್ಲಿ ಫೆಬ್ರುವರಿ 17ರಂದು ನಡೆಯಲಿದೆ.

ಜನವರಿ 26: ಸಂವಿಧಾನ ಉಳಿಸಲು ಸಾವಿರಾರು ಮಂದಿ ಭಾಗವಹಿಸಿದ ಮುಂಬೈ ಮೌನ ಮೆರವಣಿಗೆ

ಜನವರಿ 26ರ ಗಣತಂತ್ರ ದಿನದಂದು ಅದರ ಬುನಾದಿಯಾದ ಸಂವಿಧಾನದ ಮೌಲ್ಯಗಳ ಮೇಲೆ ನಡೆಯುತ್ತಿರುವ ಹಲ್ಲೆಗಳನ್ನು ವಿರೋಧಿಸಿ ನಡೆದ ಮೌನ ಪ್ರತಿಭಟನಾ ಮೆರವಣಿಗೆಯಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ, ಸಿಪಿಐ ಹಿರಿಯ ಮುಖಂಡ ಡಿ.ರಾಜ, ಬಂಡಾಯ ಜೆಡಿ(ಯು) ಮುಖಂಡ ಶರದ್ ಯಾದವ್, ನ್ಯಾಶನಲ್ ಕಾನ್ಫರೆನ್ಸ್‌ನ ಒಮರ್ ಅಬ್ದುಲ್ಲ, ಗುಜರಾತಿನ ಯುವ ಮುಖಂಡರಾದ ಅಲ್ಪೇಶ್ ಥಾಕುರ್ ಮತ್ತು ಹಾರ್ದಿಕ್ ಪಟೇಲ್ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಕಾರ್ಯಕರ್ತರು, ಕಲಾವಿದರು, ಲೇಖಕರು, ಬುದ್ಧಿಜೀವಿಗಳು, ಸ್ವಾತಂತ್ರ್ಯ ಹೋರಾಟಗಾರರು ಸಾವಿರ–ಸಾವಿರ ಸಂಖ್ಯೆಯಲ್ಲಿ ಭಾಗವಹಿಸಿದರು. ನಮ್ಮ ಸಂವಿಧಾನದ ಮೂಲ ನೆಲೆಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವ ತೀವ್ರ ಬೆದರಿಕೆಗೆ ಒಳಗಾಗಿರುವ ಪ್ರಸ್ತುತ ಸನ್ನಿವೇಶದಲ್ಲಿ ನಮ್ಮ ದೇಶದ ಜಾತ್ಯತೀತ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರುವ ಪ್ರತಿಯೊಂದು ರಾಜಕೀಯ ಶಕ್ತಿಯೂ ಒಟ್ಟುಗೂಡಬೇಕಾಗಿದೆ ಎಂದು ಮುಂಬೈ ವಿಶ್ವವಿದ್ಯಾಲಯದಲ್ಲಿರುವ ಡಾ. ಅಂಬೇಡ್ಕರ್ ಪ್ರತಿಮೆಯಿಂದ ಗೇಟ್ ವೇ ಆಫ್ ಇಂಡಿಯಾದ ವರೆಗಿನ ಸುಮಾರು ಎರಡೂವರೆ ಕಿ..ಮೀ. ಉದ್ದದ ಮೌನ ಮೆರವಣಿಗೆಯಲ್ಲಿ ಭಾಗವಹಿಸಿದ ಸೀತಾರಾಮ್ ಯೆಚುರಿಯವರು ಪತ್ರಕರ್ತರೊಡನೆ ಮಾತಾಡುತ್ತ ಹೇಳಿದರು.



ಪ್ರಧಾನ ಮಂತ್ರಿಗಳು ಮಾತಾಡಬೇಕು, ಸರಕಾರ ಕ್ರಿಯೆಗಿಳಿಯಬೇಕು ದ್ವೇಷ ಅಪರಾಧಗಳನ್ನು ನಿಲ್ಲಿಸಬೇಕು

67 ನಿವೃತ್ತ ಉನ್ನತ ಅಧಿಕಾರಿಗಳ ಬಹಿರಂಗ ಪತ್ರ

ಮಹಾತ್ಮ ಗಾಂಧಿಯವರ ಹತ್ಯೆಯ 70ನೇ ವಾರ್ಷಿಕದ ಮುನ್ನಾದಿನ 67 ನಿವೃತ್ತ ಐಎಎಸ್, ಐಎಎಸ್, ಐಪಿಎಸ್ ಮತ್ತಿತರ ಉನ್ನತ ಅಧಿಕಾರಿಗಳು ದೇಶದಲ್ಲಿ ಈಗ ನಡೆಯುತ್ತಿರುವ ದ್ವೇಷಕೃತ್ಯಗಳ ಬಗ್ಗೆ ತೀವ್ರ ಆತಂಕ ಪಡಿಸುತ್ತ ಈ ಬಗ್ಗೆ ಪ್ರಧಾನಿಗಳು ಮೌನ ಮುರಿಯಬೇಕು, ಅವರ ಸರಕಾರ ಕ್ರಮ ಕೈಗೊಳ್ಳಲು ಮುಂದಾಗಬೇಕು, ಅಲ್ಪಸಂಖ್ಯಾತರ ಮೇಲೆ ದ್ವೇಷಕೃತ್ಯಗಳನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದ್ದಾರೆ.

"ನಾವು, ವಿವಿಧ ಸೇವೆಗಳ, ವಿವಿಧ ಬ್ಯಾಚುಗಳ ನಿವೃತ್ತ ನಾಗರಿಕ ಸೇವಕರು, ದೇಶದಲ್ಲಿ ಮುಂದುವರೆಯುತ್ತಿರುವ ಮತಿಹೀನ ಹಿಂಸಾಚಾರದ ಬಗ್ಗೆ, ವಿಶೇಷವಾಗಿ ಅಲ್ಪಸಂಖ್ಯಾತರ ಮೇಲೆ ಗುರಿಯಿಟ್ಟಿರುವ ಹಿಂಸಾಚಾರದ ಬಗ್ಗೆ ಮತ್ತು ಈ ದಾಳಿಗಳ ಬಗ್ಗೆ ಕಾನೂನು ಜಾರಿ ವ್ಯವಸ್ಥೆಯ ಉದಾಸೀನದ ಸ್ಪಂದನದ ಬಗ್ಗೆ ಆಳವಾದ ಆತಂಕವನ್ನು ದಾಖಲು ಪಡಿಸುತ್ತೇವೆ" ಎಂದು ಆರಂಭವಾಗುವ ಪತ್ರ ಬಾಬ್ರಿ ಮಸೀದಿ ಧ್ವಂಸದ 25ನೇ ವಾರ್ಷಿಕದಂದು ರಾಜಸ್ತಾನದ ರಜ್ಸಾಮಂದ್‌ನಲ್ಲಿ ಪಶ್ಚಿಮ ಬಂಗಾಳದ ವಲಸೆ ಕಾರ್ಮಿಕ ಮಹಮ್ಮದ್ ಅಫ್ರಜುಲ್ ಭೀಷಣ ಹತ್ಯೆಯ ವರೆಗೆ ಕಳೆದ ಒಂಭತ್ತು ತಿಂಗಳಲ್ಲಿ ದೇಶದಲ್ಲಿ ಗೋರಕ್ಷಣೆಯ ಹೆಸರಲ್ಲಿ ನಡೆದಿರುವ ಕುಕೃತ್ಯಗಳು ಮತ್ತು ಅಲ್ಪಸಂಖ್ಯಾತರು ಎದುರಿಸುತ್ತಿರುವ ಇತರ ಹಲ್ಲೆಗಳನ್ನು ನೆನಪಿಸಿಕೊಳ್ಳುತ್ತ ಹೀಗೆ ಕೊನೆಗೊಳ್ಳುತ್ತದೆ–

"ನಾವು ಈಗ ಮತ್ತು ವಿಳಂಬವಿಲ್ಲದೆ ಈ ಪ್ರಶ್ನೆಗಳ ಮೇಲೆ ಮಾನ್ಯ ಪ್ರಧಾನ ಮಂತ್ರಿಗಳ ಮತ್ತು ಅವರ ಸರಕಾರದ ಒಂದು ಸ್ಪಷ್ಟ ಸ್ಪಂದನವನ್ನು ಕೇಳುತ್ತೇವೆ, ಜತೆಗೆ, ಸಂಬಂಧಪಟ್ಟ ಕಾನೂನು ಜಾರಿ ವ್ಯವಸ್ಥೆಗಳು ಈ ದೇಶದ ಅಲ್ಪಸಂಖ್ಯಾತರ ವಿರುದ್ಧ ಇಂತಹ ದ್ವೇಷ ಅಪರಾಧಗಳನ್ನು ಎಸಗುವವರ ವಿರುದ್ಧ ತಕ್ಷಣ ಮತ್ತು ದೃಢ ಕ್ರಮಗಳನ್ನು ಆಗ್ರಹಿಸುತ್ತೇವೆ.

ಇತ್ತೀಚಿನ ಪ್ರಕರಣಗಳು ನಮ್ಮ ಸಂವಿಧಾನಿಕ ಮೌಲ್ಯಗಳನ್ನು ಬುಡಮೇಲು ಮಾಡುತ್ತವೆ ಮತ್ತು ಕಾನೂನುಗಳನ್ನು ದುರ್ಬಲಗೊಳಿಸಿ, ಸಮಾಜದಲ್ಲಿ ಇವು ಸಾಮಾನ್ಯ ಸಂಗತಿಯಾಗುವಂತೆ ಮಾಡುತ್ತವೆ. ನಮ್ಮ ಈಗಿರುವ ಕಾನೂನುಗಳನ್ನು ಅಗತ್ಯ ಇಚ್ಛಾಶಕ್ತಿ ಮತ್ತು ದೃಢತೆಯಿಂದ ಜಾರಿಗೊಳಿಸಿದರೆ ಸಾಕಷ್ಟು ರಕ್ಷಣೆ ಒದಗಿಸಬಲ್ಲವು. ಆದರೆ ಕೋಮುವಾದಿ ವಿಷಾಣುಗಳು ನಮ್ಮ ಸಮಾಜದಲ್ಲಿ ವ್ಯಾಪಕವಾಗಿ ಆಗಲೇ ಹರಡಿರುವಾಗ ಕೇವಲ ಕಾನೂನು ರಕ್ಷಣೆ ಮಾತ್ರವೇ ಪರಿಹಾರ ನೀಡದು. ನಮ್ಮ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಒಂದು ಅಗತ್ಯ ಆವಶ್ಯಕತೆಯಾದ ಶಾಂತಿ ಮತ್ತು ಸಾಮರಸ್ಯಕ್ಕೆ ಬೆದರಿಕೆ ಒಡ್ಡಬಹುದಾದ ಪ್ರಸಕ್ತ ಪ್ರವೃತ್ತಿಗಳ ದುಷ್ಪರಿಣಾಮಗಳ ಬಗ್ಗೆ ನಮ್ಮಲ್ಲಿ ಪ್ರತಿಯೊಬ್ಬರೂ ಚಿಂತಿಸುವುದು ಅಗತ್ಯವಾಗಿದೆ. ನಾವೆಲ್ಲರೂ, ಅದರಲ್ಲೂ ಬಹುಸಂಖ್ಯಾತ ಸಮುದಾಯಕ್ಕೆ ಸೇರಿದವರು, ಕೇವಲ ಚಿಂತನೆಯಲ್ಲೇ ನಿಲ್ಲದೆ, ಅದರಾಚೆಗೂ ಹೋಗಿ, ಎದ್ದು ನಿಲ್ಲಬೇಕಾಗಿದೆ, ನಮ್ಮ ಸಮಾಜ ಮತ್ತು ನಮ್ಮ ದೇಶದ ಕೋಮುವಾದೀಕರಣವನ್ನು ವಿರೋಧಿಸಬೇಕಾಗಿದೆ ಮತ್ತು ಸಾರ್ವಜನಿಕವಾಗಿ ಖಂಡಿಸಬೇಕಾಗಿದೆ"

ಈ ಬಹಿರಂಗ ಪತ್ರಕ್ಕೆ ಸಹಿ ಹಾಕಿರುವ ನಿವೃತ್ತ ಅಧಿಕಾರಿಗಳಲ್ಲಿ 41 ಐಎಎಸ್, 6 ಐಎಫ್‌ಎಸ್(ವಿದೇಶಾಂಗ ಸೇವೆ) ಮತ್ತು 5 ಐಪಿಎಸ್ ಅಧಿಕಾರಿಗಳಲ್ಲದೆ, ಒಬ್ಬ ನಿವೃತ್ತ ಮುಖ್ಯ ಮಾಹಿತಿ ಆಯುಕ್ತರೂ ಸೇರಿದಂತೆ ಇತರ ವಿಭಾಗಗಳ ಉನ್ನತ ಅಧಿಕಾರಿಗಳೂ ಇದ್ದಾರೆ.

ಕೇಂದ್ರ ಬಜೆಟ್ 2018-19: ಜನಗಳ ಜೀವನಾಧಾರಗಳ ಮೇಲೆ ಮತ್ತಷ್ಟು ದಾಳಿ

ಜನಗಳಿಗೆ ಮಂಕುಬೂದಿ ಎರಚುವ ಮೋದಿ ಸರಕಾರದ ಇನ್ನೊಂದು ಪ್ರಚಾರ ಮೂಟೆ

ಜನಗಳ ಪ್ರತಿಭಟನೆಗಳನ್ನು ಸಂಘಟಿಸಲು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ

ಮುಂದಿನ ಸಾರ್ವತ್ರಿಕ ಚುನಾವಣೆಗಳ ಮುನ್ನದ ಮೋದಿ ಸರಕಾರದ ಕೊನೆಯ ಪೂರ್ಣ ಬಜೆಟ್ ಮತ್ತೊಮ್ಮೆ ನಮ್ಮ ದೇಶದ ಬಹುಪಾಲು ದುಡಿಯುವ ಜನಗಳ ಮೇಲೆ ಇನ್ನಷ್ಟು ದಾಳಿಗಳನ್ನು ನಡೆಸುತ್ತಲೇ ವಿದೇಶಿ ಮತ್ತು ದೇಶೀ ದೊಡ್ಡ ಕಾರ್ಪೊರೇಟ್‌ಗಳ ಹಿತಗಳನ್ನು ಪೂರೈಸಲು ಈ ಸರಕಾರ ಕಟಿಬದ್ಧವಾಗಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿದೆ. ಆದರೆ ಜನಗಳ ಮೇಲಿನ ಈ ದಾಳಿಗಳನ್ನು ಅವು ದಾಳಿಗಳಲ್ಲ, ತದ್ವಿರುದ್ಧವಾಗಿ ಸೇವೆಗಳೇ ಎಂಬ ವೇಷ ತೊಡಿಸಿ ಮಂಡಿಸಲು ಪ್ರಯತ್ನಿಸಿದೆ ಎಂದು ಕೇಂದ್ರದ 2018-19ರ ಬಜೆಟ್ ಬಗ್ಗೆ ಪ್ರತಿಕ್ರಿಯಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.



ವ್ಯಂಗ್ಯಚಿತ್ರ ಕೃಪೆ: ದೇಶಾಭಿಮಾನಿ

ಈ ಬಜೆಟ್, 2017ರಲ್ಲಿ ನಿರ್ಮಾಣವಾದ ಹೆಚ್ಚಿನ ಸಂಪತ್ತಿನಲ್ಲಿ 73% ವನ್ನು ಕೇವಲ ಒಂದು ಶೇಕಡಾ ಅತಿ ಶ್ರೀಮಂತರು ಬಾಚಿಕೊಂಡಿದ್ದಾರೆ ಎಂದು ಕಂಡು ಬಂದಿದ್ದರೂ, ಶ್ರೀಮಂತರಿಗೆ ಅನ್ವಯವಾಗುವ ತೆರಿಗೆಗಳನ್ನು ಹೆಚ್ಚಿಸಿ ಆದಾಯ ಸಂಗ್ರಹಿಸುವ ಪ್ರಯತ್ನವನ್ನೇ ಮಾಡಿಲ್ಲ. ತದ್ವಿರುದ್ಧವಾಗಿ, ಸರಕಾರೀ ಖರ್ಚುಗಳಿಗೆ ಜನಸಾಮಾನ್ಯರ ಮೇಲೆ ಹೊರೆ ಹಾಕುವ ಪರೋಕ್ಷ ತೆರಿಗೆಗಳನ್ನೇ ಹೆಚ್ಚೆಚ್ಚಾಗಿ ಅವಲಂಬಿಸುವ ಪ್ರವೃತ್ತಿ ಮುಂದುವರೆದಿದೆ. ನಿಜ ಹೇಳಬೇಕೆಂದರೆ ಒಟ್ಟು ಕೇಂದ್ರೀಯ ತೆರಿಗೆಗಳಲ್ಲಿ ಪ್ರತ್ಯಕ್ಷ ತೆರಿಗೆಗಳ ಪಾಲು ಒಂದು ಶೇಕಡಾ ಇಳಿದಿದೆ, 51.6%ದಿಂದ 50.6%ಕ್ಕೆ ಇಳಿದಿದೆ ಎಂಬ ಸಂಗತಿಯತ್ತ ಸಿಪಿಐ(ಎಂ) ಗಮನ ಸೆಳೆದಿದೆ.

ಕೃಷಿ, ಗ್ರಾಮೀಣ ಅಭಿವೃದ್ಧಿ ಮತ್ತು 10 ಕೋಟಿ ಕುಟುಂಬಗಳಿಗೆ ವರ್ಷಕ್ಕೆ 5ಲಕ್ಷ ರೂ. ವೈದ್ಯಕೀಯ ವಿಮಾರಕ್ಷಣೆ ಒದಗಿಸಲಾಗುತ್ತದೆ ಎನ್ನುವ ರಾಷ್ಟ್ರೀಯ ಆರೋಗ್ಯಪಾಲನೆ ಯೋಜನೆಗೆ ಬೃಹತ್ ಪ್ರಮಾಣದಲ್ಲಿ ಖರ್ಚು ಮಾಡಲಾಗುತ್ತದೆ ಎಂದು ಬಿಂಬಿಸುತ್ತ ಈ ಬಜೆಟಿಗೆ ಬಡಜನರ ಪರ ಎಂಬ ವೇಷ ತೊಡಿಸಿ ಮೆರೆಸುವ ಪ್ರಯತ್ನ ನಡೆದಿದೆ. ಆದರೆ ವಾಸ್ತವವಾಗಿ ಈ ಆರೋಗ್ಯಪಾಲನೆ ಯೋಜನೆಗೆ ಈ ಬಜೆಟಿನಲ್ಲಿ ಯಾವುದೇ ಹೆಚ್ಚುವರಿ ಹಣವನ್ನು ಕೊಟ್ಟಿಲ್ಲ, ಈಗಿರುವ ಯೋಜನೆಯನ್ನೇ ಹೊಸದೆಂಬಂತೆ ಪ್ರಸ್ತುತ ಪಡಿಸಲಾಗಿದೆ. ಇದು ಕೂಡ ಈ ಹಿಂದಿನ ಸ್ಕೀಮಿನಂತೆ ವಿಮಾ ಕಂಪನಿಗಳಿಗೆ ಹಣ ವರ್ಗಾಯಿಸುವ ಸಾಧನವಾಗಿಯೇ ಬಳಕೆಯಾಗುತ್ತದೆ ಎಂಬುದು ಸ್ಪಷ್ಟ. ಆರೋಗ್ಯ ವಿಮೆಯಾಗಲೀ, ಬೆಳೆ ವಿಮೆಯಾಗಳಿ ಅದರ ಅಂತಿಮ ಫಲಿತಾಂಶ ಎಂದರೆ ಕಾರ್ಪೊರೇಟ್‌ಗಳಿಗೆ ಲಾಭದ ಬಕ್ಷೀಸೇ ಹೊರತು, ಜನಗಳಿಗೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ ಎಂಬುದನ್ನು ಅನುಭವವಗಳೇ ತೋರಿಸಿ ಕೊಟ್ಟಿವೆ.

ಸಾಮಾಜಿಕ ಕಲ್ಯಾಣವನ್ನು ಕಡಿತಗೊಳಿಸುವ ಬಜೆಟ್

ಇದು ಒಂದು ಸಂಕುಚನಗೊಳಿಸುವ ಬಜೆಟ್, ಅಂದರೆ ಉದ್ಯೋಗಾವಕಾಶಗಳು ಮತ್ತು ಸಾಮಾಜಿಕ ಕಲ್ಯಾಣ ಖರ್ಚುಗಳನ್ನು ಮತ್ತಷ್ಟು ಕಡಿತಗೊಳಿಸುವ ಬಜೆಟ್ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವಿಶ್ಲೇಷಿಸಿದೆ. ದೇಶದ ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ)ದಲ್ಲಿ ಸರಕಾರ ಮಾಡುವ ಖರ್ಚುಗಳ ಪ್ರಮಾಣ ಕಳೆದ ಬಾರಿ 13.2% ಇತ್ತು. ಈ ಬಜೆಟಿನಲ್ಲಿ ಅದು 13%ಕ್ಕೆ ಇಳಿದಿದೆ.

ಕಳೆದ ವರ್ಷ ಕೇಂದ್ರೀಯ ಸಾಮಾಜಿಕ ಸ್ಕೀಮುಗಳಲ್ಲಿ ಬಂಡವಾಳ ಖರ್ಚಿನ ಮಟ್ಟಗಳು ಬಜೆಟಿನಲ್ಲಿ ಸೂಚಿಸಿದ್ದ ಗುರಿಗಳಿಗಿಂತ ಕೆಳ ಮಟ್ಟದಲ್ಲಿದ್ದವು. ಇದರರ್ಥ ಅಂತರ್ರಾಷ್ಟ್ರೀಯ ಬಂಡವಾಳಿರು ವಿಧಿಸಿರುವ ಹಣಕಾಸು ಕೊರತೆಯ ಮಿತಿಯನ್ನು ಪಾಲಿಸಲು ಜನಗಳ ಕಲ್ಯಾಣಕ್ಕೆ ಮಾಡಬೇಕಾಗಿದ್ದ ಖರ್ಚುಗಳಲ್ಲಿ ಕಡಿತ ಮಾಡಲಾಯಿತು. ರೆವಿನ್ಯೂ ಸಂಗ್ರಹದ ಬೆಳವಣಿಗೆ ಬಜೆಟ್ ಗುರಿಯನ್ನು ತಲುಪದೇ ಕೆಳಗೇ ಇದೆಯೆಂಬ ಸೂಚನೆಯಿಂದಾಗಿ ಸರಕಾರ ತನ್ನ ಖರ್ಚುಗಳನ್ನು ಕಡಿತ ಮಾಡಿದೆ. ಇದು ನೇರವಾಗಿ ಜನಗಳ ಜೀವನಾಧಾರಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

* ಕೃಷಿ ಮತ್ತು ಗ್ರಾಮಿಣಾಭಿವೃದ್ಧಿಗೆ ಮಾಡುವ ಖರ್ಚಿನ ಪ್ರಮಾಣ ಜಿಡಿಪಿಯ 1.15% ದಿಂದ 1.08%ಕ್ಕೆ ಕಡಿತವಾಗಿದೆ.
* ಆರೋಗ್ಯದ ಮೇಲಿನ ಒಟ್ಟು ಖರ್ಚಿನ ಪ್ರಮಾಣ ಜಿಡಿಪಿಯ 0.32% ದಿಂದ 0.29%ಕ್ಕೆ ಇಳಿದಿದೆ.
* ಶಿಕ್ಷಣದ ಮೇಲಿನ ಕೇಂದ್ರೀಯ ಖರ್ಚಿನ ಪ್ರಮಾಣ ಜಿಡಿಪಿಯ 0.49% ದಿಂದ 0.45% ಕ್ಕೆ ಇಳಿದಿದೆ.
* ಲಿಂಗ ಬಜೆಟಿನ ಪ್ರಮಾಣ ಜಿಡಿಪಿಯ 0.68%ದಿಂದ 0.65%ಕ್ಕೆ ಇಳಿದಿದೆ.

ಪರಿಶಿಷ್ಟ ಬುಡಕಟ್ಟುಗಳ ಕಲ್ಯಾಣಕ್ಕೆ ನೀಡಿರುವ ಮೊತ್ತ ಒಟ್ಟು ಬಜೆಟಿನ 1.6% ಮಾತ್ರ; ಪರಿಶಿಷ್ಟ ಜಾತಿಗಳಿಗೆ 2.32% ಮಾತ್ರ. ಇದು ಒಟ್ಟು ಜನಸಂಖ್ಯೆಯಲ್ಲಿ ಈ ವಿಭಾಗಗಳ ಪ್ರಮಾಣಕ್ಕೆ ಹೋಲಿಸಿದರೆ ಏನೇನೂ ಸಾಲದು.

ಮನರೇಗಕ್ಕೆ ನೀಡಿರುವ ಹಣದಲ್ಲಿ ಏನೂ ಹೆಚ್ಚಳವಾಗಿಲ್ಲ. ರಾಜ್ಯಸರಕಾರಗಳಿಗೆ 2017-18ರ ಸಾಲಿನಲ್ಲಿ ಕೊಡಬೇಕಾದ ಬಾಕಿಯ ಮೊತ್ತ 4800 ಕೋಟಿ ರೂ. ಎಂಬುದನ್ನು ಇಲ್ಲಿ ಗಮನಿಸಬೇಕು.

ಮತ್ತೊಮ್ಮೆ ಸರಕಾರ ಬೆಳೆಗಳಿಗೆ ಉತ್ಪಾದನೆಯ ಖರ್ಚಿನ ಕನಿಷ್ಟ ಒಂದೂವರೆ ಪಟ್ಟಿನಷ್ಟು ಕನಿಷ್ಟ ಬೆಂಬಲ ಬೆಲೆ ಘೋಷಿಸುವುದಾಗಿ ಭರವಸೆ ನೀಡಿದೆ. ಈಗಾಗಲೇ ಬಹುಪಾಲು ಹಿಂಗಾರು ಬೆಳೆಗಳಿಗೆ ಇಂತಹ ಕನಿಷ್ಟ ಬೆಂಬಲ ಬೆಲೆ ಘೋಷಿಸಲಾಗಿದೆ ಎನ್ನುತ್ತ ಹಣಕಾಸು ಮಂತ್ರಿಗಳು ದೇಶವನ್ನು ತಪ್ಪು ದಾರಿಗೆ ಎಳೆದಿದ್ದಾರೆ, ಇದನ್ನು ಎಂದೂ ದೇಶದಲ್ಲಿ ಎಲ್ಲಿಯೂ ಜಾರಿಗೆ ತಂದಿರುವುದು ಕಂಡುಬಂದಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಇದೇ ರೀತಿಯಲ್ಲಿ, ವಿಸ್ತರಿತ ಬೆಳೆ ಸಾಲ ಸೌಲಭ್ಯ ಇತ್ಯಾದಿಗಳನ್ನು ಕುರಿತು ಹೇಳಿಕೊಂಡಿರುವುದು ಬಜೆಟ್ ನೀಡಿಕೆಗಳಲ್ಲಿ ಮೂರ್ತವಾಗಿ ಕಾಣ ಬರುತ್ತಿಲ್ಲ. ಆಹಾರ ಸಬ್ಸಿಡಿಗೆ ಮತ್ತು ಬೆಳೆಗಳ ಖರೀದಿಗೆ ಇಟ್ಟಿರುವ ಮೊತ್ತ ರೈತರಿಗೆ ಬೆಂಬಲ ನೀಡಲಾಗಲೀ ಅಥವ ಆಹಾರ ಭದ್ರತಾ ಕಾಯ್ದೆಯ ಬಾಧ್ಯತೆಗಳನ್ನು ಈಡೇರಿಸಲಿಕ್ಕಾಗಲೀ ಏನೇನೂ ಸಾಲದು. ಸಾಲದ ಹೊರೆಯ ಅಡಿಯಲ್ಲಿ ನರಳುತ್ತ ಹತಾಶೆಯಿಂದ ಆತ್ಮಹತ್ಯೆಯತ್ತ ನೂಕಲ್ಪಡುತ್ತಿರುವ ರೈತರಿಗೆ ಸಾಲ ಮನ್ನಾದ ಪ್ರಸ್ತಾಪವೇ ಈ ಬಜೆಟಿನಲ್ಲಿಲ್ಲ ಎಂಬ ಮಹತ್ವದ ಸಂಗತಿಯತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಮನ ಸೆಳೆದಿದೆ.

ಮಧ್ಯಮವರ್ಗಗಳು ಈ ಬಜೆಟಿನಲ್ಲಿ ನೇರ ಪ್ರಯೋಜನವೇನನ್ನೂ ಕಾಣುತ್ತಿಲ್ಲ. ನೌಕರರು ತಮ್ಮ ಉಳಿತಾಯಗಳ ಮೇಲಿನ ಆದಾಯ ಕಡಿತಗೊಳ್ಳುತ್ತಿರುವುದನ್ನು ಕಾಣುತ್ತಿದ್ದಾರೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಲೀಟರಿಗೆ 2ರೂ. ಪರಿಹಾರ ನೀಡಲಾಗಿದೆ ಎಂದು ಹೇಳುತ್ತಲೇ, ಅವುಗಳ ಮೇಲಿನ ಉಪಕರಗಳನ್ನು ಲೀಟರಿಗೆ 6ರೂ.ನಿಂದ 8ರೂ.ಗೆ ಏರಿಸಲಾಗಿದೆ.

ಒಟ್ಟಿನಲ್ಲಿ, ಈ ಬಜೆಟ್ ಜನಗಳಿಗೆ ಮಂಕುಬೂದಿ ಎರಚುವ ಮೋದಿ ಸರಕಾರದ ಎಂದಿನ ಒಂದು ಪ್ರಚಾರ ಮೂಟೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವರ್ಣಿಸಿದೆ. ಇದು ಹಣಕಾಸು ಕೊರತೆಯನ್ನು ಕಡಿತಗೊಳಿಸಿ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳವನ್ನು ತುಷ್ಟೀಕರಿಸಲಿಕ್ಕಾಗಿ ಖರ್ಚುಗಳನ್ನು ಕುಗ್ಗಿಸುತ್ತದೆ, ಸಾರ್ವಜನಿಕ ವಲಯದ ಹೂಡಿಕೆಗಳನ್ನು ಹಿಂಪಡೆಯುತ್ತದೆ, ಇವೆಲ್ಲದಕ್ಕೂ ಹೆಚ್ಚಿನ ಹೊರೆಗಳ ಮೂಲಕ ಬೆಲೆ ತೆರಬೇಕಾದವರು ಭಾರತೀಯ ಜನತೆ.

ಆದ್ದರಿಂದ ನೋಟುರದ್ಧತಿ ಮತ್ತು ಜಿಎಸ್‌ಟಿ ಹೇರಿದ ಸಂಕಟಗಳನ್ನು ಮತ್ತಷ್ಟು ಹೆಚ್ಚಿಸಲು ಬಂದಿರುವ ಇಂತಹ ಜನ-ವಿರೋಧಿ ಬಜೆಟಿನ ವಿರುದ್ಧ ಜನಗಳ ಪ್ರತಿಭಟನೆಗಳನ್ನು ಸಂಘಟಿಸಬೇಕು ಎಂದು ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ.

ಕೃಷಿ-ಪರ ಬಜೆಟ್ ಅಲ್ಲ: ರೈತರಿಗೆ ವಿಶ್ವಾಸಘಾತ ಬಗೆವ ಸುಳ್ಳುಗಳ, ವಂಚನೆಗಳ ಕಂತೆ- ಎಐಕೆಎಸ್

ಪ್ರಸಕ್ತ ಮೋದಿ ಸರಕಾರದ ಕೊನೆಯ ಪೂರ್ಣ ಬಜೆಟ್ ಗ್ರಾಮಿಣ ಒಲವಿನ ಬಜೆಟ್ ಎಂದು ವರ್ಣಿಸಲಾಗುತ್ತಿದೆ. ಆದರೆ ವಾಸ್ತವವಾಗಿ ಇದು ರೈತಾಪಿ ಜನಗಳಿಗೆ ಮತ್ತೊಮ್ಮೆ ವಿಶ್ವಾಸಘಾತ ಮಾಡಿರುವ ಸುಳ್ಳುಗಳು ಮತ್ತು ವಂಚನೆಗಳಿಂದ 'ತುಂಬಿರುವ ಬಜೆಟ್ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಬಲವಾಗಿ ಖಂಡಿಸಿದೆ.

ಈ ಬಜೆಟಿನ ಕೃಷಿ ಸಂಬಂಧಿತ ಪ್ರಸ್ತಾವಗಳು ಕಾರ್ಪೊರೇಟ್ ಕೃಷಿ ವ್ಯಾಪಾರಗಳಿಗೆ ನೆರವಾಗುವ ಗುರಿಯನ್ನು ಮಾತ್ರ ಹೊಂದಿವೆ, ರೈತರ ಕಲ್ಯಾಣದ ಕಣ್ನೋಟ ಅದರಲ್ಲಿ ಇಲ್ಲ, ರೈತರು, ಕೃಷಿಕೂಲಿಕಾರರು ಮತ್ತು ಬಡವರ ಬೇಡಿಕೆಯನ್ನು ಪೂರೈಸುವಲ್ಲಿ ಅದು ವಿಫಲವಾಗಿದೆ ಎಂದಿರುವ ಎಐಕೆಎಸ್ ರೈತಾಪಿಗಳ ಬಗ್ಗೆ ಬಿಜೆಪಿ ಸರಕಾರದ ಸಂವೇದನಾಶೂನ್ಯ ನಿಲುವಿನ ವಿರುದ್ಧ ಸಿಡಿದೇಳಬೇಕು ಎಂದು ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ.

ಮೊತ್ತ ಮೊದಲನೆಯದಾಗಿ, ಫಲದಾಯಕ ಬೆಲೆಗಳ ಭರವಸೆ ಕುರಿತಾದ ರೈತರ ಬೇಡಿಕೆ ಕುರಿತಂತೆ ಮಾಡಿರುವ ವಿಶ್ವಾಸಘಾತ. ರಾಷ್ಟ್ರೀಯ ರೈತರ ಆಯೋಗ ಶಿಫಾರಸು ಮಾಡಿದ ಉತ್ಪಾದನಾ ವೆಚ್ಚ(ಸಿ2)ಕ್ಕೆ ಕನಿಷ್ಟ 50% ಸೇರಿಸಿ ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ) ನೀಡಬೇಕೆಂಬ ಶಿಫಾರಸನ್ನು ಜಾರಿಗೆ ತರಲಾಗುವುದು ಎಂಬ ಮೋದಿಯವರ ಚುನಾವಣಾ ವಚನವನ್ನು ಮೂಲೆಗೆ ತಳ್ಳಿದ ನಂತರ, ಈಗ ಹಣಕಾಸು ಮಂತ್ರಿಗಳು ಈಗಾಗಲೇ ಈ ಬಾರಿಯ ಹಿಂಗಾರು ಬೆಳೆಗಳಿಗೆ ಇದನ್ನು ಜಾರಿಗೆ ತರಲಾಗಿದೆ, ಮುಂದಿನ ಮುಂಗಾರು ಬೆಳೆಗಳಿಗೂ ಜಾರಿಗೆ ತರಲಾಗುವುದು ಎಂದಿದ್ದಾರೆ.

ಆದರೆ ಇದು ಖಂಡಿತಾ ನಿಜವಲ್ಲ. ಉದಾಹರಣೆಗೆ, ಗೋದಿಯ ಉತ್ಪಾದನಾ ಖರ್ಚು(ಸಿ2) 1256 ರೂ. ಇದರ ಒಂದೂವರೆ ಪಟ್ಟು ಅಂದರೆ 1884 ರೂ. ಆಗಬೇಕು. ಆದರೆ ಸರಕಾರ ಪ್ರಕಟಿಸಿರುವ ಎಂಎಸ್‌ಪಿ 1735 ರೂ. ಅದೇ ರೀತಿ ಬಾರ್ಲಿಗೆ 1785 ರೂ. ಎಂಎಸ್‌ಪಿ ಘೋಷಿಸಬೇಕಿತ್ತು. ಆದರೆ ಪ್ರಕಟಿಸಿದ್ದು 1410ರೂ. ಮಾತ್ರ.

ಇನ್ನು ಕೃಷಿ ವೆಚ್ಚಗಳು ಮತ್ತು ಬೆಲೆಗಳ ಆಯೋಗ

ಪುಟ 4 ನೋಡಿ

ಬಡವರ ಪರ ಎಂಬ ಸೋಗು, ಕಾರ್ಮಿಕರಿಗೆ ಒಟ್ಟೊಟ್ಟಿಗೇ ಮೋಸ ಮತ್ತು ಶೋಷಣೆ: ಸಿಐಟಿಯು

ಐಕ್ಯ ಪ್ರತಿಭಟನೆ ಮತ್ತು ಹೋರಾಟ ನಡೆಸಲು ಕಾರ್ಮಿಕರಿಗೆ ಕರೆ

2018-19ರ ಕೇಂದ್ರ ಬಜೆಟ್‌ನ್ನು ಪ್ರಾಥಮಿಕ ಪರೀಕ್ಷಣೆಗೆ ಒಳಪಡಿಸಿದರೆ ಅದೊಂದು ಮೋಸದ ಕಸರತ್ತು ಎಂಬುದು ಕಾಣಬರುತ್ತದೆ, ಆದರೆ ಅದನ್ನು ಜನಗಳನ್ನು ದಾರಿ ತಪ್ಪಿಸಲು ಮತ್ತು ಗೊಂದಲಕ್ಕೆ ತಳ್ಳುವಂತೆ ಬಹಳ ಜಾಗರೂಕತೆಯಿಂದ ಪ್ರಸ್ತುತ ಪಡಿಸಲಾಗಿದೆ. ವಾಸ್ತವವಾಗಿ ಇದು ಕಾರ್ಮಿಕ-ವಿರೋಧಿಯಾಗಿರುವ, ಜನ-ವಿರೋಧಿಯಾಗಿರುವ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳಿಗೂ ಮಾರಕವಾಗಿರುವ ಕಸರತ್ತು ಎಂದು ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಖಂಡಿಸಿದೆ.

ಜಿಎಸ್‌ಟಿ ನಂತರದ ಪರೋಕ್ಷ ತೆರಿಗೆಗಳ ಹೊರೆಯಿಂದ ನರಳುತ್ತಿರುವ ಕೋಟ್ಯಂತರ ಜನರಿಗೆ ಏನೇನೂ ಪರಿಹಾರ ನೀಡದ ಈ ಬಜೆಟ್ ದೊಡ್ಡ ಉದ್ದಿಮೆದಾರರಿಗೆ ಮಾತ್ರ ಬಹಳ ಉದಾರವಾಗಿದೆ. ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳನ್ನು ಬೆಂಬಲಿಸುವ ಹೆಸರಲ್ಲಿ ಈ ಬಜೆಟ್ 250 ಕೋಟಿ ರೂ.ಗಳಿಗಿಂತ ಹೆಚ್ಚು ವಹಿವಾಟು ಇರುವ ಕಂಪನಿಗಳಿಗೆ ತೆರಿಗೆ ದರವನ್ನು 25%ಕ್ಕೆ ಇಳಿಸಿದೆ. ಇದು ನಿಜವಾಗಿಯೂ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ ನೆರವಾಗುತ್ತದೆಯೇ ಅಥವ ಭಾರೀ ಕುಳಗಳು ಇವನ್ನು ಮೂಲೆಗೊತ್ತಲು ನೆರವಾಗುತದೆಯೇ ಎಂದು ಸಿಐಟಿಯು ಪ್ರಶ್ನಿಸಿದೆ.

ಇದರೊಂದಿಗೆ ಕಳೆದ ನಾಲ್ಕುವರ್ಷಗಳಲ್ಲಿ ಕಾಣ ಬಂದ ಕಾರ್ಪೊರೇಟ್-ಪರ ಓಟ ಈ ಬಜೆಟಿನಲ್ಲಿ ಮುಂದುವರೆದಿದೆ. ಆದರೂ ಸರಕಾರ ಇದನ್ನು ಬಡವರ-ಪರ ಬಜೆಟ್ ಎಂದು ಹೇಳುತ್ತಲೇ ಇದೆ ಎಂದು ಸಿಐಟಿಯು ವ್ಯಂಗ್ಯವಾಡಿದೆ.

ಈ ಕಾರ್ಪೊರೇಟ್-ಪರ ಓಟದಲ್ಲಿ ಕಾರ್ಮಿಕರ ಮೇಲೆ ಗುಲಾಮಗಿರಿ ಹೇರುವ ಪ್ರಯತ್ನ ಈ ಬಜೆಟಿನಲ್ಲೂ ಕಾಣುತ್ತದೆ. ಹಣಕಾಸು ಮಂತ್ರಿಗಳು 'ನಿಗದಿತ ಅವಧಿಯ ಉದ್ಯೋಗ' ಎಂಬುದನ್ನು ಎಲ್ಲ ವಲಯಗಳಿಗೂ ವಿಸ್ತರಿಸುವ ದೃಢನಿರ್ಧಾರದ ಪ್ರಸ್ತಾಪ ಮಾಡಲು ಎಳ್ಳಷ್ಟೂ ಮರೆತಿಲ್ಲ.

ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಕಲ್ಯಾಣವನ್ನು

ಪುಟ 4 ನೋಡಿ

ಬಡ ಮಹಿಳಾ ಕಾರ್ಮಿಕರು ಮತ್ತು ರೈತರಿಗೆ ಅವಮಾನ ಮಾಡುವ, ಸುಳ್ಳು ಭರವಸೆಗಳ ಮಹಿಳಾ–ವಿರೋಧಿ ಬಜೆಟ್–ಎಐಡಿಡಬ್ಲ್ಯುಎ

ಹಣಕಾಸು ಮಂತ್ರಿಗಳು ಮಂಡಿಸಿರುವ 2018–19ರ ಬಜೆಟ್ ಕೃಷಿ ಮತ್ತು ಗ್ರಾಮಿಣ ವಲಯ ಹಾಗೂ ಮಹಿಳಾ ಉದ್ಯೋಗ ಮತ್ತು ಆರೋಗ್ಯ ಈ ವರ್ಷದ ಬಜೆಟಿನ ಆದ್ಯತೆಗಳು ಎಂದು ಹೇಳಿಕೊಂಡರೂ, ವಾಸ್ತವವಾಗಿ ನಿರಾಸೆ ಉಂಟು ಮಾಡಿರುವ ಬಜೆಟ್ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಹೇಳಿದೆ.


ಜಿಡಿಪಿ ಬೆಳವಣಿಗೆಯನ್ನು ಹಿಗ್ಗಿಸಿ ಹೇಳುವ ಈ ಸರಕಾರ ತನ್ನ ಬಜೆಟ್ ವೆಚ್ಚದ ಪ್ರಮಾಣವನ್ನು ಕುಗ್ಗಿಸಿದೆ. ಇದಕ್ಕೆ ಅನುಸಾರವಾಗಿ ಲಿಂಗ ಬಜೆಟನ್ನು ಕೂಡ ಕುಗ್ಗಿಸಲಾಗಿದೆ. ಒಟ್ಟು ಬಜೆಟ್ ಖರ್ಚಿನಲ್ಲಿ ಲಿಂಗ ಬಜೆಟಿನ ಪ್ರಮಾಣ 2017–18ರ ಪರಿಷ್ಕೃತ ಅಂದಾಜಿಗೆ ಹೋಲಿಸಿದರೆ, 5.2%ದಿಂದ 4.9%ಕ್ಕೆ ಇಳಿದಿದೆ. ಮಹಿಳಾ ಮತ್ತು ಮಹಿಳಾ ಅಭಿವೃದ್ಧಿ ಇಲಾಖೆಗೆ ನೀಡಿರುವ ಹಣ 0.95% ದಿಂದ 1.%ಕ್ಕಷ್ಟೇ ಏರಿದೆ. ಇದು ದೇಶದ ಬಡ ಮಹಿಳಾ ಕಾರ್ಮಿಕರು ಮತ್ತು ರೈತರಿಗೆ ಮಾಡಿರುವ ಅವಮಾನವಲ್ಲದೆ ಬೇರೇನೂ ಅಲ್ಲ ಎಂದು ಅದು ಆಕ್ರೋಶ ವ್ಯಕ್ತಪಡಿಸಿದೆ.

ಬಜೆಟ್ ಭಾಷಣ ಮಹಿಳಾ ರೈತರ ಪರಿಸ್ಥಿತಿಯ ಬಗ್ಗೆ ಗಮನ ಕೇಂದ್ರೀಕರಿಸಿದರೂ ಒಟ್ಟು ಲಿಂಗ ಬಜೆಟಿನ 3.92% ಮಾತ್ರ ಮಹಿಳಾ ರೈತರಿಗಾಗಿ ಕೊಟ್ಟಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಕೇವಲ 0.63% ಹೆಚ್ಚಳ.

ಬಜೆಟ್ 22,000 'ಗ್ರಾಮೀಣ ಹಾಟ್'(ಸಂತೆ)ಗಳನ್ನು ರಚಿಸಲಾಗುವುದು, ಇವನ್ನು ರೈತರ ಉತ್ಪಾದನಾ ಸಂಸ್ಥೆಗಳು ಮತ್ತು ಮಹಿಳಾ ಸ್ವಯಂ–ಸೇವಾ ಗುಂಪುಗಳ ಮೂಲಕ ಮಾಡಲಾಗುವುದು ಎಂದು ಹೇಳಿದೆ. ಆದರೆ ಈ ದೊಡ್ಡ ಪ್ರಾಜೆಕ್ಟಿಗೆ ನೀಡಿರುವ ಹಣ ಅತ್ಯಲ್ಪ. ವಾಸ್ತವವಾಗಿ ಇದು ಸರಕಾರ ಹಾಕುವ ಆರಂಭಿಕ ಹಣ ಮಾತ್ರ, ವಾಸ್ತವವಾಗಿ ಕೃಷಿಯಲ್ಲಿ ಕಾರ್ಪೊರೇಟ್ ಹೂಡಿಕೆಗೆ ಅನುಕೂಲ ಮಾಡಿಕೊಡಲಷ್ಟೇ ಎಂಬುದು ಸ್ಪಷ್ಟ, ಈ ಮೂಲಕ ಸರಕಾರ ಮಹಿಳೆಯರನ್ನು ಜಾಗತಿಕ ಕೃಷಿ ಮೌಲ್ಯ ಸರಣಿಗಳಿಗೆ ಜೋಡಿಸುವ ಪ್ರಯತ್ನದಲ್ಲಿದೆ, ಇದು ಇನ್ನಷ್ಟು ಶೋಷಣೆಗೆ ದಾರಿ ಮಾಡಿಕೊಡಬಹುದು ಎಂಬ ಸಂದೇಹವನ್ನು ಎಐಡಿಡಬ್ಲ್ಯುಎ ವ್ಯಕ್ತಪಡಿಸಿದೆ.

ಎರಡನೆಯದಾಗಿ, ಉದ್ಯೋಗವನ್ನು, ಅದರಲ್ಲೂ ಮಹಿಳಾ ಉದ್ಯೋಗವನ್ನು ಹೆಚ್ಚಿಸುವುದಾಗಿ ಬಜೆಟ್ ಭಾಷಣ ಹೇಳಿದರೂ, ಇಲ್ಲಿಯೂ ಆ ಮಾತಿಗೆ ತಕ್ಕ ಹಣನೀಡಿಕೆ ಇಲ್ಲ, ಮನರೇಗಕ್ಕೆ ನೀಡಿದ ಹಣದಲ್ಲಿ ಏರಿಕೆಯಾಗಿಲ್ಲ, ಅದೇ ರೀತಿ ಅದರಲ್ಲಿನ ಲಿಂಗ ಬಜೆಟಿನ ಮೊತ್ತದಲ್ಲೂ ಏನೇನೂ ಏರಿಕೆ ಮಾಡಿಲ್ಲ. ಇನ್ನು ಬಹುಪಾಲು ಮಹಿಳೆಯರಿಗೆ ಉದ್ಯೋಗ ಕೊಡುವ ಸಣ್ಣ ಪ್ರಮಾಣದ ಉದ್ದಿಮೆಗಳಿಗೆ, ಮಧ್ಯಮ ಪ್ರಮಾಣದ ಉದ್ದಿಮೆಗಳೊಮದಿಗೆ ನೀಡಿರುವ ಹೆಚ್ಚಳ ಕೇವಲ 85 ಕೋಟಿ ರೂ.ಗಳಾದರೆ, ಕೌಶಲ್ಯ ಅಭಿವೃದ್ಧಿ ಯೋಜನೆಗೆ ವಾಸ್ತವವಾಗಿ 33 ಕೋಟಿ ರೂ. ಕಡಿತ ಮಾಡಲಾಗಿದೆ. ಬಹಳ ಅಬ್ಬರದ ಪ್ರಚಾರ ಕಂಡ ಉಜ್ವಲಾ ಯೋಜನೆಗೆ ಕೇವಲ 3.34 ಕೋಟಿ ರೂ. ಬೇಟಿ ಬಢಾವೊ, ಬೇಟಿ ಪಡಾವೊ ಸ್ಕೀಮಿಗೆ ಕೇವಲ 80ಕೋಟಿ ರೂ. ಹೆಚ್ಚಳ, ನಿರ್ಭಯ ನಿಧಿಗೆ ಏನೇನೂ ಹೆಚ್ಚಳವಿಲ್ಲ.

ಒಟ್ಟಿನಲ್ಲಿ, ಈ ಬಜೆಟ್ ದುಡಿಯುವ ವರ್ಗದ ಕುಟುಂಬಗಳ ಮೇಲಿನ ಹೊರೆಗಳನ್ನು ಹೆಚ್ಚಿಸುತ್ತದೆ, ಸಾಮಾಜಿಕ ಕಲ್ಯಾಣ ಕ್ರಗಳನ್ನು ಖಾಸಗೀಕರಿಸುತ್ತದೆ, ಈ ಮೂಲಕ ಮಹಿಳೆಯರ ಬದುಕಿನ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರುತ್ತದೆ. ಆದ್ದರಿಂದ ಎಲ್ಲ ಮಹಿಳಾ ಸಂಘಟನೆಗಳು ಒಟ್ಟಾಗಿ ಈ ಪ್ರಯತ್ನಗಳನ್ನು ಪ್ರತಿರೋಧಿಸಬೇಕು, ಎನ್‌ಡಿಎ ಸರಕಾರದ ನಿಜ ಹುನ್ನಾರಗಳನ್ನು ಬಯಲಿಗೆಳೆಯಬೇಕು ಎಂದು



ಎಐಡಿಡಬ್ಲ್ಯುಎ ಕರೆ ನೀಡಿದೆ.

27 ಲಕ್ಷ ಅಂಗನವಾಡಿ ನೌಕರರಿಗೆ ವಂಚನೆ

– ಫೆಬ್ರುವರಿ 2 ರಂದು ದೇಶಾದ್ಯಂತ ಎನ್‌ಡಿಎ ಪ್ರತಿಕೃತಿ ದಹನ

ಬಿಜೆಪಿಯ 2014ರ ಚುನಾವಣಾ ಪ್ರಣಾಳಿಕೆ "ಅಂಗನವಾಡಿ ನೌಕರರ ಕೆಲಸದ ಪರಿಸ್ಥಿತಿಗಳ ಪರಾಮರ್ಶೆ ಮತ್ತು ಪ್ರತಿಫಲದ ಹೆಚ್ಚಳ'ದ ಭರವಸೆ ನೀಡಿತ್ತು. ಆದರೆ ಈಗ ಆ ಸರಕಾರದ ಕೊನೆಯ ಬಜೆಟ್‌ನಲ್ಲೂ ಆ ಭರವಸೆಗಳನ್ನು ಈಡೇರಿಸುವ ಸೂಚನೆ ಇಲ್ಲ, ಮಾತ್ರವಲ್ಲ, ದೇಶದ 80 ಕೋಟಿ ಅಪೌಷ್ಟಿಕತೆಯಿಂದ ನರಳುತ್ತಿರುವ ಮಕ್ಕಳ ಮತ್ತು ಎರಡು ಕೋಟಿ ಗರ್ಭಿಣಿಯರ ಕ್ರಿಮಿನಲ್ ಉಪೇಕ್ಷೆ ಕಂಡು ಬಂದಿದೆ ಎಂದು ಅಖಿಲ ಭಾರತ ಅಂಗನವಾಡಿ ಕಾರ್ಮಿಕರು ಮತ್ತು ಸಹಾಯಕಿಯರ ಒಕ್ಕೂಟ ಆಕ್ರೋಶ ವ್ಯಕ್ತಪಡಿಸಿದೆ. 2011ರ ನಂತರ ಅರೆಕಾಲಿಕ ಇದ್ದ ಕೆಲಸಗಳು ಪೂರ್ಣಕಾಲಿಕವಾಗಿವೆ, ಆದರೆ ಪ್ರತಿಫಲಗಳ ಪ್ರಮಾಣ ಅಷ್ಟೇ ಇದೆ.

ಇದೇ ಜನವರಿ 17ರಂದು 60 ಲಕ್ಷ ಸ್ಕೀಮ್ ನೌಕರರ ಮುಷ್ಕರದ ನಂತರ ಕೂಡ ಈ ಕಾರ್ಪೊರೇಟ್–ಪರ ಸರಕಾರ ಬಡ, ಅಂಚಿಗೆ ತಳ್ಳಲ್ಪಟ್ಟ ವಿಭಾಗದ ಬಗ್ಗೆ ಸಂವೇದನಾ ಶೂನ್ಯವಾಗಿಯೇ ಉಳಿದಿದೆ.

ಸರಕಾರದ ಈ ಉಪೇಕ್ಷೆಯ ವಿರುದ್ಧ ಫೆಬ್ರುವರಿ 2ರಂದು ಎನ್‌ಡಿಎ ಪ್ರತಿಕೃತಿಗಳನ್ನು ಸುಟ್ಟು ತಮ್ಮ ಆಕ್ರೋಶವನ್ನು ದಾಖಲಿಸಬೇಕು ಮತ್ತು ಒಂದು ಅನಿರ್ದಿಷ್ಟ ಕಾಲದ ಧರಣಿಗೆ ಸಿದ್ಧವಾಗಬೇಕು ಎಂದು ಒಕ್ಕೂಟ ಅಂಗನವಾಡಿ ಕಾರ್ಮಿಕರಿಗೆ ಕರೆ ನೀಡಿದೆ.

ಪರಿಶಿಷ್ಟ ಜಾತಿಗಳ ಜನರ ಕಲ್ಯಾಣಕ್ಕೆ ಹೆಚ್ಚಿನ ಬಜೆಟ್ ಹಣ ನೀಡಿ

– ಡಿಎಸ್‌ಎಂಎಂ ಆಗ್ರಹ

ಪರಿಶಿಷ್ಟ ಜಾತಿಗಳ ಕಲ್ಯಾಣಕ್ಕೆ ಈ ಬಜೆಟ್ ಕೂಡ ಸಾಕಷ್ಟು ಹಣ ನೀಡಿಲ್ಲ ಎಂದು ದಲಿತ ಶೋಷಣ ಮುಕ್ತಿ ಮಂಚ್(ಡಿಎಸ್‌ಎಂಎಂ) ತೀವ್ರ ನಿರಾಸೆಯನ್ನು ವ್ಯಕ್ತಪಡಿಸಿದೆ. ಕಳೆದ ವರ್ಷ 52,000 ಕೋಟಿ ರೂ. ಇದ್ದದ್ದು ಈ ಬಾರಿ 56,000ಕ್ಕೆ ಏರಿದೆಯಷ್ಟೇ. ಪರಿಶಿಷ್ಟ ಜಾತಿಗಳ ಜನಗಳ ಉಪೇಕ್ಷೆಯಾಗದಿರಲಿ ಎಂದು ತಂದಿದ್ದ ಎಸ್‌ಸಿ ಎಸ್‌ಪಿ(ಪರಿಶಿಷ್ಟ ಜಾತಿ ಉಪಯೋಜನೆ)ಯನ್ನು ಈ ಸರಕಾರ ಹಿಂದಿನ ಬಜೆಟಿನಲ್ಲೇ ಕೈಬಿಟ್ಟಿತ್ತು. ಒಟ್ಟು ಬಜೆಟ್ ವೆಚ್ಚದಲ್ಲಿ 4.5%ವನ್ನಾದರೂ ಪರಿಶಿಷ್ಟ ಜಾತಿಗಳ ಕಲ್ಯಾಣಕ್ಕೆ ಕೊಡಬೇಕು ಎಂಬ ನರೇಂದ್ರ 'ಜಾಧವ್ ಸಮಿತಿಯ ಶಿಫಾರಸನ್ನೂ ಇದು ಪಾಲಿಸಿಲ್ಲ. ಈ ಬಜೆಟಿನಲ್ಲಿ ಕೇವಲ 3.8% ಕೊಟ್ಟಿದೆ. ಅಲ್ಲದೆ ಕೊಟ್ಟ ಹಣವನ್ನೂ ಸರಿಯಾಗಿ ಉಪಯೋಗಿಸದೆ ಬೇರೆ ಬಾಬ್ತುಗಳಿಗೆ ತಿರುಗಿಸಲಾಗುತ್ತಿದೆ. ಈ ಬಜೆಟ್ ಕೂಡ ನಿಗದಿ ಮಾಡಿದ ಹಣವನ್ನು ಪರಿಶಿಷ್ಟ ಜಾತಿಗಳ ಜನಗಳ ಅಭಿವೃದ್ಧಿ ಮತ್ತು ಕಲ್ಯಾಣಕ್ಕೇ ಬಳಸಲಾಗುವುದು ಎಂಬ ಭರವಸೆಯನ್ನು ಕೊಟ್ಟಿಲ್ಲ ಎಂದಿರುವ ಡಿಎಸ್‌ಎಂಎಂ ಪರಿಶಿಷ್ಟ ಜಾತಿ ಜನಸಂಖ್ಯೆಗೆ ಅನುಗುಣವಾಗಿ ವೆಚ್ಚದ ಪ್ರಮಾಣವನ್ನು ಹೆಚ್ಚಿಸಬೇಕು, ಮತ್ತು ಅದನ್ನು ಈ ವಿಭಾಗದ ಕಲ್ಯಾಣಕ್ಕೆ ಮಾತ್ರ ಬಳಸುವಂತೆ ಕಾನೂನು ತರಬೇಕು ಎಂದು ಆಗ್ರಹಿಸಿದೆ.

'ಬಡವರ ಪರ' ಸೋಗು ಕಾರ್ಮಿಕರಿಗೆ ಮೋಸ, ಶೋಷಣೆ

ಪುಟ 3 ರಿಂದ

ಸಾರ್ವತ್ರಿಕಗೊಳಿಸುವ ಬಗ್ಗೆ ಭರ್ಜರಿ ಮಾತುಗಳಿದ್ದರೂ ಸರಕಾರದ ಪ್ರಮುಖ ಯೋಜನೆಗಳಾದ ರಾಷ್ಟ್ರೀಯ ಆರೋಗ್ಯ ಮಿಶನ್, ಮಧ್ಯಾಹ್ನದ ಊಟ, ಐಸಿಡಿಎಸ್ ಇತ್ಯಾದಿಗಳಲ್ಲಿ ಕೆಲಸ ಮಾಡುವ ಒಂದು ಕೋಟಿಯಷ್ಟು ಕಾರ್ಮಿಕರ ದೀರ್ಘಕಾಲದ ಬೇಡಿಕೆಗಳನ್ನು ಪರಿಗಣಿಸುವಲ್ಲಿ ನಕಾರಾತ್ಮಕ ನಿಲುವು ಮುಂದುವರೆದಿದೆ, ಅವರಿಗೆ ಕನಿಷ್ಟ ಕೂಲಿ ಮತ್ತಿತರ ಕನಿಷ್ಟ ಸಾಮಾಜಿಕ ಭದ್ರತೆಯನ್ನು ಕೊಡಲೂ ಈ ಬಜೆಟ್ ನಿರಾಕರಿಸಿದೆ.

ಉದ್ಯೋಗ ನಿರ್ಮಾಣದ ಹೆಸರಲ್ಲೂ ಕಾರ್ಪೊರೇಟ್‌ಗಳಿಗೆ ರಿಯಾಯ್ತಿ ಉದ್ಯೋಗ ನಿರ್ಮಾಣದ ಬದಲು ಉದ್ಯೋಗ ನಾಶ

ಉದ್ಯೋಗದ ಬಗ್ಗೆ ಈ ಬಜೆಟ್ ಹೇಳಿರುವುದರಲ್ಲೂ ಸತ್ಯಾಂಶವಿಲ್ಲ. ಅಧಿಕೃತ ಅಂದಾಜುಗಳ ಪ್ರಕಾರವೂ ಉದ್ಯೋಗ ನಿರ್ಮಾಣ ನಕಾರಾತ್ಮಕ ವಾಗಿದೆ, ಕಾರ್ಖಾನೆ/ಉದ್ದಿಮೆಗಳ ಮುಚ್ಚಿಕೆಗಳಿಂದಾಗಿ ಉದ್ಯೋಗ ನಷ್ಟಗಳೇ ಆಗಿವೆ ಎಂದು ಕಾಣ ಬರುತ್ತಿದ್ದರೂ ಹಣಕಾಸು ಮಂತ್ರಿಗಳು ಔಪಚಾರಿಕ ವಲಯದಲ್ಲಿ 70 ಕೋಟಿ ಉದ್ಯೋಗ ನಿರ್ಮಾಣವಾಗಿದೆ ಎಂದು 'ಕಂಡು ಹಿಡಿದ' ಒಂದು 'ಸ್ವತಂತ್ರ ಅಧ್ಯಯನ'ವನ್ನೇ ಎತ್ತಿ ಹಿಡಿದಿರುವುದು ಜನಗಳನ್ನು ದಾರಿ ತಪ್ಪಿಸುವ ಇನ್ನೊಂದು ಮೋಸದ ಪ್ರಯತ್ನ ಮತ್ತು ಲಕ್ಷಾಂತರ ನಿರುದ್ಯೋಗಿಗಳ ಕ್ರೂರ ಅಪಹಾಸ್ಯ ಎಂದು ಸಿಐಟಿಯು ಹೇಳಿದೆ.


ವಾಸ್ತವವಾಗಿ ಈ ಸರಕಾರ ಉದ್ಯೋಗ ನಿರ್ಮಾಣಕ್ಕೆ ಪ್ರೋತ್ಸಾಹದ ಹೆಸರಿನಲ್ಲೂ ಕಾರ್ಪೊರೇಟ್‌ಗಳಿಗೇ ರಿಯಾಯ್ತಿಗಳನ್ನು ಕೊಡುತ್ತಿದೆ– ಹೊಸ ಕಾರ್ಮಿಕರ ಭವಿಷ್ಯನಿಧಿ ವಂತಿಗೆಯನ್ನು ಕೊಡುವ ಹೆಸರಿನಲ್ಲಿ, ಅವರಿಗೆ ನೀಡುವ ವೇತನಗಳ ಮೇಲೆ ಮಾಲಕರಿಗೆ ತೆರಿಗೆ ರಿಯಾಯ್ತಿ ಇತ್ಯಾದಿ ಹೆಸರುಗಳಲ್ಲಿ. ಇದು ಉದ್ಯೋಗ ನಿರ್ಮಾಣವೇನೂ ಮಾಡದೆ ಮಾಲಕರಿಗಾಗಿ ದೇಶದ ಖಜಾನೆಯ ಸೋರಿಕೆ ಮಾಡುವಲ್ಲಿ ಶಾಮೀಲಾಗುವುದಲ್ಲದೆ ಬೇರೇನೂ ಅಲ್ಲ. ಸಾಲದ್ದಕ್ಕೆ ಐದು ವರ್ಷಗಳಿಗಿಂತ ಹೆಚ್ಚು ಕಾಲ ಖಾಲಿಯಿರುವ ಕೇಂದ್ರ ಸರಕಾರದ ಇಲಾಖೆಗಳ ಹುದ್ದೆಗಳನ್ನು ರದ್ದು ಮಾಡುವ ಇತ್ತೀಚಿನ ಪ್ರಯತ್ನ ಈ ಸರಕಾರ ಉದ್ಯೋಗ ನಿರ್ಮಾಣ ಮಾಡುವ ಬದಲು ಅವನ್ನು ಕೊಲ್ಲುವುದರಲ್ಲೇ ತೊಡಗಿದೆ ಎಂಬುದನ್ನು ತೋರಿಸುತ್ತದೆ.

'ಮೇಕ್ ಇಂಡಿಯಾ'ದ ಮರೆಯಲ್ಲಿ 'ಭಾರತವನ್ನು ನಾಶಪಡಿಸಿ' ಓಟ

ರಕ್ಷಣಾ ಉತ್ಪಾದನಾ ವಲಯದಲ್ಲೂ ಸಾರ್ವಜನಿಕ ವಲಯದಲ್ಲಿರುವ ದೇಶಿ ಉತ್ಪಾದನಾ ಸಾಮರ್ಥ್ಯವನ್ನು ನಾಶ ಮಾಡುತ್ತಿರುವ ಈ ಸರಕಾರ ಸ್ವಾವಲಂಬನೆಯ ಭರ್ಜರಿ ಮಾತುಗಳನ್ನಾಡುತ್ತಿದೆ. ಅದೇ ರೀತಿಯಲ್ಲಿ ರೈಲು ಜಾಲವನ್ನು ವಿಸ್ತರಿಸುವ ಹೆಸರಲ್ಲಿ ಅದರ ಪೂರ್ಣ ಖಾಸಗೀಕರಣದ ಪ್ರಕ್ರಿಯೆ ಭರದಿಂದ ಸಾಗಿದೆ. ಇಲ್ಲಿ ಎಲ್ಲದರಲ್ಲೂ ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸುವ ಬದಲು ಅದನ್ನು ಬುಡಮೇಲು ಮಾಡಿ ವಿದೇಶೀ ಮಂದಿಗೆ ಅನುಕೂಲ ಮಾಡಿಕೊಡುವ ಕ್ರಮಗಳನ್ನೇ ಕೈಗೊಳ್ಳಲಾಗುತ್ತಿದೆ.

ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ಮಾರಾಟ/ ಖಾಸಗೀಕರಣದಿಂದ ಈ ವರ್ಷ 80,000 ಕೋಟಿ ರೂ.ಗಳನ್ನು ಸಂಗ್ರಹಿಸುವ ಗುರಿ ಇಟ್ಟಕೊಂಡಿರುವ ಈ ಬಜೆಟ್‌ನಲ್ಲಿ ಕೂಡ 'ಮೇಕ್ ಇನ್ ಇಂಡಿಯಾ'ದ ಮರೆಯಲ್ಲಿ ಸರಕಾರ ತನ್ನ 'ಭಾರತವನ್ನು ನಾಶಪಡಿಸಿ' ಓಟವನ್ನು ಮುಂದುವರೆಸಿದೆ.

ಆದ್ದರಿಂದ ಭಾರತದ ಕಾರ್ಮಿಕ ವರ್ಗ ಈ ಸರಕಾರ ಮೋಸ ಮತ್ತು ಶೋಷಣೆಯನ್ನು ಒಟ್ಟೊಟ್ಟಿಗೇ ನಡೆಸುತ್ತಿರುವ ಈ ಹುನ್ನಾರಗಳ ವಿರುದ್ಧ ಐಕ್ಯ ಪ್ರತಿಭಟನೆ ನಡೆಸಬೇಕು ಮತ್ತು ಹೋರಾಡಬೇಕು ಎಂದು ಸಿಐಟಿಯು ಕರೆ ನೀಡಿದೆ.



ವ್ಯಂಗ್ಯಚಿತ್ರ ಕೃಪೆ: ನವತೆಲಂಗಾಣ

ರೈತರಿಗೆ ವಿಶ್ವಾಸಘಾತ ಬಗೆವ ಸುಳ್ಳುಗಳ, ವಂಚನೆಗಳ ಕಂತೆ

ಪುಟ 3 ರಿಂದ

ಲೆಕ್ಕ ಹಾಕುವ ಉತ್ಪಾದನಾ ವೆಚ್ಚಗಳೂ ಸರಿಯಾಗಿಲ್ಲ. ಅವು ರಾಜ್ಯ ಸರಕಾರಗಳು ಮಾಡುವ ಲೆಕ್ಕಾಚಾರಗಳನ್ನು ಗಣನೆಗೇ ತಗೊಳ್ಳುವುದಿಲ್ಲ. ಇದನ್ನು ರೈತ ಸಂಘಟನೆಗಳು ಹಲವು ಬಾರಿ ಸರಕಾರದ ಗಮನಕ್ಕೆ ತಂದಿವೆ.

ಇದಲ್ಲದೆ ಈ ಪ್ರಕಟಿತ ಎಂಎಸ್‌ಪಿಗಳು ಔಪಚಾರಿಕವಾಗಿಯೇ ಉಳಿಯುತ್ತವೆ, ಏಕೆಂದರೆ ಈ ಬೆಲೆಗಳಲ್ಲಿ ಖರೀದಿಸುವ ವ್ಯವಸ್ಥೆ ದೇಶದ ಹೆಚ್ಚಿನ ಭಾಗಗಳಲ್ಲಿ ಇಲ್ಲ. ಆದರೆ ಈ ದಿಕ್ಕಿನಲ್ಲಿ ಸರಕಾರ ಏನೂ ಮಾಡಿಲ್ಲ, ಮಾಡುವ ಸೂಚನೆಗಳೂ ಇಲ್ಲ ಎಂದು ಎಐಕೆಎಸ್ ಹೇಳಿದೆ.

ಎರಡನೆಯದಾಗಿ, ರೈತಾಪಿ ಜನಗಳ ಸಾಲಹೊರೆಗಳಿಂದ ಮುಕ್ತಿಯ ಬಗ್ಗೆ ಯಾವುದೇ ಧೋರಣೆಯನ್ನು ಪ್ರಕಟಿಸಲು ಬಜೆಟ್ ನಿರಾಕರಿಸಿದೆ. ಸಾಲ ಸೌಲಭ್ಯಗಳಲ್ಲಿ 10% ಹೆಚ್ಚಳ ಮಾಡಿರುವುದಾಗಿ ಹೇಳಲಾಗಿದೆ. ಆದರೆ ಇದು ಬಜೆಟಿನ ಭಾಗವಲ್ಲ. ಕೃಷಿ ಸಾಲ ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರಿ ಹಾಗೂ ಗ್ರಾಮಿಣ ಬ್ಯಾಂಕುಗಳ ಮೂಲಕ ವಿತರಿಸಲಾಗುವುದು ಎನ್ನಲಾಗಿದೆ. ಆದರೆ ಇದು ವೆಚ್ಚಗಳಲ್ಲಿನ ಹೆಚ್ಚಳ, ಪ್ರಾದೇಶಿಕ ಮತ್ತು ಸಾಂಸ್ಥಿಕ ಅಸಮತೋಲಗಳು ಹಾಗೂ ನೋಟುರದ್ಧತಿ ಕ್ರಮದಲ್ಲಿ ಸಹಕಾರಿಗಳು ಕುಸಿದು ಬೀಳುವಂತಾಗಿರುವುದು ಈ ಯಾವ ಅಂಶಗಳನ್ನೂ ಗಣನೆಗೆ ತಗೊಂಡಿಲ್ಲ. ಹಣಕಾಸು ಮಂತ್ರಿಗಳು ಗೇಣಿ ರೈತರಿಗೆ ಸಾಲ ಪಡೆಯುವ ಅಸಮರ್ಥತೆಯ ಬಗ್ಗೆಯೇನೋ ಹೇಳಿದ್ದಾರೆ, ಆದರೆ ಇದಕ್ಕೆ ಪರಿಹಾರವೇನು ಎಂಬ ಬಗ್ಗೆ ಏನೂ ಹೇಳಿಲ್ಲ ಎಂದು ಎಐಕೆಎಸ್ ಅಭಿಪ್ರಾಯ ಪಟ್ಟಿದೆ.

ಮೂರನೆಯದಾಗಿ, ಕೃಷಿ ಕೂಲಿಕಾರರು ಮತ್ತು ಗ್ರಾಮಿಣ ಬಡವರ ಆದಾಯಗಳು ಕುಸಿಯುತ್ತಿವೆ, ಹೆಚ್ಚೆಚ್ಚು ಪ್ರಮಾಣದಲ್ಲಿ ಕೆಲಸ ಅರಸಿಕೊಂಡು ವಲಸೆ ಹೋಗಬೇಕಾಗಿ ಬರುತ್ತಿದೆ. ಇವರಿಗೆ ಈ ಬಜೆಟ್‌ನಲ್ಲಿ ಏನೇನೂ ಇಲ್ಲ. ಮನರೇಗಕ್ಕೆ ನೀಡಿರುವ ಮೊತ್ತ ಕಳೆದ ವರ್ಷದ ಪರಿಷ್ಕೃತ ಅಂದಾಜಿನಷ್ಟೇ ಅಂದರೆ 55,000 ಕೊಟಿ ರೂ. ನಲ್ಲೇ ನಿಂತಿದೆ. ವಾಸ್ತವವಾಗಿ ಈ ಕಾಯ್ದೆಯ ಸರಿಯಾದ ಜಾರಿಯಾಗಬೇಕಾದರೆ, ಕನಿಷ್ಟ 80,000 ಕೋಟಿ ರೂ.ಗಳು ಬೇಕು. ಅಲ್ಲದೆ, 56% ಕೂಲಿಕಾರರ ಕೂಲಿ ಪಾವತಿಯಾಗದೆ ಬಾಕಿ ಇದೆ, ಕೆಲಸ ಕೇಳಿದವರಲ್ಲಿ 15% ಮಂದಿಗೆ ಕೆಲಸ ಕೊಡಿಸಲಾಗಿಲ್ಲ. ಕೇಂದ್ರವು ರಾಜ್ಯಗಳಿಗೆ ಇದಕ್ಕಾಗಿ ಕೊಡುವ ಹಣದಲ್ಲಿ ತೀವ್ರ ಕಡಿತವಾಗಿದೆ. ಈ ಎಲ್ಲ ಸಮಸ್ಯೆಗಳನ್ನು ಪರಿಶೀಲಿಸುವ ಯಾವ ಪ್ರಸ್ತಾವವೂ ಇಲ್ಲ; ಗ್ರಾಮೀಣ ಪ್ರದೇಶಗಳಲ್ಲಿ 'ಗರಿಷ್ಟ ಜೀವನಾಧಾರ ಅವಕಾಶ' ಗಳನ್ನು ಕಲ್ಪಿಸುವ ಮತ್ತು 321 ಕೋಟಿ ವ್ಯಕ್ತಿದಿನಗಳ ಉದ್ಯೋಗ ಕಲ್ಪಿಸುವ ಮಾತುಗಳೇನೋ ಇವೆ, ಆದರೆ ಅದಕ್ಕೆ ಅನುಗುಣವಾದ ಮೂರ್ತ ಪ್ರಸ್ತಾವಗಳೇನೂ ಈ ಬಜೆಟಿನಲ್ಲಿ ಇಲ್ಲ.

ರೈತಾಪಿ ಜನಗಳನ್ನು ಕುರಿತಂತೆ ಬಿಜೆಪಿ ನೇತೃತ್ವದ ಸರಕಾರದ ಈ ಸಂವೇದನಾಶೂನ್ಯ ನಿಲುವಿನ ವಿರುದ್ಧ ರೈತರು ದನಿಯೆತ್ತುವಂತೆ ಮಾಡಬೇಕು ಎಂದು ಎಐಕೆಎಸ್ ಕರೆ ನೀಡಿದೆ.

ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರ 3 ನೇ ರಾಜ್ಯ ಸಮ್ಮೇಳನ

'ಪತ್ಯೇಕ ಟವರ್ ಕಂಪನಿ ಮೂಲಕ ಖಾಸಗೀಕರಣದ ಹುನ್ನಾರ'

ವರದಿ : ಶಬರೀಶ್ ಕುಮಾರ್

ಕರ್ನಾಟಕ ಸ್ಟೇಟ್ ಬಿಎಸ್‌ಎನ್‌ಎಲ್ ನಾನ್ ಪರ್ಮನೆಂಟ್ ವರ್ಕರ್ಸ್ ಯೂನಿಯನ್(ಸಿಐಟಿಯು) ವಿನ 3 ನೇ ರಾಜ್ಯ ಸಮ್ಮೇಳನ ಮೈಸೂರಿನ ಆರ್‌ಟಿಟಿಸಿ ಸಭಾಂಗಣದಲ್ಲಿ ಜನವರಿ 26 ರ ಬೆಳ್ಳಿಗ್ಗೆ ರಾಷ್ಟ್ರ ಧ್ವಜ ಹಾಗೂ ಸಿಐಟಿಯು ಧ್ವಜಾರೋಹಣದೊಂದಿಗೆ ಆರಂಭಗೊಂಡಿತು. ರಾಷ್ಟ್ರಧ್ವಜವನ್ನು ಸಂಗಾತಿ ಸಿ.ಕೆ. ಗುಂಡಣ್ಣ ಹಾಗೂ ಸಿಐಟಿಯು ಧ್ವಜಾರೋಹಣವನ್ನು ಬಾಲಾಜಿರಾವ್ ನೆರವೇರಿಸಿದರು ನಂತರ ಗಣ್ಯರೊಂದಿಗೆ ಪ್ರತಿನಿಧಿಗಳು ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಸಮ್ಮೇಳನದ ಉದ್ಘಾಟನೆಯನ್ನು ದೀಪ ಬೆಳಗಿಸುವುದರ ಮೂಲಕ ಬಿಎಸ್‌ಎನ್‌ಎಲ್‌ಇಯುನ ಹಿರಿಯ ಮುಂದಾಳು ಹಾಗೂ ಆಲ್ ಇಂಡಿಯಾ ಕ್ಯಾಜುವೆಲ್ ಅಂಡ್ ಕಾಂಟ್ರಾಕ್ಟ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷರಾದ ಕಾಮ್ರೇಡ್ ವಿ.ಎನ್.ಎಸ್. ನಂಬೂದ್ರಿ ಉದ್ಘಾಟಿಸಿ ಮಾತನಾಡಿದರು. ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಎನ್ನುವ ಘೋಷಣೆಯೊಂದಿಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ಸರಕಾರ ದೇಶದ ಕಾರ್ಮಿಕ ವರ್ಗದ ಹಕ್ಕುಗಳ ಮೇಲೆ ಮತ್ತಷ್ಟು ದಾಳಿಗಳನ್ನು ಹರಿಯಬಿಡುವ ಮೂಲಕ ಇದೇ ಮೇ 25ಕ್ಕೆ ಮೂರು ವರ್ಷಗಳನ್ನು ಪೂರೈಸಿ ನಾಲ್ಕನೇ ವರ್ಷಕ್ಕೆ ಕಾಲಿಟ್ಟಿದೆ. ಈಗಾಗಲೇ ನೋಟು ಅಮಾನ್ಯೀಕರಣದ ಮೂಲಕ ದುಡಿಯುವ ವರ್ಗದ ಕೆಲಸಗಳನ್ನು ಕಿತ್ತುಕೊಂಡು ಶ್ರೀಮಂತರನ್ನು ಸಂತೃಪ್ತಿಗೊಳಿಸಿದ್ದ ಮೋದಿ ಆಡಳಿತ ಇದೀಗ ದಿನ ನಿತ್ಯ ಎಂಬಂತೆ ಹೊಸ ಹೊಸ ದಾಳಿಗಳನ್ನು ಆರಂಭಿಸಿದೆ. ಮೇಲೆ ಹೇಳಿದಂತೆ ಕಟ್ಟಡ ಕಾರ್ಮಿಕರ ಬದುಕಿಗೆ ರಕ್ಷಣೆಯಾಗಿದ್ದ ಹತ್ತಾರು ಕಾರ್ಮಿಕ ಕಾನೂನುಗಳನ್ನು ಕಾರ್ಪೋರೇಟ್ ಪರವಾಗಿ ಬದಲಾಯಿಸಿ ಶ್ರಮಜೀವಿಗಳ ಬದುಕಿನ ಮೇಲೆ ಗದಾಪ್ರಹಾರವನ್ನೇ ಆರಂಭಿಸಿದೆ. ದೇಶದ ಹೆಮ್ಮೆಯ ಮತ್ತು ರಕ್ಷಣಾ ವಲಯದ ಬಿಇಎಂಎಲ್ ಶೇರುಗಳನ್ನು ಹಿಂಪಡೆದು ಖಾಸಗೀಕರಿಸುವ ಪ್ರಕ್ರಿಯೆ ಚಾಲನೆ ನೀಡಿದೆ. ಇದೀಗ ಬಿಎಸ್‌ಎನ್‌ಎಲ್ ಸಂಸ್ಥೆಯನ್ನು ಪ್ರತೇಕ ಮೊಬೈಲ್ ಟವರ್ ಕಾರ್ಪೋರೇಷನ್ ಮೂಲಕ ಖಾಸಗೀಕರಿಸುವ ಹುನ್ನಾರ ನಡೆಸಿದೆ ಇದರ ವಿರುದ್ಧ ಸಂಸ್ಥೆಯ ಅಧಿಕಾರಿಗಳು, ಗುತ್ತಿಗೆ ಕಾರ್ಮಿಕರು ಹಾಗೂ ಕಾಯಂ ನೌಕರರು ಹೋರಾಟದ ಹಾದಿ ತುಳಿದಿದ್ದಾರೆ. ಈ ಖಾಸಗೀಕರಣದ ನೇರ ಪರಿಣಾಮ ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವ ಲಕ್ಷಾಂತರ ಜನ ಬದುಕನ್ನೇ ನಾಶಪಡಿಸಲಿದೆ ಎಂದು ಆರೋಪಿಸಿದರು.

ಅಖಿಲ ಪ್ರದಾನ ಕಾರ್ಯದರ್ಶಿ ಅನಿಮೇಶ್ ಮಿಶ್ರಾ, ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ, ಅಖಿಲ ಭಾರತ ಸಂಘಟನಾ ಕಾರ್ಯದರ್ಶಿಗಳು ಮತ್ತು ಬೆಂಗಳೂರು ಟೆಲಿಕಾಂ ಜಿಲ್ಲಾ ಬಿಎಸ್‌ಎನ್‌ಎಲ್‌ಇಯು ಪ್ರಧಾನ ಕಾರ್ಯದರ್ಶಿಯಾದ ಸುದರ್ಶನ, ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಸಿ.ಕೆ. ಗುಂಡಣ್ಣ ವಹಿಸಿದ್ದರು. ವಲಯ ಖಜಾಂಚಿ ಕೇಶವ್ ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಬಾಲಾಜಿರಾವ್ ಹಾಗೂ ಎಂಪ್ಲಾಯೀಸ್ ಯೂನಿಯನ್ ಜಿಲ್ಲಾ ಕಾರ್ಯದರ್ಶಿ ಮಹಾದೇವಪ್ಪ ಗುತ್ತಿಗೆ ಕಾರ್ಮಿಕ ಸಂಘದ ಅಖಿಲ ಭಾರತ ಸಂಘಟನಾ ಕಾರ್ಯದರ್ಶಿ ಶಬರೀಶ್ ಕುಮಾರ್, ಜಿಲ್ಲಾ ಕಾರ್ಯದರ್ಶಿ ರಾಮಲಿಂಗು ಸೇರಿದಂತೆ ಇತರೆಯವರು ಉಪಸ್ಥಿತರಿದ್ದರು.



ಈ ಅವಧಿಯಲ್ಲಿ ನಮ್ಮನ್ನು ಅನಿರೀಕ್ಷಿತ ಹಾಗೂ ಅಕಾಲಿಕವಾಗಿ ಆಗಲಿದ ನಮ್ಮ ಸಂಘದ ಸ್ಥಾಪಕ ಅಧ್ಯಕ್ಷರಾಗಿದ್ದ ಮತ್ತು ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿ ಹಾಗೂ ರಾಜ್ಯ ಪ್ರದಾನ ಕಾರ್ಯದರ್ಶಿಯಾಗಿದ್ದ ಎಸ್. ಪ್ರಸನ್ನಕುಮಾರ್ ಅವರಿಗೆ ಹಾಗೂ ದೆಹಲಿಯಲ್ಲಿ ಅಸುನೀಗಿದ ಬೀದರನ ಮುಸ್ತಾಫಾ ಅವರಿಗೆ ಈ ಸಮ್ಮೇಳನ ವಿಶೇಷ ಶ್ರದ್ಧಾಂಜಲಿ ಸಲ್ಲಿಸಿತ್ತು ಮಾತ್ರವಲ್ಲ ಸಮ್ಮೇಳನದ ವೇದಿಕೆಗೆ ಪ್ರಸನ್ನಕುಮಾರ್ ಹಾಗೂ ಸಭಾಂಗಣಕ್ಕೆ ಮುಷ್ತಾಪ ಹೆಸರನಿಟ್ಟು ಗೌರವ ಸಲ್ಲಿಸಿತು.

2012 ಅಕ್ಟೋಬರ್ 21 ರಂದು ಬೆಳಗಾವಿಯಲ್ಲಿ ನಡೆದ ಎರಡನೇ ಸಮ್ಮೇಳನದ ಬಳಿಕಾ ಮೈಸೂರಿನಲ್ಲಿ ದೀರ್ಘ ಅವಧಿಯ ನಂತರ ಈ ಸಮ್ಮೇಳನವನ್ನು ಸಂಘಟಿಸಲಾಗಿತ್ತು. ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶದ ಮಂಡಿಸಿದ ವರದಿಯ ಮೇಲೆ 20 ಪ್ರತಿನಿಧಿಗಳು 17 ಜಿಲ್ಲೆಗಳನ್ನು ಪ್ರತಿನಿಧಿಸಿ ಮಾತನಾಡಿದರು. ನಂತರದಲ್ಲಿ ಸಮ್ಮೇಳನ ಈ ಕೆಳಕಂಡ ತೀರ್ಮಾನಗಳನ್ನು ಕೈಗೊಂಡಿತು.





1. ಕೂಡಲೇ ಎಲ್ಲಾ ಜಿಲ್ಲಾ ಸಮ್ಮೇಳನಗಳನ್ನು ನಡೆಸಿ ಜಿಲ್ಲಾ ಸಮಿತಿಗಳನ್ನು ರಚಿಸುವುದು.
2. 2018 ರಲ್ಲಿ ರಾಜ್ಯ ಎಲ್ಲಾ ಜಿಲ್ಲೆಗಳಲ್ಲಿರುವ ಕಾರ್ಮಿಕರನ್ನು ಸದಸ್ಯತ್ವ ನೋಂದಣಿ ಮಾಡುವುದು
3. ರಾಜ್ಯ ಪ್ರತಿ ದೂರವಾಣಿ ಕೇಂದ್ರಗಳಲ್ಲಿ ಯೂನಿಯನ್ ಶಾಖೆಗಳನ್ನು ರಚಿಸುವುದು
4. ಸಿಐಟಿಯು ಹಾಗೂ ಬಿಎಸ್‌ಎನ್‌ಎಲ್ ಜೊತೆ ಸಮನ್ವಯತೆ ಸಾಧಿಸುವುದು ಮತ್ತು ಅವುಗಳು ಕಾಲಕಾಲಕ್ಕೆ ಕರೆ ನೀಡುವ ಎಲ್ಲಾ ಹೋರಾಟದ ಕರೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸುವುದು.
5. ಕಾರ್ಮಿಕ ಬೇಡಿಕೆಗಳ ಆಧಾರದಲ್ಲಿ ಮಾರ್ಚ 15 ರಂದು 'ಸಿಜಿಎಂ ಕಚೇರಿ ಚಲೋ' ಹಾಗೂ ಅದಕ್ಕಿಂತ ಪೂರ್ವದಲ್ಲಿ ಫೆಬ್ರವರಿ 7 ರಂದು ಜಿಎಂ ಆಫೀಸ್ ಚಲೋ ಸಂಘಟಿಸುವುದು.
6. ಜನವರಿ 30 ರ ಸೌಹಾರ್ಧ ಮಾನವ ಸರಪಳಿ ಯಶಸ್ವಿಗೊಳಿಸುವುದು.

ಆಕರ್ಷಕ 'ವಾಕಾಥಾನ್

BSNL NON PERMANENT WORKERS UNION 3 ನೇ ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸಿದ ನೂರಕ್ಕೂ ಹೆಚ್ಚಿನ ಪ್ರತಿನಿಧಿಗಳು ಹಾಗೂ BSNLEU -CITU ಮುಖಂಡರು ಮೈಸೂರಿನ RTTC ಸುತ್ತಲಿನ ಪ್ರದೇಶಗಳಲ್ಲಿ ಆಕರ್ಷಕ "ವಾಕಾಥಾನ್" ನಡೆಸಿ ಸಾರ್ವಜನಿಕರಿಗೆ Bsnl ಸಲ್ಲಿಸುತ್ತಿರುವ ಸೇವೆ ಮತ್ತು ಸಾರ್ವಜನಿಕ ಉದ್ಯಮಗಳ ಉಳಿವಿನ ಅಗತ್ಯ ಕುರಿತು ಜಾಗೃತಿ ಮೂಡಿಸಿದರು. ನಂತರ ರಾಜ್ಯ ಸಮ್ಮೇಳನದಲ್ಲಿ ಇಂದು ಜನವರಿ 30 ಸೌಹಾರ್ಧ ಮಾನವ ಸರಪಳಿ ಯಶಸ್ವಿಗೆ ಪೋಸ್ಟರ್ ಪ್ರದರ್ಶನ ನಡೆಲಾಯಿತು.

BSNL NON PERMANENT WORKERS UNION 3ನೇ ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸಿದ ನೂರಕ್ಕೂ ಹೆಚ್ಚಿನ ಪ್ರತಿನಿಧಿಗಳು ಹಾಗೂ BSNLEU -CITU ಮುಖಂಡರು ಮೈಸೂರಿನ RTTC ಸುತ್ತಲಿನ ಪ್ರದೇಶಗಳಲ್ಲಿ ಆಕರ್ಷಕ "ವಾಕಾಥಾನ್" ನಡೆಸಿ ಸಾರ್ವಜನಿಕರಿಗೆ Bsnl ಸಲ್ಲಿಸುತ್ತಿರುವ ಸೇವೆ ಮತ್ತು ಸಾರ್ವಜನಿಕ ಉದ್ಯಮಗಳ ಉಳಿವಿನ ಅಗತ್ಯ ಕುರಿತು ಜಾಗೃತಿ ಮೂಡಿಸಿದರು. ನಂತರ ರಾಜ್ಯ ಸಮ್ಮೇಳನದಲ್ಲಿ ಇಂದು ಜನವರಿ 30 ಸೌಹಾರ್ಧ ಮಾನವ ಸರಪಳಿ ಯಶಸ್ವಿಗೆ ಪೋಸ್ಟರ್ ಪ್ರದರ್ಶನ ನಡೆಲಾಯಿತು

ನೂತನ ಪದಾಧಿಕಾರಿಗಳ ಆಯ್ಕೆ :

ಸಮ್ಮೇಳನವು 19 ಪದಾಧಿಕಾರಿಗಳನ್ನು ಆಯ್ಕೆ ಮಾಡಿತು. ಅಧ್ಯಕ್ಷರಾಗಿ ಸಿ.ಕೆ. ಗುಂಡಣ್ಣ, ಪ್ರಧಾನ ಕಾರ್ಯದರ್ಶಿಯಾಗಿ ಕೆ. ಮಹಾಂತೇಶ್ ಹಾಗೂ ಖಜಾಂಚಿಯಾಗಿ ಗೋಪಾಲಕೃಷ್ಣ ಆಯ್ಕೆಯಾದರು. ಅಲ್ಲದೆ 35 ಜನ ರಾಜ್ಯ ಸಮಿತಿಯನ್ನು ಸಮ್ಮೇಳನ ಆಯ್ಕೆ ಮಾಡಿತು.

ಸಮಾರೋಪ :

ಜನವರಿ 27 ರಂದು ಮಧ್ಯಾಹ್ನ ಸಮ್ಮೇಳನದ ಸಮಾರೋಪ ಭಾಷಣವನ್ನು ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಎನ್. ಉಮೇಶ್ ಮಾಡಿದರು. ಮೈಸೂರು ಜಿಲ್ಲಾ ಸಿಐಟಿಯು ಪ್ರಧಾನ ಕಾರ್ಯದರ್ಶಿ ಜಯರಾಂ ಸೇರಿದಂತೆ ಹಲವರು ಉಪಸ್ಥಿತರಿದ್ದರು. ■


ಜಾಗತಿಕ ಬಂಡವಾಳ ಮತ್ತು ಕೋಮುವಾದ....... ಪುಟ 6 ರಿಂದ

ಒಬ್ಬನೇ ತಂದೆಯ ಮಕ್ಕಳು ಎಂದು ಕಠಿಣ ಏಕದೇವೋಪಾಸನೆಯ ಕಡೆಗೆ ತಿರುಗಿಸಿ ಒಂದುಗೂಡಿಸಿದ ಮಹಮದ್ ಪೈಗಂಬರ್ ಜಗತ್ತಿನ ಬೇರೆ ಧರ್ಮಗಳಿಗಿಂತ ಇಹದ ಶಾಂತಿಗೆ, ಸಹೋದರತೆಯ ಸಾಮಾಜಿಕತೆಗೆ ಮಹತ್ವಕೊಟ್ಟ ಅಪರೂಪದ ಪ್ರವಾದಿ ಎಂದು ಎಂ.ಎನ್.ರಾಯ್ ಹೇಳುತ್ತಾರೆ. 7ನೇ ಶತಮಾನದಲ್ಲಿ ಪೈಗಂಬರ್ ಮುಖೇನ ರೂಪುಗೊಂಡ ಇಸ್ಲಾಂ ಕೇವಲ 50 ವರ್ಷಗಳಲ್ಲೇ ಪರ್ಷಿಯಾ, ಈಜಿಪ್ಟ್, ಆಫ್ರಿಕಾ ಮತ್ತು ಸ್ಪೇನ್‌ಗಳಲ್ಲಿನ ಜನಸಾಮಾನ್ಯರನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತು. 100 ವರ್ಷಗಳಲ್ಲಿ ದೇವರ ಖಡ್ಗ, ವೀರಾಗ್ರಣಿಗಳಾದ ಸೈನಿಕರ ಏಕನಿಷ್ಠೆ ಮತ್ತು ಕುರಾನ್ ನೇರವಾಗಿ ಗಳಿಸಿಕೊಡುತ್ತಿದ್ದ ಐಹಿಕ ಸಮಾನತೆ ಹಾಗೂ ಭ್ರಾತೃತ್ವಗಳ ಸಾಮಾಜಿಕತೆಯೊಂದಿಗೆ ಬಹುಬೇಗ ವಿಶ್ವದಾದ್ಯಂತ ಜನಾನುರಾಗಿಯಾಯಿತು.

ಸ್ಥಳೀಯ ಹಿಂದೂ ರಾಜರನ್ನು ಗೆದ್ದು ಭಾರತಕ್ಕೆ ಕಾಲಿಟ್ಟ ಇಸ್ಲಾಂ, ಸೋತ ಮೇಲ್ವರ್ಗದಿಂದ ದ್ವೇಷವನ್ನೂ, ಏಕದೇವೋಪಾಸನೆಯ ಮೂಲಕ ತನ್ನಿಂದ ಸಮಾನತೆ, ಭ್ರಾತೃತ್ವಗಳನ್ನು ಪಡೆದ ದೀನದಲಿತರಿಂದ ಪ್ರೀತಿಯನ್ನೂ ಗಳಿಸಿತು. ಇಸ್ಲಾಂ ಮತ್ತು ಮುಸಲ್ಮಾನರ ಬಗೆಗಿನ ಸಂಘಪರಿವಾರದ ದ್ವೇಷ–ಅಸಹನೆಗಳು ಮೇಲುನೋಟಕ್ಕೆ ಕಾಣುವಂತೆ ಅವರು ಭಾರತದ ನೆಲಕ್ಕೆ ಪರಕೀಯರೆಂಬ ಕಾರಣಕ್ಕೆ ಅಲ್ಲ. ಅದು ಸೋತವರು, ತಮ್ಮನ್ನು ಸೋಲಿಸಿದವರ ಬಗ್ಗೆ ಆಳದಲ್ಲಿ ಇಟ್ಟುಕೊಳ್ಳುವ ತೀವ್ರ ಅಸಹನೆ, ಕೋಪ, ಈರ್ಷೆ ಮತ್ತು ದ್ವೇಷ.*

ಹಿಂದೂ, ಕ್ರೈಸ್ತ, ಮುಸಲ್ಮಾನರನ್ನೂ ಒಳಗೊಂಡಂತೆ ಭಾರತದ ಎಲ್ಲ ಧರ್ಮ, ಜಾತಿ, ಪಂಗಡ, ಲಿಂಗಗಳಿಗೆ ಸೇರಿದ ಜನಸಮುದಾಯದ ಸಾಮಾನ್ಯ ಶತ್ರು ಸಂಘಪರಿವಾರದ ರಾಜಕೀಯದ ಅಡಿಪಾಯವಾದ ಜಾಗತಿಕ ಬಂಡವಾಳ ಮತ್ತು ಕೋಮುವಾದ. ಹೀಗಾಗಿ ಸಂಘಪರಿವಾರವು ತನ್ನ ರಾಜಕೀಯ ಶತ್ರುಗಳೆಂದು ನೇರವಾಗಿ ಗುರುತಿಸುವ ಮುಸ್ಲಿಮರು, ಕ್ರೈಸ್ತರು, ಕಮ್ಯುನಿಸ್ಟರು, ನಾಸ್ತಿಕರು ಮತ್ತು ಅನಾತ್ಮವಾದಿಗಳು ಹಾಗೂ ಜಾಗತಿಕ ಬಂಡವಾಳ ಮತ್ತು ಕೋಮುವಾದಗಳ ಎಲ್ಲ ಸಂತ್ರಸ್ತರು ಒಟ್ಟಾಗಿ ಸಾಮಾನ್ಯ ರಾಜಕೀಯ ಕಾರ್ಯಕ್ರಮದ ಅಡಿಯಲ್ಲಿ ಸಂಘಪರಿವಾರದ ರಾಜಕೀಯದ ವಿರುದ್ಧ ಹೋರಾಡಬೇಕಾದ ತುರ್ತು ಅಗತ್ಯವಿದೆ.

(*Historical Role Of Islam: An Essay on Islamic Culture-M.N.Roy.) ●



ಜಾಗತಿಕ ಬಂಡವಾಳ ಮತ್ತು ಕೋಮುವಾದ



ಪ್ರೊ. ವಿ.ಎನ್.ಲಕ್ಷ್ಮೀನಾರಾಯಣ

ಮುಸಲ್ಮಾನರೆಂದರೆ ಭಯೋತ್ಪಾದಕರು, ಜಿಹಾದಿಗಳು, ಕ್ರೈಸ್ತರೆಂದರೆ ಸೇವೆಯ ಹೆಸರಿನಲ್ಲಿ ಬಡಜನರನ್ನು ಮತಾಂತರಗೊಳಿಸಿ ಹಣಮಾಡಿಕೊಳ್ಳುವ ವಿದೇಶೀ ಏಜೆಂಟರೆಂದು ದೂಷಿಸುವ ಸಂಘಪರಿವಾರವು, ಭಾರತದ ಧಾರ್ಮಿಕ ಅಲ್ಪಸಂಖ್ಯಾತರ ಬಗ್ಗೆ ದ್ವೇಷಭಾವನೆಯನ್ನು ಜನಸಾಮಾನ್ಯರಲ್ಲಿ ವ್ಯವಸ್ಥಿತವಾಗಿ ಬಿತ್ತುತ್ತಿದೆ. ಭಾರತೀಯತೆಯೆಂದರೆ ಬ್ರಾಹ್ಮಣಧರ್ಮವನ್ನು ಅನುಸರಿಸುವುದೆಂದೂ, ಭಾರತದ ಪ್ರಜೆಗಳಾಗಿರುವುದೆಂದರೆ ಮೇಲ್ಜಾತಿಯ ಹಿಂದೂಗಳ ಧಾರ್ಮಿಕ ಆಚರಣೆಗಳನ್ನು ಸಾಮಾಜಿಕ ಜೀವನದಲ್ಲಿ ಅಳವಡಿಸಿಕೊಂಡು ಬದುಕುವುದೆಂದೂ ಸಂಘಪರಿವಾರವು ಮೊದಲಿನಿಂದಲೂ ಪ್ರತಿಪಾದಿಸುತ್ತಾ ಬಂದಿದೆ. ಸಂಸ್ಕೃತಿಯ ಹೆಸರಿನಲ್ಲಿ ರಾಜಕೀಯ ಮಾಡುತ್ತಾ ಎಲ್ಲರೀತಿಯ ರಣವ್ಯೂಹ, ರಣತಂತ್ರ, ನೀತಿ–ಅನೀತಿಯುತ ಮಾರ್ಗಗಳನ್ನು ಬಳಸಿ, ಸಾವಿರ ಸುಳ್ಳು ಹೇಳಿ, ಕೇಂದ್ರ ಮತ್ತು ಅನೇಕ ರಾಜ್ಯಗಳಲ್ಲಿ ಕೊನೆಗೂ ರಾಜ್ಯಾಧಿಕಾರವನ್ನು ತನ್ನ ಕೈಗೆ ತೆಗೆದುಕೊಳ್ಳುವಲ್ಲಿ ಸಫಲವಾಗಿದೆ. ಬೇಕು ಬೇಕೆಂದಾಗಲೆಲ್ಲಾ ಕಪಟ ಅಂಗಸಂಸ್ಥೆಗಳನ್ನು ಹುಟ್ಟುಹಾಕುತ್ತಾ ಜಾಗತಿಕ ಬಂಡವಾಳದ ಹಿತಾಸಕ್ತಿಯನ್ನು ಮುನ್ನೊತ್ತುವ ಕೋಮುವಾದೀ ರಾಜಕೀಯದಲ್ಲಿ ನಿರತವಾಗಿದೆ. ಎಲ್ಲ ಬಗೆಯ ತಾರತಮ್ಯಗಳನ್ನು ಪೋಷಿಸುವ ಸಾಮಾಜಿಕ ಕಟ್ಟುಪಾಡುಗಳು, ಅಸಮಾನತೆ ಮತ್ತು ಶೋಷಣೆಗಳನ್ನು ಗಟ್ಟಿಗೊಳಿಸುವಂಥ ಸಂವಿಧಾನದ ಬದಲಾವಣೆ, ಮಧ್ಯಕಾಲೀನ ಯುಗದ ಸಾಂಸ್ಕೃತಿಕ ಪುನರುತ್ಥಾನ, ಆಹಾರ ಪದ್ಧತಿ, ಕಲೆ, ಸಾಹಿತ್ಯ, ಸಂಗೀತ, ನಾಟಕ, ಸಿನೆಮಾ ಕುರಿತಾದ ರುಚಿ–ಅಭಿರುಚಿ–ಅಭಿಪ್ರಾಯಗಳ ತನ್ನ ಏಕಾಧಿಕಾರದ ನಿಯಂತ್ರಣವನ್ನು ಜನರ ಮೇಲೆ ಹೇರಲು ಎಲ್ಲ ರೀತಿಗಳಲ್ಲೂ ಯತ್ನಿಸುತ್ತಿದೆ.

ತನ್ನ ಬ್ರ್ಯಾಂಡಿನ ಭಾರತೀಯತೆ ಮತ್ತು ರಾಷ್ಟ್ರೀಯತೆಯ ಹಿಂದಿರುವ ತಾತ್ವಿಕತೆಯನ್ನು ಮಾತ್ರ ಅಪ್ಪಟ ದೇಶೀಯವೆಂದು ಕೊಚ್ಚಿಕೊಳ್ಳುತ್ತಾ ಇನ್ನುಳಿದ ಎಲ್ಲಾ ತಾತ್ವಿಕತೆಗಳನ್ನು ಅನ್ಯದೇಶೀಯ–ಪರಕೀಯವೆಂದು ಜರೆಯುತ್ತಾ ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳುವ

ಸಂಘಪರಿವಾರವು ತನ್ನ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಇಟಲಿಯ ಫ್ಯಾಸೀವಾದಿ ಮುಸೋಲಿನಿಯಿಂದ ಪಡೆದಿದೆ. 'ಪರಶುರಾಮನ ಸಂತತಿಯವರಾಗಿ ಬ್ರಹ್ಮಜ್ಞಾನ, ಕ್ಷಾತ್ರಬಲವನ್ನು ಹೊಂದಿದ ಚಿತ್ಪಾವನ ಬ್ರಾಹ್ಮಣರು ಜಗತ್ತನ್ನು, ನಿರ್ದಿಷ್ಟವಾಗಿ ಭಾರತವನ್ನು ಆಳಲು ತಕ್ಕವರೆಂದು ಸಂಘಪರಿವಾರ ನಂಬುತ್ತದೆ. ಇಂಥ ಜಾತಿಮೂಲದ ಶ್ರೇಷ್ಠತೆಯ ಕಲ್ಪನೆಯಲ್ಲೂ ಸಹ ಹಿಟ್ಲರ್ ಜರ್ಮನಿಯ ಜನಾಂಗೀಯ ಶ್ರೇಷ್ಠತೆಯನ್ನು ಪ್ರತಿಪಾದಿಸುವ ನಾಜ಼ೀ ಪಕ್ಷದ ದೃಷ್ಟಿಕೋನವನ್ನು ಅನುಕರಿಸುತ್ತದೆ. ರಾಜಕೀಯ ಅಧಿಕಾರ ಪಡೆಯಲು ನಾಜ಼ೀ ಪಕ್ಷವು ಹೆಣೆದ ಜನಾಂಗೀಯ ದ್ವೇಷಕ್ಕೆ ತುತ್ತಾದ ಜರ್ಮನ್ ಯಹೂದಿಗಳಿಗೆ ಸಂವಾದಿಯಾಗಿ ಸಂಘಪರಿವಾರಕ್ಕೆ ದ್ವೇಷಿಸಲು ಭಾರತದ ಮುಸಲ್ಮಾನರು ಇದ್ದಾರೆ. ಅವರ ಜೊತೆಗೆ, ಕ್ರೈಸ್ತರು, ಕಮ್ಯುನಿಸ್ಟರು, ನಾಸ್ತಿಕರು ಸಹ, ಅದರ ಶತ್ರುಗಳ ಪಟ್ಟಿಯಲ್ಲಿ ಸೇರಿದ್ದಾರೆ.

ಪೌರಾಣಿಕ ಕಲ್ಪನೆಯಾದ ಭರತಖಂಡವೆಂಬ ಕಾಲ್ಪನಿಕ ಅಖಂಡ ದೇಶದ ಭೌಗೋಳಿಕ ಚಿತ್ರವನ್ನು ಆಧರಿಸಿದ ಸಂಘಪರಿವಾರದ ರಾಷ್ಟ್ರೀಯತೆಯಲ್ಲಿ ಕ್ರೈಸ್ತರು ಮತ್ತು ಮುಸಲ್ಮಾನರು ಅನ್ಯರಾಗಿ, ಮ್ಲೇಚ್ಛರಾಗಿ, ಪರಕೀಯರಾಗಿ ಗುರುತಿಸಲ್ಪಡುತ್ತಾರೆ. ತಾತ್ವಿಕವಾಗಿ ಸಕಲಜೀವಿ–ಚರಾಚರವಸ್ತುಗಳ ಸಾಮರಸ್ಯ–ಸಮಾನತೆಯನ್ನು ಪ್ರತಿಪಾದಿಸುತ್ತಾ ಸಾಮಾಜಿಕ ಬದುಕಿನಲ್ಲಿ ಶ್ರೇಣೀಕೃತ ಜಾತಿ ತಾರತಮ್ಯವನ್ನು ಎತ್ತಿಹಿಡಿಯುವ ಬ್ರಾಹ್ಮಣಧರ್ಮದ ಶ್ರೇಷ್ಠತೆಯ ಅಡಿಯಲ್ಲಿ ಬರುವ ಎಲ್ಲಾ ಜಾತಿ–

ಆದರೆ ಸಂಘಪರಿವಾರ ಪ್ರಣೀತ ಅಪ್ಪಟ ಹಿಂದೂ ಆಗುವುದೆಂದರೆ ಏನು? ಏನೆಂದು ನೋಡಲು ಹೊರಟರೆ ಈ 'ಪರಕೀಯ'ರಿಗಿರಲಿ ಸಂಘಪರಿವಾರಕ್ಕೂ ಅದು ಅಸಾಧ್ಯ! ಏಕೆಂದರೆ ಸನಾತನ ಭಾರತದಲ್ಲಿ ಏನೆಲ್ಲಾ ಇರಲಿಲ್ಲವೋ, ಯಾವುದೆಲ್ಲಾ ಈಗ ಇವೆಯೋ ಅವೆಲ್ಲವೂ 'ಪರಕೀಯ'ರಾದ, ಮ್ಲೇಚ್ಛರಾದ ಇಸ್ಲಾಂ ಮತ್ತು ಕ್ರೈಸ್ತ ಅನುಯಾಯಿಗಳಾದ ಅರಬ್ಬರು, ಪರ್ಷಿಯನ್ನರು, ಮೊಗಲರು, ಬ್ರಿಟಿಷರು–ವ್ಯಾಪಾರಿಗಳಾಗಿ, ಆಳುವ ವರ್ಗಗಳಾಗಿ ಭಾರತ ದೇಶವೆಂದು ಈಗ ಕರೆಯುವ ಇಂದಿನ ಭೂಪ್ರದೇಶದೊಳಕ್ಕೆ ತಂದವುಗಳು.

ಉಪಜಾತಿ–ಪಂಗಡಗಳನ್ನು ಸಂಘಪರಿವಾರವು ತನ್ನ ರಾಜಕೀಯದ ಅಗತ್ಯಗಳಿಗೆ ಅನುಸಾರವಾಗಿ ಒಟ್ಟಿಗೆ ಸೇರಿಸಿ 'ಹಿಂದೂ' ಎಂದು ಕರೆಯುತ್ತದೆ. ಈ ಹಿಂದೂಗಳ ಜೊತೆ ನೂರಾರು ವರ್ಷಗಳಿಂದಲೂ ಬದುಕುತ್ತಿರುವ ಕ್ರೈಸ್ತರು ಮತ್ತು ಮುಸಲ್ಮಾನರು ಸಂಘಪರಿವಾರದ ದೃಷ್ಟಿಯಲ್ಲಿ ಭಾರತೀಯರಲ್ಲ, 'ಪರಕೀಯರು'. ಅವರು ಭಾರತೀಯರೆನಿಸಬೇಕಾದರೆ 'ಇಲ್ಲಿನವರೊಂದಿಗೆ' ಒಂದಾಗಬೇಕು. ಅಂದರೆ ತಮ್ಮ ಧಾರ್ಮಿಕ ಮತ್ತು ಸಾಂಸ್ಕೃತಿಕ ಅನನ್ಯತೆಗಳನ್ನು ಕಳಚಿ ಅಪ್ಪಟ ಹಿಂದೂಗಳಾಗಬೇಕು. ಅದಾಗದಿದ್ದರೆ ಅವರಿಗೆ ಈ ದೇಶದಲ್ಲಿ ಸ್ಥಾನವಿಲ್ಲ. ಅಷ್ಟೇ ಏಕೆ ಸಂಘಪರಿವಾರ ಪ್ರಣೀತ ಹಿಂದೂ ಆಗಲು ಒಪ್ಪದ ಯಾವುದೇ ವ್ಯಕ್ತಿಗೂ ಭಾರತದಲ್ಲಿ ಜಾಗವಿಲ್ಲ.

ಆದರೆ ಸಂಘಪರಿವಾರ ಪ್ರಣೀತ ಅಪ್ಪಟ ಹಿಂದೂ ಆಗುವುದೆಂದರೆ ಏನು? ಏನೆಂದು ನೋಡಲು ಹೊರಟರೆ ಈ 'ಪರಕೀಯ'ರಿಗಿರಲಿ ಸಂಘಪರಿವಾರಕ್ಕೂ ಅದು ಅಸಾಧ್ಯ! ಏಕೆಂದರೆ ಸನಾತನ ಭಾರತದಲ್ಲಿ ಏನೆಲ್ಲಾ ಇರಲಿಲ್ಲವೋ, ಯಾವುದೆಲ್ಲಾ ಈಗ ಇವೆಯೋ ಅವೆಲ್ಲವೂ 'ಪರಕೀಯ'ರಾದ, ಮ್ಲೇಚ್ಛರಾದ ಇಸ್ಲಾಂ ಮತ್ತು ಕ್ರೈಸ್ತ ಅನುಯಾಯಿಗಳಾದ ಅರಬ್ಬರು, ಪರ್ಷಿಯನ್ನರು, ಮೊಗಲರು, ಬ್ರಿಟಿಷರು–ವ್ಯಾಪಾರಿಗಳಾಗಿ, ಆಳುವ ವರ್ಗಗಳಾಗಿ ಭಾರತ ದೇಶವೆಂದು ಈಗ ಕರೆಯುವ ಇಂದಿನ ಭೂಪ್ರದೇಶದೊಳಕ್ಕೆ ತಂದವುಗಳು. ಸಿಂಧೂ ನದಿಯ ಕಣಿವೆಯಲ್ಲಿ ವಾಸಿಸುತ್ತಿದ್ದ ಜನರಿಗೆ 'ಇಂಡಿಯಾ' ಎಂಬ ಅಪಭ್ರಂಶದ ಮೂಲವಾದ 'ಇಂಡಸ್' ಎಂಬ ಹೆಸರು ಬಂದದ್ದೇ ಈ 'ಪರಕೀಯ'ರಿಂದ. ಹಿಂದೂ ವಿವಾಹಿತ ಸ್ತ್ರೀಯರ 'ಮುತ್ತೈದೆ'ತನದ ಪ್ರಮುಖ ಲಕ್ಷಣವಾದ, ಕಿಣಿಕಿಣಿ ಶಬ್ದದ ಗಾಜಿನ ಬಳೆಗಳು ಒಂದು ಕಾಲದಲ್ಲಿ ಭಾರತದಲ್ಲೇ ಇರಲಿಲ್ಲ. ಗಾಜಿನ ಬಟ್ಟಲು, ಪಿಂಗಾಣಿ ಪಾತ್ರೆಗಳು, ಟೀ, ಕಾಫಿ ಯಾವುವೂ ಮಡಿಕೆ–ಕುಡಿಕೆಗಳ ಭಾರತದಲ್ಲಿ ಇರಲಿಲ್ಲ. ನಿಕ್ಕರ್(ಚಡ್ಡಿ), ಪ್ಯಾಂಟು, ಷರ್ಟು, ಕೋಟು, ಟೋಪಿ, ಯಾವುವೂ ಸನಾತನ ಭಾರತದಲ್ಲಿ ರೂಪುಗೊಂಡವುಗಳಲ್ಲ. ಇನ್ನು, ಸಿಮೆಂಟು, ಕಟ್ಟಡಗಳು, ವಿಮಾನ, ಯಂತ್ರಗಳು, ರೈಲು, ಬಸ್ಸು, ಕಾರು, ಸೈಕಲ್ಲು ಯಾವುವೂ ಸಂಘಪರಿವಾರ ಹೇಳುವ ಭವ್ಯ ಭಾರತದವುಗಳಲ್ಲ. ರಾಣಿ ಪದ್ಮಿನಿಯ ಕತೆಯನ್ನು ಪರದೆಯ ಮೇಲೆ ಬೆಳಗಿಸುವ ಕ್ಯಾಮರಾ, ಫಿಲ್ಮು, ಪ್ರೊಜೆಕ್ಟರ್, ಸಿನಿಮಾ ಸಹ ಭಾರತದವುಗಳಲ್ಲ. ಸೆನ್ಸಾರ್‌ಷಿಪ್‌ನ ಪರಿಕಲ್ಪನೆ ಸಹ ಭಾರತದ್ದು ಅಲ್ಲ. ಹೀಗೇ ಪಟ್ಟಿಮಾಡುತ್ತಾ ಹೋದರೆ ಕೊನೆಗೆ ಸನಾತನ ಭಾರತೀಯರಿಗೆ ತಮ್ಮದೆಂದು ಉಳಿಯುವುದು ಶಂಖ, ಜಾಗಟೆ, ತಂಬೂರಿ, ದಂಡ, ಕಮಂಡಲ, ಕೌಪೀನ ಮತ್ತು ಕಾಜ–ಗುಂಡಿಗಳಿಲ್ಲದೆ ಮೈಗೆ ಸುತ್ತಿಕೊಳ್ಳಬಹುದಾದ ಉದ್ದನೆಯ ಬಟ್ಟೆ (ಸೀರೆ) ಮಾತ್ರ.

ಪ್ರಾಚೀನ ಮತ್ತು ಅರ್ವಾಚೀನ, ಸ್ವದೇಶ–ಪರದೇಶಗಳೆಂಬ ಭೇದವಿಲ್ಲದೆ, ರಾಜಕೀಯ ಚಿಂತನೆ, ವಾಣಿಜ್ಯ ವಹಿವಾಟು, ಸಾಹಿತ್ಯ–ಸಂಸ್ಕೃತಿಗಳ, ಜ್ಞಾನ–ವಿಜ್ಞಾನಗಳ ಕೊಡು–ಕೊಳ್ಳುವಿಕೆಯ ಫಲವಾಗಿ ರೂಪುಗೊಂಡಿರುವ ಮಿಶ್ರಸಂಸ್ಕೃತಿಯಿಲ್ಲದಿದ್ದರೆ, ಜಾಗತಿಕ ಮಟ್ಟದ ಸಂಶೋಧನೆ, ಅನುಭವ–ಚಿಂತನೆಗಳಿಲ್ಲದಿದ್ದರೆ, ಮಾನವತೆಯು ಇಲ್ಲಿಯವರೆಗೆ ಸೃಷ್ಟಿಸಿದ ಅತ್ಯುತ್ತಮವಾದದ್ದು ಯಾವುದೂ ಯಾರಿಗೂ ದಕ್ಕುತ್ತಿರಲಿಲ್ಲ.

ಈ ಮೊದಲೇ ಹೇಳಿದಂತೆ, 'ಪರದೇಶ'ಗಳಾದ ಇಟಲಿಯ ಫ್ಯಾಸೀವಾದ ಪ್ರಣೀತ ರಾಷ್ಟ್ರೀಯತೆ ಮತ್ತು ಹಿಟ್ಲರ್ ಜರ್ಮನಿಯ ನಾಜ಼ೀವಾದ ಪ್ರಣೀತ ಜನಾಂಗೀಯ ಶ್ರೇಷ್ಠತೆ ಮತ್ತು ದ್ವೇಷಗಳು ಸಂಘಪರಿವಾರವು ಪರದೇಶಗಳಿಂದ ಆಮದು ಮಾಡಿಕೊಂಡು ತನ್ನದೆಂದು ಹೇಳಿಕೊಳ್ಳುವ 'ಕಡತಂದ ಚಿಂತನೆ'ಗಳು. ಇಡೀ ಜಗತ್ತಿನ ರಾಜಕೀಯವನ್ನು ಗತಿತಾರ್ಕಿಕ ಭೌತವಾದದ ದೃಷ್ಟಿಕೋನದಲ್ಲಿ ವಿವರಿಸುವ ಮಾರ್ಕ್ಸ್‌ವಾದವನ್ನು ಸಂಘಪರಿವಾರವು ಪರದೇಶದಿಂದ ಕಡತಂದ ದೃಷ್ಟಿಕೋನವಾದ್ದರಿಂದ ತಿರಸ್ಕರಿಸಬೇಕೆಂದು ಬೊಬ್ಬಿಡುತ್ತದೆ. ಇದು ಸಂಘಪರಿವಾರದ 'ಬೌದ್ಧಿಕ್'ಗಳಿಗೆ ಗೊತ್ತಿಲ್ಲದ ವಿಷಯವೇನಲ್ಲ.

ಸಂಘಪರಿವಾರದ ಬೌದ್ಧಿಕ ದಿವಾಳಿತನ ಕೇವಲ ಅದರ ಬೌದ್ಧಿಕ್‌ಗಳಿಗೆ ಮಾತ್ರ ಗೊತ್ತಿದ್ದರೆ ಸಾಲದು. ಸಂಘಪರಿವಾರದ ಮುಗ್ಧ, ಬಡ, ಮೂಢ, ಅಮಾಯಕ, ಅಸಹಾಯಕ, ತಿಳಿಗೇಡಿ ಕಾಲಾಳುಗಳ, ಭಕ್ತ–ನಿರುದ್ಯೋಗಿ ಟೆಕ್ಕಿಗಳ, ಭಗವಾಧ್ವಜ ಹಿಡಿದು ಹೆಜ್ಜೆಹಾಕುವ ಸೈನಿಕರ, ಕುಂಕುಮ–ತಿಲಕಧಾರಿಗಳಾದ ಯುವಕ–ಯುವತಿಯರ, ಸಂಕುಚಿತ ಮನಸ್ಸಿನ ಕುದಿಯುವ ರಕ್ತದ ಮುದಿಯರ, ಬೆಂಕಿಹಚ್ಚಿ ಓಡಿಹೋಗುವ ಕಿಡಿಗೇಡಿಗಳ ಗಮನಕ್ಕೆ ತರಬೇಕಾಗಿದೆ. ಯಾಕೆಂದರೆ ನಿಜವಾದ ಭಾರತೀಯತೆಯು ನಾವೆಲ್ಲರೂ ಅಣ್ಣತಮ್ಮಂದಿರು–ಅಕ್ಕತಂಗಿಯರು ಎಂದು ಒಂದೇ ತಟ್ಟೆಯಲ್ಲಿ ಉಣ್ಣುವ ಮನಸ್ಥಿತಿಯ ಸಹೋದರತೆಯಲ್ಲಿದೆ. ತನ್ನಂತೆಯೇ ಪರರು ಎನ್ನುವ ಸಾಮಾಜಿಕತೆಯಲ್ಲಿದೆ. ಹೊತ್ತು ಗೊತ್ತು ನೋಡದೆ ಮನೆಗೆ ಬರುವ ಹಸಿದ 'ಅತಿಥಿ'ಯ ಜೊತೆ, ಇದ್ದುದನ್ನು ಹಂಚಿಕೊಂಡು ತಿನ್ನುವ ಮಾನವೀಯತೆಯಲ್ಲಿದೆ. ಇದನ್ನೆಲ್ಲಾ ಅವರಿಗೆಲ್ಲಾ ತಿಳಿಸಿಹೇಳಬೇಕಾಗಿದೆ.

ಸಂಘಪರಿವಾರದ ದೃಷ್ಟಿಯಲ್ಲಿ 'ಪರಕೀಯ'ವೆಂದೂ ಪರಿಗಣಿಸಬಹುದಾದ ತತ್ವಜ್ಞಾನವನ್ನು ಪ್ರಪಂಚಕ್ಕೆ ಕೊಟ್ಟ ಪ್ರಾಚೀನ ಗ್ರೀಕರು ತಮ್ಮ ಆಳವಾದ ತಾರ್ಕಿಕ ಚಿಂತನೆಗಾಗಿ ವಿಶ್ವದೆಲ್ಲೆಡೆ ಪ್ರಸಿದ್ಧರಾಗಿದ್ದಾರೆ. ಆ ಕಾಲದ ಗ್ರೀಕ್ ಸಮಾಜದ ಸಾಧನೆಗಳಿಗೆ ಗುಲಾಮರ ದುಡಿಮೆಯ ಸಮೃದ್ಧಿಯೇ ಆಧಾರವಾಗಿತ್ತು. ಇಷ್ಟಾದರೂ ಆ ಕಾಲದಲ್ಲಿದ್ದ ತತ್ವಜ್ಞಾನಿ ಸಾಕ್ರೆಟಿಸ್‌ನಂಥ ಮಹಾ ಮೇಧಾವಿಗಾಗಲಿ ಅವನ ಪ್ರಕಾಂಡ ಪ್ರತಿಭೆಯ ಶಿಷ್ಯ ಪ್ಲೇಟೋಗಾಗಲಿ ಗುಲಾಮಗಿರಿ ಅಮಾನವೀಯ ಉತ್ಪಾದನಾ ಸಂಬಂಧವೆಂದು ತೋರಲಿಲ್ಲ. ಏಕೆಂದರೆ ಅವರು ತಮ್ಮ ಸಮಾಜದ ಆಚೆ ನಿಂತು ನೋಡಲಾರದವರಾಗಿದ್ದರು. ಆದರೂ ಸಾಕ್ರಟಿಸ್‌ನ ಚಿಂತನೆ ಆ ಕಾಲದ ಗ್ರೀಕ್ ಸಮಾಜದ ಆಳುವ ವರ್ಗಗಳ ಹಿತಾಸಕ್ತಿಗೆ ವಿರುದ್ಧವಾಗಿತ್ತು. ಅವನು ಮಾಡಿದ ಅಪರಾಧವೇನೆಂದು ತೋರಿಸಲಾಗದಿದ್ದರೂ ಒಂದು ವರ್ಗದ ಜನರ ಒತ್ತಾಯಕ್ಕೆ ಮಣಿದು ವಿಷ ಉಣಿಸಿ ಅವನನ್ನು ಕೊಲ್ಲಲಾಯಿತು.

ಲೌಕಿಕ–ಆರ್ಥಿಕ ಸಹಾಯದ ಆಮಿಷಗಳನೊಡ್ಡಿ ಬಡವರು, ಸಾಮಾಜಿಕ ತುಳಿತಕ್ಕೊಳಗಾದ ಅಸಹಾಯಕರನ್ನು ಮತಾಂತರದ ಬಲೆಯಲ್ಲಿ ಕೆಡುವುತ್ತಾರೆಂದು ಸಂಘಪರಿವಾರವು ಆರೋಪಿಸುವ ಕ್ರೈಸ್ತಮತದ ಕೇಂದ್ರಬಿಂದು ಏಸುಕ್ರಿಸ್ತ. ಸಾಮಾಜಿಕ ಬದಲಾವಣೆಯಲ್ಲಿ ಮೋಸೆಸ್‌ಗಿಂತ ಮುಂದೆ ಹೋಗಿ ರೋಮನ್ ಸಮಾಜದಲ್ಲಿ ಗುಲಾಮರ ಪರವಾಗಿ, ದೀನದಲಿತರ ಪರವಾಗಿ ದನಿಯೆತ್ತಿದವನು. ಅವನನ್ನು ಗುಲಾಮರ ದೊರೆಯೆಂದು ಲೇವಡಿಮಾಡಿ ಮುಳ್ಳಿನ ಕಿರೀಟ ತೊಡಿಸಿ ಕಳ್ಳರೊಂದಿಗೆ ಶಿಲುಬೆಗೇರಿಸಿ ಆಳುವವರ್ಗ ಕೊಂದಿತು. ಗುಲಾಮರನ್ನು ಯಜಮಾನರ ವಿರುದ್ಧ ಸಂಘಟಿಸಿದ ಸ್ಪಾರ್ಟಕಸ್ ಕೂಡಾ ಸಂಘರ್ಷದ ಫಲವಾಗಿ ಪ್ರಾಣ ಕಳೆದುಕೊಳ್ಳಬೇಕಾಯಿತು.

ಏಸುಕ್ರಿಸ್ತ ಸ್ವರ್ಗದಲ್ಲಿರುವ ದೇವರ ರಾಜ್ಯವನ್ನು ಭೂಮಿಗೆ ತರುವ ಆಶಯ ಹೊಂದಿದ್ದ. ಬಡವರಿಗಾಗಿ, ದೀನದಲಿತರಿಗಾಗಿ ಪ್ರಾಣತೆತ್ತ ಅವನನ್ನು ಕಾಲಕ್ರಮೇಣ ಕ್ಯಾಥೋಲಿಕ್ ಪುರೋಹಿತವರ್ಗವು ತನ್ನ ಹಿಡಿತಕ್ಕೆ ತೆಗೆದುಕೊಂಡಿತು. ಸಂತರ ಪೂಜೆ, ಪವಾಡಗಳ ಮೂಲಕ ಕ್ರಿಸ್ತನನ್ನು ಅತಿಮಾನುಷ ಶಕ್ತಿಯ ದೇವರ ಮಗನೆಂದು, ಬಡವರಾಗಿದ್ದು ಅವನ ಮೇಲೆ ವಿಶ್ವಾಸವಿರಿಸುವ ಮೂಲಕ ದೇವರನ್ನು ಕೃಪೆಗೆ ಸುಲಭವಾಗಿ ಪಾತ್ರವಾಗಬಹುದೆಂಬ ನಂಬಿಕೆ ಜನಸಾಮಾನ್ಯರಲ್ಲಿ ಬೆಳೆಯಿತು. ನೊಂದವರಿಗೆ ಬಡತನವು ದೇವರ ಕೃಪೆಗಳಿಸುವ 'ಮೌಲ್ಯ'ವಾಯಿತು. ಭಾರತಕ್ಕೆ ಬಂದ ಬ್ರಿಟಿಷರು ದಲಿತರಿಗೆ ಜಾತಿಮೂಲದ ಸಾಮಾಜಿಕ ಅವಮಾನವನ್ನು ಕಡಿಮೆಮಾಡುವ ಬೈಬಲ್ಲನ್ನೂ, ಮಧ್ಯಮವರ್ಗದವರಿಗೆ ಇಂಗ್ಲಿಷ್ ಶಿಕ್ಷಣ–ಬಾಬುಗಿರಿಯನ್ನೂ ಪುರೋಹಿತರಿಗೆ ದ್ವೇಷವನ್ನೂ ತಂದುಕೊಟ್ಟರು.

ನೂರಾರು ದೇವರುಗಳನ್ನು ಪೂಜಿಸುತ್ತಾ ತಮ್ಮ ತಮ್ಮಲ್ಲೇ ಕಿತ್ತಾಡಿಕೊಳ್ಳುತ್ತಿದ್ದ ಅರೇಬಿಯಾದ ಮರಳುಗಾಡಿನ ಬುಡಕಟ್ಟುಗಳನ್ನು ಎಲ್ಲರೂ

ಪುಟ 5 ನೋಡಿ



ಜನವರಿ 30, 2018 ಕರ್ನಾಟಕದಲ್ಲಿ ಒಂದು ಅವಿಸ್ಮರಣೀಯ ದಿನವಾಯಿತು. ಅಂದು "ಸರ್ವ ಜನಾಂಗದ ಶಾಂತಿಯ ತೋಟ"ವಾದ ಕರ್ನಾಟಕದಲ್ಲಿ, ಇತ್ತೀಚಿನ ವರ್ಷಗಳಲ್ಲಿ ಕೋಮುದ್ವೇಷ ಕೋಮುಹಿಂಸೆ ಹರಡುವ ಗಂಭೀರ ವ್ಯವಸ್ಥಿತ ಪ್ರಯತ್ನಗಳ ವಿರುದ್ಧ ಮತ್ತು ಸ್ನೇಹ ಸಾಮರಸ್ಯ ಸೌಹಾರ್ದತೆಗಾಗಿ ಇಡೀ ಕರ್ನಾಟಕ ಮೈ ಕೊಡವಿ ಎದ್ದು ನಿಂತಿತ್ತು. ಅಂದು ಸಂಜೆ 4.00ರಿಂದ 4.10ರ ವರೆಗೆ ರಾಜ್ಯದಾದ್ಯಂತ 160ಕ್ಕೂ ಹೆಚ್ಚಿನ ಜಿಲ್ಲಾ ತಾಲೂಕು ಮತ್ತಿತರ ಕೇಂದ್ರಗಳಲ್ಲಿ ಕೈ ಕೈ ಹಿಡಿದು ಸೌಹಾರ್ದತೆಗಾಗಿ ಮಾನವ ಸರಪಣಿ ರಚಿಸಲಾಯಿತು. ಕರ್ನಾಟಕದ ರಾಜಕೀಯ ಸಾಂಸ್ಕೃತಿಕ ಚರಿತ್ರೆಯಲ್ಲೇ ಇದು ಒಂದು ಹೊಸ ಮೈಲಿಗಲ್ಲು. ಇದರ ಮೂಲಕ "ಸೌಹಾರ್ದತೆಗಾಗಿ ಕರ್ನಾಟಕ" ವೇದಿಕೆ ಕರ್ನಾಟಕದ ಎಲ್ಲಾ ಕೋಮುವಾದಿ–ಫ್ಯಾಸಿಸ್ಟ್ ವಿರೋಧಿ ಸೆಕ್ಯುಲರ್ ಶಕ್ತಿಗಳ ಐಕ್ಯ ವೇದಿಕೆಯಾಗಿ ಹೊಮ್ಮಿದೆ. ಈ ವೇದಿಕೆಯನ್ನು ಬಲಪಡಿಸುವ, ಜನವರಿ 30ರಂದು ಕೈಗೊಂಡ ಪ್ರತಿಜ್ಞೆಯನ್ನು ಸಾಕಾರಗೊಳಿಸುವ, ಜವಾಬ್ದಾರಿ ಎಲ್ಲಾ ಸೆಕ್ಯುಲರ್ ಶಕ್ತಿಗಳ ಮೇಲಿದೆ. ಈ ಬಗ್ಗೆ ಒಂದು ಸಾಧ್ಯವಾದಷ್ಟು ಸಮಗ್ರ ಚಿತ್ರಣ ಕೊಡುವ ವರದಿ, ಫೋಟೋಗಳು – ಈ ಪುಟ ಮತ್ತು ಪುಟ 8,9, 10,11 ಮತ್ತು 16ರಲ್ಲಿದೆ.

160+ ಸ್ಥಳಗಳಲ್ಲಿ 2+ ಲಕ್ಷ ಜನ ಭಾಗವಹಿಸಿದ ಚಾರಿತ್ರಿಕ ಮಾನವ ಸರಪಣಿ

"ಸೌಹಾರ್ದತೆಗಾಗಿ ಕರ್ನಾಟಕ" ಮೈಕೊಡವಿ ಎದ್ದು ನಿಂತಾಗ..

ವಸಂತರಾಜ ಎನ್.ಕೆ.

ಈ ಚಾರಿತ್ರಿಕ ಮಾನವ ಸರಪಳಿಯಲ್ಲಿ ಸಮಾಜದ ಎಲ್ಲಾ ಜನವಿಭಾಗಗಳು – ಸಾಹಿತಿಗಳು, ಕಲಾವಿದರು, ಬುದ್ಧಿಜೀವಿಗಳು, ಧಾರ್ಮಿಕ ನಾಯಕರು, ಸೆಕ್ಯುಲರ್ ರಾಜಕಾರಣಿಗಳು, ವಕೀಲರು, ನ್ಯಾಯಾಧೀಶರು, ಅಧಿಕಾರಿಗಳು, ಕಾರ್ಮಿಕರು, ರೈತರು, ಕೃಷಿಕೂಲಿಕಾರರು, ವಿದ್ಯಾರ್ಥಿಗಳು, ಅಧ್ಯಾಪಕರು, ಯುವಜನರು, ಮಹಿಳೆಯರು – ಭಾಗವಹಿಸಿದರು. ಹಲವು ಕಡೆ ಮುಸ್ಲಿಂ ಸಮುದಾಯದ ಜನ ದೊಡ್ಡ ರೀತಿಯಲ್ಲಿ ಉತ್ಸಾಹದಿಂದ ಭಾಗವಹಿಸಿದರು. ಹಲವು ಕಡೆ ಜಿಲ್ಲಾ/ತಾಲೂಕು ಕೇಂದ್ರಗಳಲ್ಲಿ ಒಂದು ಕೇಂದ್ರ ಪ್ರದೇಶದಲ್ಲಿ ಅಥವಾ ಅಲ್ಲಿನ ಒಂದು ತುದಿಯಿಂಥ ಇನ್ನೊಂದು ತುದಿಯವರೆಗೆ, ಅಥವಾ ಜಿಲ್ಲೆ–ತಾಲೂಕಿನ ಹೆದ್ದಾರಿಯುದ್ದಕ್ಕೂ ಮಾನವ ಸರಪಣಿ ರಚಿಸಲಾಯಿತು. ಹಲವು ಸ್ಥಳಗಳಲ್ಲಿ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಒಟ್ಟಾಗಿ ಮಾನವ ಸರಪಣಿ ರಚಿಸಿದರು ಅಥವಾ ಕೇಂದ್ರೀಯ ಪ್ರದೇಶ್ರದ ಸರಪಣಿಗೆ ಸೇರಿಕೊಂಡರು. ಹಲವು ಕೈಗಾರಿಕಾ ಎಸ್ಟೇಟುಗಳಲ್ಲಿ ಅಲ್ಲಿನ ಕಾರ್ಮಿಕರು ಮಾನವ ಸರಪಣಿ ರಚಿಸಿದರು ಅಥವಾ ಕೇಂದ್ರದ ಸರಪಣಿಗೆ ಸೇರಿಕೊಂಡರು. ಇದನ್ನು ಸಾಧ್ಯ ಮಾಡುವಲ್ಲಿ ಪ್ರತಿಯೊಂದು ಸ್ಥಳದಲ್ಲಿ ರಚಿತವಾಗಿ ಹಲವು ವಾರಗಳ ಕಾಲ ಕೆಲಸ ಮಾಡಿದ ಸಿದ್ಧತಾ ಸಮಿತಿಗಳ ಭಾಗವಾಗಿ ರೈತ–ಕಾರ್ಮಿಕ–ಕೃಷಿಕೂಲಿ ಸಂಘಟನೆಗಳು, ವಿದ್ಯಾರ್ಥಿ–ಯುವಜನ–ಮಹಿಳಾ ಸಂಘಟನೆಗಳು, ದಲಿತ–ಆದಿವಾಸಿ ಸಂಘಟನೆಗಳು, ಎಡ ಮತ್ತು ಸೆಕ್ಯುಲರ್ ರಾಜಕೀಯ ಪಕ್ಷಗಳು, ರಾಜಕಾರಣಿಗಳು, ಸಾಮಾಜಿಕ–ಸಾಂಸ್ಕೃತಿಕ ಚಳುವಳಿಗಳು, ಗುಂಪುಗಳು, ವ್ಯಕ್ತಿಗಳು ಮಹತ್ವದ ಪಾತ್ರ ವಹಿಸಿವೆ. ಸಿಪಿಐ(ಎಂ) ಮತ್ತು ಎಡ–ಪ್ರಗತಿಪರ ಸಾಮೂಹಿಕ ಸಂಘಟನೆಗಳು ಹೆಚ್ಚಿನ ಸ್ಥಳಗಳಲ್ಲಿ ಮುಂಚೂಣಿ ಪಾತ್ರ ವಹಿಸಿದ್ದವು..

ಮಾನವ ಸರಪಣಿಯಲ್ಲಿ ನೆರೆದವರು ಸೌಹಾರ್ದತೆ ಸಂದೇಶ ಸಾರುವ 40–50 ವೈವಿಧ್ಯಮಯ ಪೋಸ್ಟರುಗಳ ಪ್ರತಿಗಳನ್ನು ಕುತಿಗೆಯ ಮೇಲೆ ಹಾಕಿಕೊಂಡಿದ್ದರು. ಸರಪಣಿಯಲ್ಲಿ ಮಧ್ಯೆ ಮಧ್ಯೆ ಅದೇ ರೀತಿ ಹತ್ತಾರು ರೀತಿಯ ಸೌಹಾರ್ದತೆ ಸಂದೇಶ ಹೊತ್ತ ಬ್ಯಾನರುಗಳನ್ನು ಹಿಡಿದಿದ್ದರು. ಕೆಲವು ಕಡೆ ಸರಪಣಿಯ ಪೂರ್ವ–ತಯಾರಿಯಾಗಿ ನಡೆಸಲಾದ ಕಾರ್ಯಾಗಾರಗಳಲ್ಲಿ ಸಾಮೂಹಿಕವಾಗಿ ಹಲವು ಕಲಾವಿದರು ತಯಾರಿಸಿದ ದೀರ್ಘ ಕಲಾಕೃತಿಗಳನ್ನೊಳಗೊಂಡ ಬ್ಯಾನರುಗಳನ್ನು ಹಿಡಿದಿದ್ದರು. ಅದನ್ನು ಆ ಮೇಲೆ ನಡೆದ ಸಭೆಯಲ್ಲಿ ಪ್ರದರ್ಶಿಸಲಾಯಿತು ಕೂಡಾ. ಮಾನವ ಸರಪಣಿ ರಚಿಸುವುದಲ್ಲದೆ ಹೆಚ್ಚಿನ ಸ್ಥಳಗಳಲ್ಲಿ ಅದಕ್ಕಿಂತ ಮೊದಲು ಅಥವಾ ಆ ಮೇಲೆ ಸಭೆ ನಡೆಸಲಾಯಿತು. ಸಭೆಯಲ್ಲಿ ಸೌಹಾರ್ದತೆ ಸಂದೇಶ ಸಾರುವ ಹಾಡುಗಳು, ಬೀದಿ ನಾಟಕಗಳು, ಘೋಷಣೆಗಳು ಇದ್ದವು. ಅಲ್ಲದೆ ಸಿದ್ಧತಾ ಸಮಿತಿಯಲ್ಲಿ ಭಾಗವಹಿಸಿದ್ದ ಸಂಘಟನೆಗಳ ನಾಯಕರು ಮತ್ತು ಆಹ್ವಾನಿತ ವಿವಿಧ ಕ್ಷೇತ್ರಗಳ ಗಣ್ಯ ನಾಯಕರು ಸೌಹಾರ್ದತೆಗೆ ರಾಜ್ಯದಲ್ಲಿ ಎದುರಾಗಿರುವ ಸವಾಲುಗಳು ಮತ್ತು ಅದನ್ನು ತೊಡೆಯುವ ಬಗೆ ಕುರಿತು ಮಾತನಾಡಿದರು.

ಕೆಲವು ಕಡೆ ಮಾನವ ಸರಪಣಿ ರಚಿಸಿದಾಗಲೇ ಅಥವಾ ಸಭೆಯಲ್ಲಿ ಇಡೀ ರಾಜ್ಯದಾದ್ಯಂತ – ಕರ್ನಾಟಕದ ಸೌಹಾರ್ದ ಪರಂಪರೆಯನ್ನು ಸ್ಮರಿಸುವ, ಸಂವಿಧಾನದ ಆಶಯಗಳನ್ನು ದೃಢವಾಗಿ ಪ್ರತಿಪಾದಿಸುವ, ಕೋಮು ಸಾಮರಸ್ಯವನ್ನು ಕಾಪಾಡುವ, ಕೋಮುವಾದ, ಮೂಲಭೂತವಾದ, ಭಯೋತ್ಪಾದನೆಯನ್ನು ಹಿಮ್ಮೆಟ್ಟಿಸುವ – ಪೂರ್ವನಿರ್ಧಾರಿತವಾದ ಒಂದೇ ಪ್ರತಿಜ್ಞೆಯನ್ನು ನೆರೆದವರು ತೆಗೆದುಕೊಂಡರು. 2+ ಲಕ್ಷ ಜನ ರಾಜ್ಯದಾದ್ಯಂತ 160+ ಸ್ಥಳಗಳಲ್ಲಿ ಒಂದೇ ಸಮಯದಲ್ಲಿ ಅತ್ಯಂತ ಸಕಾಲಿಕವಾದ ಒಂದೇ ಪ್ರತಿಜ್ಞೆಯನ್ನು ತೆಗೆದುಕೊಳ್ಳುವುದು ಅದರಷ್ಟಕ್ಕೆ ಒಂದು ವಿಶೇಷ ಚಾರಿತ್ರಿಕ ಸಂಗತಿಯಾಗಿತ್ತು. (ಪ್ರತಿಜ್ಞೆಯ ಪೂರ್ಣಪಾಠ ಬಾಕ್ಸಿನಲ್ಲಿದೆ). ಪ್ರತಿಜ್ಞೆಯನ್ನು ಭಾಗವಹಿಸಿದ ಗಣ್ಯ ವ್ಯಕ್ತಿಯೊಬ್ಬರು ಬೋಧಿಸಿದರು.

ತುಮಕೂರಿನಲ್ಲಿ ಎಚ್.ಎಸ್. ದೊರೆಸ್ವಾಮಿ; ಮೈಸೂರಿನಲ್ಲಿ ದೇವನೂರ ಮಹಾದೇವ ಮತ್ತು ಪ್ರಕಾಶ ರೈ; ಶಿವಮೊಗ್ಗದಲ್ಲಿ ರಾಜೇಂದ್ರ ಚೆನ್ನಿ ಮತ್ತು ಕೇಶವ ಶರ್ಮ; ಉಡುಪಿಯಲ್ಲಿ ಜಿ. ರಾಜಶೇಖರ್; ಬೆಂಗಳೂರಿನ ಟೌನ್ ಹಾಲಿನಲ್ಲಿ ನಿಡುಮಾಮಿಡಿ ಸ್ವಾಮೀಜಿ, ಚಂದ್ರಶೇಖರ್ ಪಾಟೀಲ, ನ್ಯಾ. ವಿ. ಗೋಪಾಲ ಗೌಡ, ಡಾ. ಜಿ. ರಾಮಕೃಷ್ಣ, ಕೆ. ಮರುಳಸಿದ್ದಪ್ಪ, ಬರಗೂರು ರಾಮಚಂದ್ರಪ್ಪ, ನ್ಯಾ. ನಾಗಮೋಹನದಾಸ್, ಅರವಿಂದ ಮಾಲಗತ್ತಿ, ಸುಕನ್ಯಾ ಮಾರುತಿ ಮತ್ತು ನಟ ಚೇತನ್; ಬೆಂಗಳೂರಿನ ಮಲ್ಲೇಶ್ವರಂನಲ್ಲಿ ಕೊ. ಚೆನ್ನಬಸಪ್ಪ ಮತ್ತು ಡಾ. ಎಲ್. ಹನುಂಮತಯ್ಯ; ಮಂಗಳೂರಿನಲ್ಲಿ ನರೇಂದ್ರ ನಾಯಕ್, ದಿನೇಶ ಅಮಿನ್‌ಮಟ್ಟು, ಕಾಂಗ್ರೆಸ್ ಶಾಸಕ ಅಭಯಚಂದ್ರ ಜೈನ್; ಬಂಟ್ವಾಳದಲ್ಲಿ ರಾಜ್ಯ ಮಂತ್ರಿ ರಮಾನಾಥ ರೈ; ಬೆಳ್ತಂಗಡಿಯಲ್ಲಿ ಕಾಂಗ್ರೆಸ್ ಶಾಸಕ ವಸಂತ ಬಂಗೇರ – ಮುಂತಾದ ಗಣ್ಯರು ವಿವಿಧೆಡೆಯಲ್ಲಿ ಮಾನವ ಸರಪಣಿಯಲ್ಲಿ ಭಾಗವಹಿಸಿದ್ದರು. ಹಿರಿಯ ಸಿಪಿಐ(ಎಂ) ನಾಯಕರೂ ರಾಜ್ಯದ ವಿವಿಧೆಡೆ – ಕಾ. ಜಿ.ವಿ.ಶ್ರೀರಾಮರೆಡ್ಡಿ ಬಾಗೇಪಲ್ಲಿಯಲ್ಲಿ; ಕಾ. ವಿ.ಜೆ.ಕೆ. ನಾಯರ್, ಕಾ. ಜಿ.ಎನ್. ನಾಗರಾಜ್, ಕಾ. ಮೀನಾಕ್ಷಿಸುಂದರಂ, ಕಾ. ಕೆ.ಎನ್. ಉಮೇಶ್ ಬೆಂಗಳೂರಿನಲ್ಲಿ; ಕಾ. ಎಸ್. ವರಲಕ್ಷ್ಮಿ ಹಾಸನದಲ್ಲಿ; ಕಾ. ನಿತ್ಯಾನಂದಸ್ವಾಮಿ ಗಂಗಾವತಿಯಲ್ಲಿ; ಕಾ. ಯು. ಬಸವರಾಜ್ ಬಳ್ಳಾರಿಯಲ್ಲಿ; ಕಾ. ಕೆ.ಆರ್.ಶ್ರೀಯಾನ್, ಕಾ. ವಸಂತ ಆಚಾರಿ, ಕಾ. ಜೆ. ಬಾಲಕೃಷ್ಣ ಶೆಟ್ಟಿ ಮಂಗಳೂರಿನಲ್ಲಿ; ಕಾ. ಕೆ. ಶಂಕರ್ ಕುಂದಾಪುರದಲ್ಲಿ – ಭಾಗವಹಿಸಿದ್ದರು.

ಈ ಚಾರಿತ್ರಿಕ ಮಾನವ ಸರಪಣಿ ಕರ್ನಾಟಕದಲ್ಲಿ ಕೋಮುವಾದಿ ಫ್ಯಾಸಿಸ್ಟ್ ಶಕ್ತಿಗಳು ಅಪಾಯಕಾರಿ ಮಟ್ಟದಲ್ಲಿ ಬಲಗೊಳ್ಳುತ್ತಿದ್ದು ಅವುಗಳ ವಿರುದ್ಧ ಸೆಕ್ಯುಲರ್ ಶಕ್ತಿಗಳು ಒಂದಾಗಿ ಪ್ರತಿರೋಧ ಒಡ್ಡಲು ಆರಂಭಿಸಿರುವ ದೀರ್ಘ ಪ್ರಕ್ರಿಯೆಯ ಸರಣಿಯ ಫಲವಾಗಿ ಬಂದ, ಅದರ ಭಾಗವಾದ ಒಂದು ಪ್ರಮುಖ ಕೊಂಡಿ ಹಾಗೂ ಬಿಂದು. ಇದು ಕರ್ನಾಟಕದಲ್ಲಿ ಮಾತ್ರವಲ್ಲ ದೇಶದಲ್ಲೇ ತೀವ್ರ ಪ್ರತಿಕ್ರಿಯೆಗೆ ಕಾರಣವಾದ ಡಾ. ಎಂ.ಎಂ. ಕಲಬುರ್ಗಿ ಅವರ ಹತ್ಯೆಯಿಂದ ಆರಂಭವಾಯಿತು. ಅದರ ವಿರುದ್ಧ ಸಿಡಿದ ಆಕ್ರೋಶ, ಪ್ರತಿಭಟನೆ, ಪ್ರತಿರೋಧಗಳು – ಸಾಹಿತಿ–ಕಲಾವಿದರ "ಪ್ರಶಸ್ತಿ ವಾಪಸಿ"ಗೆ, ಡಾ. ಕಲಬುರ್ಗಿ ಹತ್ಯಾ ವಿರೋಧಿ ಸಮಿತಿ ಧಾರವಾಡದಲ್ಲಿ ಸಂಘಟಿಸಿದ ಸಮಾವೇಶ, ಅಖಿಲ ಭಾರತ ಮಟ್ಟದಲ್ಲಿ ಮತ್ತು ಕರ್ನಾಟಕದಲ್ಲಿ ದಕ್ಷಿಣಾಯಣದ ಸುತ್ತ ನೆರೆದ ಸಾಹಿತಿ–ಕಲಾವಿದರ ಸಮಾವೇಶಗಳ, ಮೂಲಕ ಹಾಯುತ್ತಾ ಸಾಗಿತು. ಸಂಘ ಪರಿವಾರದ ಕೋಟೆಯಾದ ಮಂಗಳೂರಿನಲ್ಲಿ ಫೆಬ್ರುವರಿ 2017ರಲ್ಲಿ ಅದಕ್ಕೆ ಸಡ್ಡು ಹೊಡೆದು ಸಿಪಿಐ(ಎಂ) ನಡೆಸಿದ ಸೌಹಾರ್ದತಾ ಸಮಾವೇಶ ಈ ಮುನ್ನಡೆಯಲ್ಲಿ ಒಮದು ತಿರುಗು ಬಿಂದು ಆಯಿತು. ಬಿಜೆಪಿ–ಸಂಘಿ ಹಿಂಸಾಚಾರ ಬಂದ್ ಇದ್ದಾಗ್ಯೂ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಭಾಗವಹಿಸಿ ಕೋಮುವಾದಿ ಶಕ್ತಿಗಳಿಗೆ ಪ್ರತಿರೋಧ ಸಾಧ್ಯ ಎಂಬ ವಿಶ್ವಾಸವನ್ನು ಸೆಕ್ಯುಲರ್ ಶಕ್ತಿಗಳಲ್ಲಿ ತುಂಬುವ ಮೂಲಕ ರಾಜ್ಯ ಮತ್ತು ದೇಶದ ಗಮನ ಸೆಳೆಯಿತು.



ಇವೆಲ್ಲದರ ಒಟ್ಟು ಪರಿಣಾಮವಾಗಿ ಹಾಗೂ ಮುಂದುವರಿಕೆಯಾಗಿ ಸೆಪ್ಟೆಂಬರ್ 5, 2017ರಂದು "ಸೌಹಾರ್ದತೆಗಾಗಿ ಕರ್ನಾಟಕ" ವೇದಿಕೆಯ ಮೊದಲ ಸ್ಥಾಪನಾ ಸಮಾವೇಶವನ್ನು ಬೆಂಗಳೂರಿನ ಟೌನ್ ಹಾಲಿನಲ್ಲಿ ನಡೆಸಲಾಯಿತು. ಆ ಸಮಾವೇಶದಲ್ಲಿ ಮೊದಲ ಬಾರಿಗೆ ಜನವರಿ 30ರ ಮಾನವ ಸರಪಣಿಗೆ ಕರೆ ಕೊಡಲಾಯಿತು. ಕಾಕತಾಳೀಯವೋ ಅಲ್ಲವೋ ಗೊತ್ತಿಲ್ಲ, ಅದೇ ಸಂಜೆ ಗೌರಿ ಲಂಕೇಶ್ ಅವರ ಕೊಲೆ ಆಯಿತು. ಇದು ಸೆಕ್ಯುಲರ್ ಶಕ್ತಿಗಳ ಆಕ್ರೋಶ, ಪ್ರತಿರೋಧದ ಕೆಚ್ಚು ಹಾಗೂ ದೃಢತೆಗಳನ್ನು ಇನ್ನಷ್ಟು ಹೆಚ್ಚಿಸಿದವು. ಆ ಮೇಲೆ ನಡೆದ 'ನಾನೂ ಗೌರಿ' ಸಮಾವೇಶ ಸೆಕ್ಯುಲರ್ ಶಕ್ತಿಗಳ ಪ್ರತಿರೋಧದ ಮುಂದಿನ ಹೆಜ್ಜೆ ಆಯಿತು. ಟಿಪ್ಪು ಜಯಂತಿ, ಹನುಮ ಜಯಂತಿ, ದತ್ತ ಜಯಂತಿ ಹೀಗೆ ಹತ್ತು ಹಲವು ನೆಪಗಳನ್ನೊಡ್ಡಿ ಬಿಜೆಪಿ–ಸಂಘ ಗ್ಯಾಂಗ್, ಮುಂಬರುವ ವಿಧಾನಸಭಾ ಚುನಾವಣೆಗಳನ್ನು ಇಟ್ಟುಕೊಂಡು, ಹಾಗೂ ದಕ್ಷಿಣ–ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹಾಗೂ ಸಾಧ್ಯವಿದ್ದಲ್ಲೆಲ್ಲ ಅವು ಆರಂಭಿಸಿದ 'ಡೆಡ್ ಬಾಡಿ ರಾಜಕೀಯ', ಕೋಮು ಹಿಂಸಾಚಾರದ ಮೂಲಕ ಕೋಮು ಧ್ರುವೀಕರಣಕ್ಕೆ ವ್ಯವಸ್ಥಿತ ಪ್ರಯತ್ನ ನಡೆಸಿರುವ ರಾಜ್ಯದಾದ್ಯಂತ ಕೋಮುವಾದಿ–ಫ್ಯಾಸಿಸ್ಟ್ ಶಕ್ತಿಗಳ ಅಪಾಯ ಹಾಗೂ ಅದಕ್ಕೆ ತೀವ್ರ ಪ್ರತಿರೋಧದ ಅಗತ್ಯವನ್ನು, ಇನ್ನೂ ಹೆಚ್ಚಿನ ಜನವಿಭಾಗಗಳಿಗೆ ಮನವರಿಕೆ ಮಾಡಿಕೊಟ್ಟಿದೆ. ಈ ಹಿನ್ನೆಲೆಯಲ್ಲಿ ಜನವರಿ 30ರ ಮಾನವ ಸರಪಣಿಗೆ ಪೂರ್ವಭಾವಿಯಾಗಿ ಅದು ಯೋಜಿತವಾದ ಎಲ್ಲಾ ಜಿಲ್ಲೆಗಳಲ್ಲೂ 160+ ಸ್ಥಳಗಳಲ್ಲೂ ಸಮಾವೇಶಗಳು, ಸಿದ್ಧತಾ ಸಮಿತಿ ಸಭೆಗಳು, ಜಾತಾಗಳು, ಪ್ರಸಾರಾಂದೋಲನಗಳಿಗೆ ಭಾರಿ ಜನಸ್ಪಂದನ ಸಿಕ್ಕಿದೆ. ಹಿಂದಿನ ಸಂಚಿಕೆಗಳಲ್ಲಿ ವರದಿ ಮಾಡಿದಂತೆ ಸಾಮಾಜಿಕ ಮಾಧ್ಯಮಗಳಲ್ಲಿ 5 ರೀತಿಯ ಪೋಸ್ಟರುಗಳು ಮತ್ತು ವಿಡಿಯೋಗಳ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಲಾಯಿತು.

ಈ ಮಾನವ ಸರಪಣಿ ಕರ್ನಾಟಕದ ರಾಜಕೀಯ ಸಾಂಸ್ಕೃತಿಕ ಚರಿತ್ರೆಯಲ್ಲೇ ಒಂದು ಹೊಸ ಮೈಲಿಗಲ್ಲು. ಇದರ ಮೂಲಕ "ಸೌಹಾರ್ದತೆಗಾಗಿ ಕರ್ನಾಟಕ" ವೇದಿಕೆ ಕರ್ನಾಟಕದ ಎಲ್ಲಾ ಕೋಮುವಾದಿ–ಫ್ಯಾಸಿಸ್ಟ್ ವಿರೋಧಿ ಸೆಕ್ಯುಲರ್ ಶಕ್ತಿಗಳ ಐಕ್ಯ ವೇದಿಕೆಯಾಗಿ ಹೊಮ್ಮಿದೆ. ಈ ವೇದಿಕೆಯನ್ನು ಬಲಪಡಿಸುವ, ಜನವರಿ 30ರಂದು ಕೈಗೊಂಡ ಪ್ರತಿಜ್ಞೆಯನ್ನು ಸಾಕಾರಗೊಳಿಸುವ, ಇನ್ನೂ ಇದರ ಹೊರಗಿರುವ ಸೆಕ್ಯುಲರ್ ಶಕ್ತಿಗಳನ್ನು ವ್ಯಾಪಕವಾಗಿ ಒಳಗೊಳ್ಳುವ, ಇನ್ನೂ ಬೃಹತ್ ಸಂಖ್ಯೆಯಲ್ಲಿ ಜನರನ್ನು ಮುಟ್ಟುವ ಸತತ ಸೃಜನಶೀಲ ಚಟುವಟಿಕೆಗಳನ್ನು ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ, ಆ ಮೂಲಕ ಸೌಹಾರ್ದತೆ, ಸೆಕ್ಯುಲರ್ ಧೋರಣೆಗಳನ್ನು ಬಹುಪಾಲು ಜನತೆಯ 'ಕಾಮನ್ ಸೆನ್ಸ್' ಆಗಿಸುವ – ಜವಾಬ್ದಾರಿ ಎಲ್ಲಾ ಸೆಕ್ಯುಲರ್ ಶಕ್ತಿಗಳ ಮೇಲಿದೆ. ಈ ಮಾನವ ಸರಪಣಿಯ ಯಶಸ್ಸು ಇವುಗಳತ್ತ ದಿಟ್ಟತನದಿಂದ ಸಾಗುವ ಸ್ಫೂರ್ತಿ ಕೊಡಲಿ.

ಪ್ರತಿಜ್ಞೆ

* ಭಾರತೀಯ ಪ್ರಜೆಗಳಾದ ನಾವು, ಸೌಹಾರ್ದತೆಗಾಗಿ ಮಾನವ ಸರಪಳಿಯನ್ನು ರಚಿಸುವ ಮೂಲಕ ಸಾವಿರಾರು ವರುಷಗಳ ಕರ್ನಾಟಕದ ಸೌಹಾರ್ದ ಪರಂಪರೆಯನ್ನು ಸ್ಮರಿಸುತ್ತೇವೆ.
* ಪ್ರಜಾಪ್ರಭುತ್ವ, ಅಭಿವ್ಯಕ್ತಿ ಸ್ವಾತಂತ್ರ್ಯ ಸಮಾನತೆ, ಧರ್ಮ–ನಿರಪೇಕ್ಷತೆ, ಸಾಮಾಜಿಕ ನ್ಯಾಯ, ಜನತೆಯ ಸಾರ್ವಭೌಮತ್ವ ವನ್ನು ಮತ್ತು ಈ ಉದಾತ್ತ ಮೌಲ್ಯಗಳನ್ನು ಹೊಂದಿರುವ ನಮ್ಮ ಸಂವಿಧಾನದ ಆಶಯಗಳನ್ನು ದೃಢವಾಗಿ ಪ್ರತಿಪಾದಿಸುತ್ತೇವೆ.
* ಶಾಂತಿ, ಸ್ನೇಹ, ಸೌಹಾರ್ದತೆ, ಸಹಬಾಳ್ವೆಗೆ ಬದ್ಧರಾಗಿ ಕೋಮು ಸಾಮರಸ್ಯವನ್ನು ನಾವು ಕಾಪಾಡಿಕೊಂಡು ಬರುತ್ತೇವೆ.
* ಮಹಾತ್ಮಾ ಗಾಂಧೀಜಿಯವರು ಹುತಾತ್ಮರಾದ ಈ ದಿನದಂದು ಕೋಮುವಾದ, ಮತೀಯ ಮೂಲಭೂತವಾದ, ಎಲ್ಲಾ ಬಗೆಯ ಭಯೋತ್ಪಾದನೆಯನ್ನು ಹಿಮ್ಮೆಟ್ಟಿಸಲು ಪಣ ತೊಡುತ್ತೇವೆ. 'ಸರ್ವ ಜನಾಂಗದ ಶಾಂತಿಯ ತೋಟ'ವಾಗಿರುವ ಕರ್ನಾಟಕದ ವೈವಿಧ್ಯತೆಯ ಸಂಸ್ಕೃತಿಯನ್ನು ಸಂರಕ್ಷಿಸುತ್ತೇವೆ ಎಂದು ಪ್ರತಿಜ್ಞೆ ಸ್ವೀಕರಿಸುತ್ತಿದ್ದೇವೆ.

“ಸೌಹಾರ್ದತೆಗಾಗಿ ಕರ್ನಾಟಕ” ಮೈಕೊಡವಿ ಎದ್ದು ನಿಂತಾಗ..



ಟೌನ್ ಹಾಲಿನ ಎದುರು ಸಭೆ



ಟೌನ್ ಹಾಲಿನ ಎದುರು ರಾಜ್ಯ ಸಿದ್ಧತಾ ಸಮಿತಿಯ ಸದಸ್ಯರು



ಜಿ.ವಿ.ಶ್ರೀರಾಮರೆಡ್ಡಿ ಬಾಗೇಪಲ್ಲಿಯಲ್ಲಿ



ರಾಜೇಂದ್ರ ಚೆನ್ನಿ ಕೇಶವ ಶರ್ಮ ಶಿವಮೊಗ್ಗದಲ್ಲಿ



ಪ್ರಕಾಶ ರೈ ಮೈಸೂರಲ್ಲಿ



ದೇವನೂರ ಮಹಾದೇವ ಮೈಸೂರಿನಲ್ಲಿ



ಕೊ.ಚೆನ್ನಬಸಪ್ಪ, ಎಲ್.ಹನುಮಂತಯ್ಯ ಮಲ್ಲೇಶ್ವರಂ ನಲ್ಲಿ



ಎಚ್,ಎಸ್. ದೊರೆಸ್ವಾಮಿ ತುಮಕೂರಿನಲ್ಲಿ



ನಿತ್ಯಾನಂದ ಸ್ವಾಮಿ ಗಂಗಾವತಿಯಲ್ಲಿ



ದಿನೇಶ ಅಮಿನ್ ಮಟ್ಟು ಮಂಗಳೂರಲ್ಲಿ



ರಮಾನಾಥ ರೈ ದ.ಕ. ದ ಬಿ ಸಿ ರೋಡಿನಲ್ಲಿ



ಕೆ.ಎಸ್. ಭಗವಾನ್ ಮೈಸೂರಲ್ಲಿ



ಬೆಂಗಳೂರಿನ ಎಪಿಎಸ್ ಕಾಲೇಜಿನಲ್ಲಿ



ಮುಸ್ಲಿಮರು ಸರಪಣಿಯಲ್ಲಿ – ಬಾಗೇಪಲ್ಲಿ



ಬಾಗೇಪಲ್ಲಿಯಲ್ಲಿ

ದಾಂಡೇಲಿಯಲ್ಲಿ



ಡಾಕ್ಟರುಗಳು ಸರಪಣಿಯಲ್ಲಿ



ಬೆಂಗಳೂರಿನ ಬೊಮ್ಮನಹಳ್ಳಿಯಲ್ಲಿ



ಬೆಳಗಾವಿಯಲ್ಲಿ





ಹೊಸಪೇಟೆ



ಹಗರಿಬೊಮ್ಮನಹಳ್ಳಿಯಲ್ಲಿ ಸಭೆ



ಕೆ.ಜಿ.ಎಫ್.ನಲ್ಲಿ



ಗಜೇಂದ್ರಗಡದಲ್ಲಿ



ದಾಸರಹಳ್ಳಿ ಮೆಟ್ರೊ ಸ್ಟೇಶನ್ ಬಳಿ ಸಭೆ



ದಾವಣಗೆರೆಯಲ್ಲಿ



160+ ಸ್ಥಳಗಳಲ್ಲಿ 2+ ಲಕ್ಷ ಜನ ಭಾಗವಹಿಸಿದ
ಚಾರಿತ್ರಿಕ ಮಾನವ ಸರಪಣಿ

ಜನವರಿ 30, 2018ರ ಚಾರಿತ್ರಿಕ ಮಾನವ ಸರಪಣಿಯಲ್ಲಿ 160+ ಸ್ಥಳಗಳಲ್ಲಿ 2+ ಲಕ್ಷ ಜನ ಉತ್ಸಾಹದಿಂದ ಭಾಗವಹಿಸಿದರು. ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಜಿಲ್ಲಾವಾರು ವಿವರಗಳು ಇಲ್ಲಿವೆ.

ಬೆಂಗಳೂರು

ಬೆಂಗಳೂರಿನಲ್ಲಿ ನಗರ ಕೇಂದ್ರದಲ್ಲಿರುವ ಟೌನ್ ಹಾಲಿನಿಂದ ಮಲ್ಲೇಶ್ವರಂ ಯಶವಂತಪುರ ಹಾದಿಯಲ್ಲಿ ತುಮಕೂರು ರಸ್ತೆಯಲ್ಲಿರುವ ಕೆನ್ನಾ ಮೆಟಲ್ಸ್ ವರೆಗೆ ಮತ್ತು ಟೌನ್ ಹಾಲಿನಿಂದ ಮೈಸೂರು ರೋಡಿನಲ್ಲಿ ಕೆಂಗೇರಿಯವರೆಗೆ ಇರುವ ಪ್ರದೇಶಗಳಲ್ಲಿ ಹಾಗೂ ನಗರದ ಉಳಿದೆಡೆ ಸಾಧ್ಯವಿದ್ದಲ್ಲೆಲ್ಲಾ ಮಾನವ ಸರಪಣಿ ಯೋಜಿಸಲಾಗಿತ್ತು. ಟೌನ್ ಹಾಲಿನಿಂದ ಕೆನ್ನಾ ಮೆಟಲ್‌ವರೆಗಿನ ಹಾದಿಯಲ್ಲಿ 12 ಕಡೆ ಸರಪಣಿ ರಚಿಸಲಾಯಿತೆಂದು ವರದಿಯಾಗಿದೆ. ಸರಪಣಿ ರಚಿಸಿದ ನಂತರ ಮಂತ್ರಿ ಮಾಲ್ ಎದುರು, ಮಲ್ಲೇಶ್ವರಂನಲ್ಲಿ, ದಾಸರಹಳ್ಳಿ ಮೆಟ್ರೊ ಮುಂತಾದ ಕಡೆ ಸಭೆಗಳೂ ನಡೆದಿವೆ.

ಮೈಸೂರು ರಸ್ತೆಯಲ್ಲಿ ಟೌನ್ ಹಾಲ್ ನಿಂದ ಸಿರ್ಸಿ ಸರ್ಕಲ್ ವರೆಗೆ, ಕೆಂಗೇರಿ, ಬಿಡದಿ, ಜೈರಾಮದಾಸ್ (ಕೇಂಗೇರಿ-ಜ್ಞಾನಭಾರತಿ ಹಾದಿ) ಹಲವು ಕಡೆ ಮಾನವ ಸರಪಣಿ ಮತ್ತು ಸಭೆಗಳು ನಡೆದಿವೆ. ಇದಲ್ಲದೆ ಬೊಮ್ಮನಹಳ್ಳಿ (ರೂಪೇನ ಅಗ್ರಹಾರದಿಂದ ಹೊಸ ರೋಡು ವರೆಗೆ 5 ಕಿ.ಮಿ.) ಮತ್ತು ಆನೇಕಲ್ ತಾಲ್ಲೂಕಿನಲ್ಲಿ (ಹೆಬ್ಬಗೋಡಿಯಿಂದ ಚಂದಾಪುರದವರೆಗೆ 3 ಕಿಮೀ) ಮಾನವ ಸರಪಣಿ ಮತ್ತು ಸಭೆಗಳು ನಡೆದಿವೆ. ಐದು ಕಾಲೇಜುಗಳಿಂದ ಬಸವನಗುಡಿ ಗಾಂಧಿ ಬಜಾರ್ ಸುತ್ತಮುತ್ತ 4 ಸಾವಿರ ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ಯಾರಬ್ ನಗರದಿಂದ ಮೆರವಣಿಗೆ ಹೊರಟು ಬನಶಂಕರಿಯಲ್ಲಿ ಮಾನವ ಸರಪಳಿ ರಚಿಸಲಾಗಿದೆ. ನಗರ ಪ್ರದೇಶದ ಹೊರಗಿರುವ ರಾಮನಗರ, ನೆಲಮಂಗಲ, ಹೊಸಕೋಟೆ, ದೊಡ್ಡಬಳ್ಳಾಪುರ ಗಳಲ್ಲೂ ಕಾರ್ಯಕ್ರಮ ನಡೆದಿದ್ದಾಗಿ ತಿಳಿದು ಬಂದಿದೆ.

ಟೌನ್ ಹಾಲಿನಲ್ಲಿ ನಡೆದ ಮುಖ್ಯ ಸಮಾರಂಭದಲ್ಲಿ ಸೌಹಾರ್ದ ಗೀತೆಗಳು, ಬೀದಿ ನಾಟಕ ಇತ್ತು. ರಾಜ್ಯ ಮಟ್ಟದ ಸಿದ್ಧತಾ ಸಮಿತಿಯ ಹೆಚ್ಚಿನ ಸದಸ್ಯರು ಇಲ್ಲಿ ಭಾಗವಹಿಸಿ ಚುಟುಕಾಗಿ ಮಾತನಾಡಿದರು. ನಿಡುಮಾಮಿಡಿ ಸ್ವಾಮೀಜಿ ಪ್ರತಿಜ್ಞೆ ಬೋಧಿಸಿದರು.

ಒಟ್ಟು ಬೆಂಗಳೂರಿನಲ್ಲಿ ಸುಮಾರು 30 ಸ್ಥಳಗಳಲ್ಲಿ ಸುಮಾರು 25-30 ಸಾವಿರ ಜನ ಭಾಗವಹಿಸಿದ್ದಾರೆ. ಕಾರ್ಮಿಕರು ಮತ್ತು ಮುಸ್ಲಿಮರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದು ವಿಶೇಷವಾಗಿದೆ.

> ರಾಜಕಾರಣಕ್ಕಾಗಿ ಜಾತಿ, ಧರ್ಮ, ಕೋಮುಗಳ ನಡುವೆ ಸಾಮರಸ್ಯ ಕದಡುವ ಪ್ರಯತ್ನ ನಡೆಯುತ್ತಿದೆ. ಇಂದು ದೇಶ ಒಡೆದ ಗಾಜಿನ ಮನೆಯಾಗಿದೆ. ಒಡೆದ ಚೂರಿನಲ್ಲಿ ರಾಜಕಾರಣಿಗಳು ತಮ್ಮ ಮುಖ ತೋರಿಸುತ್ತಿದ್ದಾರೆ. ಇದು ನಮ್ಮ ಪರಂಪರೆಯಲ್ಲ. ದೇಶವು ಸೌಹಾರ್ದ, ಸಾಮರಸ್ಯದ ಪರಂಪರೆಯನ್ನು ಪ್ರತಿಪಾದಿಸಿದೆ
>
> ***– ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ***

> 'ದೇಶ ಇಂದು ಗಂಡಾಂತರದಲ್ಲಿದೆ. ಧರ್ಮ ನಿರಪೇಕ್ಷಿತರಾಗಿರಬೇಕಾದ ಸಚಿವರೇ ಸಂವಿಧಾನ ವಿರೋಧಿಯಾಗಿ, ಕೋಮು ಪ್ರಚೋದನೆ ನೀಡುತ್ತಿದ್ದಾರೆ. ಜನರ ದಿಕ್ಕು ತಪ್ಪಿಸಿ, ನಿಜವಾದ ಸಮಸ್ಯೆಗಳನ್ನು ಮರೆಮಾಚುವ ಪ್ರಯತ್ನ ನಡೆಯುತ್ತಿದೆ. ಕೋಮುಗಲಭೆ ಮೂಲಕ ರಾಜಕೀಯ ಮಾಡಲು ಅವಕಾಶ ನೀಡಬಾರದು'
>
> ***– ವಿ.ಗೋಪಾಲಗೌಡ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ***

ದಕ್ಷಿಣ ಕನ್ನಡ

ಮಂಗಳೂರು ನಗರದ ಕೇಂದ್ರದಲ್ಲಿರುವ ನೆಹರೂ ಮೈದಾನಿನ ಸುತ್ತದ ರಸ್ತೆಯಲ್ಲಿ ಮಾನವ ಸರಪಳಿ ನಡೆದು ಮಂಗಳೂರು ತಾಲೂಕಿನ ಸೌಹಾರ್ದ ಪ್ರೇಮಿಗಳು ಪಾಲ್ಗೊಂಡಿದ್ದರು. ಜಾತ್ಯಾತೀತ ಪಕ್ಷಗಳ ಬೆಂಬಲಿಗರು, ಎಡಪಕ್ಷಗಳ ಬೆಂಬಲಿಗರು, ದಸಂಸ ಬೆಂಬಲಿಗರು, ಕ್ರೈಸ್ತ ಹಾಗೂ ಮುಸ್ಲಿಂ ಅಲ್ಪಸಂಖ್ಯಾಕರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದು ವಿಶೇಷ. ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕ ವಿಲ್ಫ್ರೆಡ್ ಡಿಸೋಜ, ಲೇಖಕಿಯಾದ ಚಂದ್ರಕಲಾ ನಂದಾವರ, ಸಿಪಿಐ(ಎಂ) ಹಿರಿಯ ಮುಖಂಡ ಕೆ.ಆರ್.ಶ್ರೀಯಾನ್, ಸಚಿವರಾದ ಅಭಯಚಂದ್ರ ಜೈನ್, ಮೇಯರ್ ಕವಿತಾ ಸನಿಲ್, ಮಾನವ ಹಕ್ಕುಗಳ ಹೋರಾಟಗಾರ ಪಿ.ಬಿ.ಡೇಸಾ, ಖ್ಯಾತ ವಿಚಾರವಾದಿ ಪ್ರೊ.ನರೇಂದ್ರ ನಾಯಕ್, ಬ್ಯಾರಿ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ಬಿ.ಎ.ಮಹಮ್ಮದ್ ಹನೀಫ್, ಮಾಜಿ ಮೇಯರ್ ಕೆ.ಅಶ್ರಫ್, ದಸಂಸ ಹಿರಿಯ ರಾಜ್ಯ ಸಂಘಟಕ ಎಂ.ದೇವದಾಸ್, ಹಿರಿಯ ಧರ್ಮಗುರು ಫಾ.ಓನಿಲ್ ಡಿಸೋಜ ಮತ್ತಿತರರು ಮಾನವ ಸರಪಳಿಯಲ್ಲಿ ಪಾಲ್ಗೊಂಡಿದ್ದರು. ಬಳಿಕ ನಡೆದ ಸಭೆಯನ್ನುದ್ದೇಶಿಸಿ ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ಡಿವೈಎಫ್‌ಐ ರಾಜ್ಯ ಅಧ್ಯಕ್ಷ ಮುನೀರ್ ಕಾಟಿಪಳ್ಳ, ಚಂದ್ರಕಲಾ ನಂದಾವರ, ಫಾ.ಓನಿಲ್ ಡಿಸೋಜ, ವಿಲ್ಫ್ರೆಡ್ ಡಿಸೋಜ ಮಾತನಾಡಿದರು.

ಬೆಳ್ತಂಗಡಿಯಲ್ಲಿ ಅಂಬೇಡ್ಕರ್ ಭವನದಿಂದ ಬಸ್ ನಿಲ್ದಾಣದವರೆಗೆ ರಚಿತವಾಗಿದ್ದ ಮಾನವಸರಪಳಿಯಲ್ಲಿ 600ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಶಾಸಕ ವಸಂತ ಬಂಗೇರ, ಪ್ರಾಧ್ಯಾಪಕ ಪ್ರೊ.ಅಂಟನಿ ಸಹಭಾಗಿಗಳನ್ನುದ್ದೇಶಿಸಿ ಮಾತನಾಡಿದರು. 95 ವರ್ಷ ವಯಸ್ಸಿನ ಸ್ವಾತಂತ್ರ್ಯ ಹೋರಾಟಗಾರ ಭೋಜರಾಜ ಹೆಗ್ಡೆ, ಧರ್ಮಗುರು ಫಾ.ಬಿನೋಯ್ ಜೋಸೆಫ್, ಮಸಿದಿಯ ಖತೀಬ್ ಹನೀಫ್ ದಾರಿಮಿ, ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಪುತ್ತೂರಿನಲ್ಲಿ ಗಾಂಧಿಕಟ್ಟೆಯಿಂದ ಮುಖ್ಯ ಅಂಚೆಕಚೇರಿ ವರೆಗಿನ ದೇವಸ್ಥಾನ, ಬಸದಿ, ಚರ್ಚ್ ಹಾಗೂ ಮಸೀದಿಯನ್ನೊಳಗೊಂಡ ವ್ಯಾಪ್ತಿಯಲ್ಲಿ ಮಾನವ ಸರಪಳಿಯನ್ನು ನಡೆಸಲಾಯಿತು. ಗಾಂಧಿಕಟ್ಟೆ ಬಳಿ ಸೇರಿದ ಸಭೆಯನ್ನುದ್ದೇಶಿಸಿ ಪ್ರಾಧ್ಯಾಪಕ ಐವಾನ್ ಲೋಬೋ ಮಾತನಾಡಿದರು.



ಸುಳ್ಯ ಬಸ್ ನಿಲ್ದಾಣದ ಬಳಿ ಸೇರಿದ ಸೌಹಾರ್ದ ಪ್ರೇಮಿ ಜನತೆ ರಚಿಸಿದ ಮಾನವ ಸರಪಳಿಯನ್ನು ಧರ್ಮಗುರು ರೆ.ಫಾ.ವಿನ್ಸೆಂಟ್ ಡಿಸೋಜ ಉದ್ಘಾಟಿಸಿದರು.

> ಹಿಂಸೆ ಮತ್ತು ದ್ವೇಷವನ್ನೇ ಬಯಸಿ ಇಡೀ ಭೂಮಂಡಲದ ಸುತ್ತ ಮಾನವ ಸರಪಳಿ ರಚಿಸುವ ಜನರು ನಮಗಿಂತ ಹೆಚ್ಚು ಕ್ರಿಯಾಶೀಲರಾಗಿದ್ದಾರೆ. ಇದು ದೊಡ್ಡ ದುರಂತ. ಮಹಾತ್ಮ ಗಾಂಧೀಜಿಗಿಂತ ದೊಡ್ಡ ಹಿಂದೂ ಇರಲಿಲ್ಲ. ಆದರೆ, ಈ ಮತಾಂಧರು ಹಿಂದು ಧರ್ಮದ ಹೆಸರಿನಲ್ಲಿ ಮಹಾತ್ಮನನ್ನೇ ಕೊಂದರು. ಹಿಂಸೆ ಪ್ರಚೋದಿಸುವವರು ಯಾವುದೇ ಧರ್ಮದವರಾಗಿರಲಿ ಅವರನ್ನು ಖಂಡಿಸಬೇಕು'
>
> ***– ಪ್ರೊ.ಕೆ.ಮರುಳಸಿದ್ದಪ್ಪ, ಕುವೆಂಪು ಭಾಷಾ ಪ್ರಾಧಿಕಾರದ ಅಧ್ಯಕ್ಷ***

ಬಂಟ್ವಾಳದಲ್ಲಿ ಬಿ.ಸಿ.ರೋಡಿನ ಫ್ಲೈಓವರ್ ಅಡಿಯಲ್ಲಿ ನಡೆದ ಮಾನವ ಸರಪಣಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ರಮಾನಾಥ ರೈ ಭಾಗವಹಿಸಿದ್ದಲ್ಲದೆ ಬಳಿಕ ಭಾಗವಹಿಸಿದವರನ್ನುದ್ದೇಶಿಸಿ ಮಾತನಾಡಿದರು. ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ಎಚ್. ಖಾದರ್, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸದಸ್ಯ ಲೂಯಿಸ್ ಎಲ್.ರಾಡ್ರಿಗಸ್, ಮುಂತಾದವರು ಭಾಗವಹಿಸಿದ್ದರು.

ದ.ಕ.ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಮಾನವ ಸರಪಳಿ ಕಾರ್ಯಕ್ರಮ ನಡೆದಿದ್ದು ಒಟ್ಟು ಸುಮಾರು 5 ಸಾವಿರ ಜನ ಭಾಗವಹಿಸಿದ್ದರು. ಎಡಪಕ್ಷಗಳ ಕಾರ್ಯಕರ್ತರು ಕಾಂಗ್ರೆಸ್ ಜನತಾದಳ ಪಕ್ಷಗಳ ಕಾರ್ಯಕರ್ತರು ಒಗ್ಗೂಡಿ ಮಾನವ ಸರಪಳಿಯಲ್ಲಿ ಸಹಭಾಗಿತ್ವ ವಹಿಸುವಂತಾದುದು ಒಂದು ವಿಶೇಷ ಬೆಳವಣಿಗೆಯಾಗಿದೆ. ದಲಿತ, ಕ್ರೈಸ್ತ, ಮುಸ್ಲಿಂ ಸಮುದಾಯಗಳ ಜನರೂ ಸಕ್ರಿಯವಾಗಿ ಭಾಗವಹಿಸಿದ್ದು ಗಮನಾರ್ಹ.

ಉಡುಪಿ

ವಿವಿಧ ಪ್ರಗತಿಪರ ಸಂಘಟನೆಗಳು ಹಾಗೂ ವ್ಯಕ್ತಿಗಳು ಸೇರಿ ರಚಿಸಿದ 'ಸೌಹಾರ್ದ ಕರ್ನಾಟಕ' ನೀಡಿದ ಕರೆಯಂತೆ ಉಡುಪಿ ಜಿಲ್ಲೆಯಲ್ಲಿ 14 ಕಡೆಗಳಲ್ಲಿ ಮಾನವ ಸರಪಳಿ ರಚಿಸಲಾಗಿದೆ. ಉಡುಪಿ, ಬ್ರಹ್ಮಾವರ, ತೆಕ್ಕಟ್ಟೆ, ಕುಂಭಾಶಿ, ಕೋಟೇಶ್ವರ, ಕುಂದಾಪುರ, ತಲ್ಲೂರು, ಹೆಮ್ಮಾಡಿ, ಮುಳ್ಳಿಕಟ್ಟೆ, ತ್ರಾಸಿ, ಮರವಂತೆ, ನಾವುಂದ, ಬೈಂದೂರು, ಶಿರೂರುಗಳಲ್ಲಿ ಮಾನವ ಸರಪಳಿ ರಚಿಸಲಾಗಿದ್ದು ಒಟ್ಟು 17 ಕಿ.ಮೀ.ಗಿಂತಲೂ ಉದ್ದವಾಗಿದೆ ಎಂದು ಅಂದಾಜಿಸಲಾಗಿದೆ. 14 ಸಾವಿರಕ್ಕಿಂತಲೂ ಹೆಚ್ಚು ಜನರು ಇದರಲ್ಲಿ ನೇರ ಭಾಗವಹಿಸಿದ್ದರು ಹಾಗೂ ಸಾವಿರಾರು ಜನರು ಈ ಬೃಹತ್ ಕಾರ್ಯಕ್ರಮವನ್ನು ವೀಕ್ಷಿಸಿ ಪ್ರಶಂಶಿಸಿದರು. ಅಲ್ಪಸಂಖ್ಯಾತರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದು ಜನರ ಐಕ್ಯತೆಗೆ ಪ್ರತೀಕವಾಗಿತ್ತು. ಉಡುಪಿ ಜಿಲ್ಲಾ ಕೇಂದ್ರದಲ್ಲಿ ನಗರಸಭೆಯ ಮುಂಭಾಗದಿಂದ ಕೋರ್ಟುವರೆಗೆ ಮಾನವ ಸರಪಳಿ ನಡೆದು ಬಳಿಕ ಅಜ್ಜರಕಾಡು ಮೈದಾನದಲ್ಲಿ ಸಭಾ ಕಾರ್ಯಕ್ರಮ, ನಡೆಯಿತು. ಜಿ. ರಾಜಶೇಖರ್, ಕೆ. ಫಣಿರಾಜ್, ಎ.ಎಸ್. ಆಚಾರ್ಯ, ಎ.ವಿ.ಬಾಳಿಗಾ ಆಸ್ಪತ್ರೆಯ ನಿರ್ದೇಶಕರಾಗಿರುವ ಡಾ.ಪಿ.ವಿ.ಭಂಡಾರಿ, ಶಿಕ್ಷಣ ತಜ್ಞ ಆರ್ಕೆ ಮಣಿಪಾಲ್, ಸಾಹಿತಿ ರಾಜಾರಾಂ ತಲ್ಲೂರು, ಚಿಂತಕ ಮುರಳೀಧರ ಉಪಾಧ್ಯ, ಏಐಟಿಯುಸಿ ಮುಖಂಡರಾದ ಕೆ.ವಿ.ಭಟ್ ಮೊದಲಾದವರು ಭಾಗವಹಿಸಿದ್ದರು. ಕುಂದಾಪುರ ನಗರದ ಶಾಸ್ತ್ರಿ ವೃತ್ತದಲ್ಲಿ ನಡೆದ ಮಾನವ ಸರಪಣಿಯಲ್ಲಿ ಖ್ಯಾತ ಲೇಖಕಿ ವೈದೇಹಿ ಭಾಗವಹಿಸಿದ್ದರು. ಕೆಮ್ಮಣ್ಣು ಎಂಬಲ್ಲಿ 3 ಶಾಲೆಗಳ ವಿದ್ಯಾರ್ಥಿ ಶಿಕ್ಷಕರು ಹೆತ್ತವರು ಸೇರಿ ಸರಪಣಿ ಸೇರಿದ್ದು ವಿಶೇಷ.

ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಎಲ್ಲಾ ತಾಲೂಕುಗಳಲ್ಲಿ ಮಾನವ ಸರಪಣಿ ನಡೆದಿದೆ. ಬಾಗೇಪಲ್ಲಿ ತಾಲೂಕಿನಲ್ಲಿ 4 ಕಡೆ, ಗುಡಿಬಂಡೆ ಮತ್ತು ಗೌರಿಬಿದನೂರು ತಾಲೂಕಿನಲ್ಲಿ ತಲಾ 2 ಕಡೆ, ಶಿಡ್ಲಘಟ್ಟ ಮತ್ತು ಚಿಕ್ಕಬಳ್ಳಾಪುರಗಳಲ್ಲಿ ಮಾನವ ಸರಪಣಿಗಳು ನಡೆದ ವರದಿಗಳು ಬಂದಿವೆ. ಸುಮಾರು 20 ಸಾವಿರ ಜನ ಭಾಗವಹಿಸಿದ ಬಾಗೇಪಲ್ಲಿ ರಾಜ್ಯದಲ್ಲೇ ಅತಿ ಹೆಚ್ಚು ಜನ ಭಾಗವಹಿಸಿದ ತಾಲೂಕು.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು 10 ಸ್ಥಳಗಳಲ್ಲಿ ಸುಮಾರು 32 ಸಾವಿರ ಜನ ಭಾಗವಹಿಸಿದರೆಂದು ವರದಿಯಾಗಿದೆ. ಚಿಕ್ಕಬಳ್ಳಾಪುರ ರಾಜ್ಯದಲ್ಲೇ ಅತಿ ಹೆಚ್ಚು ಜನ ಭಾಗವಹಿಸಿದ ಜಿಲ್ಲೆಯ ಹೆಗ್ಗಳಿಕೆ ಪಡೆದಿದೆ.

ಬಳ್ಳಾರಿ

ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 10 ತಾಲೂಕುಗಳಲ್ಲಿ – ಹೊಸಪೇಟೆ, ಕುರುಗೋಡು, ಬಳ್ಳಾರಿ, ಸಿರುಗುಪ್ಪ, ಹಡಗಲಿ, ಕಂಪ್ಲಿ, ಹಗರಿಬೊಮ್ಮನಹಳ್ಳಿ, ತೆಕ್ಕಲ ಕೋಟೆ, ಸಂಡೂರು, ಕೂಡ್ಲಿಗಿ – ಮಾನವ ಸರಪಣಿ ನಡೆದಿವೆ. ಹೊಸಪೇಟೆಯಲ್ಲಿ 5 ಸಾವಿರಕ್ಕೂ ಹೆಚ್ಚು, ಕುರುಗೋಡಿನಲ್ಲಿ 3500 ಜನ ಭಾಗವಹಿಸಿದ್ದು ➚

ಸುರಪುರದಲ್ಲಿ ಡಿಸಿ ಯಿಂದ ಸರಪಣಿಗೆ ಅಡ್ಡಿ

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕದಲ್ಲಿ ಮಾನವ ಸರಪಳಿ ಕಾರ್ಯಕ್ರಮ ನಡೆಯುವ ಸಂದರ್ಭದಲ್ಲಿ ಯಾದಗಿರಿಯ ಡಿಸಿ ಯವರು ಮಧ್ಯಪ್ರವೇಶಿಸಿ ಮಾನವ ಸರಪಳಿ ನಿರ್ಮಿಸಿದ್ದನ್ನು ಕದಲಿಸಿ, ಅಡ್ಡಿ ಪಡಿಸಲು ಮುಂದಾದರು. ಆಗ ಜನತೆ ಪ್ರತಿಭಟನೆಗೆ ಇಳಿದು ಡಿಸಿ ಯವರಿಗೆ ಧಿಕ್ಕಾರದ ಘೋಷಣೆಗಳು ಮೂಡಿಬಂದವು. ಸುಮಾರು 30 ನಿಮಿಷಗಳ ಕಾಲ ವಾಗ್ವಾದ, ಆಕ್ರೋಶಗಳ ನಂತರ, ಪ್ರತಿಜ್ಞೆ ಮಾಡುವವರೆಗೂ ಈ ಜಾಗ ಬಿಟ್ಟು ಕದಲುವದಿಲ್ಲ ಎಂದು ಜನ ಪಟ್ಟುಹಿಡಿದರು. ಡಿಸಿ ಯವರೇ ಪ್ರತಿಜ್ಞೆ ಘೋಷಣೆ ಮಾಡಬೇಕೆಂದೂ ಜನ ಪಟ್ಟು ಹಿಡಿದರು. ಕೊನೆಗೆ ಡಿಸಿ ಯವರೇ ಪ್ರತಿಜ್ಞೆ ಘೋಷಣೆ ಮಾಡಬೇಕಾಯಿತು. ಬಹುಶಃ ಮಾನವ ಸರಪಳಿಗೆ, ಅದೂ ಡಿಸಿ ಯಂತಹ ಅಧಿಕಾರಿಯಿಂದ ಅಡ್ಡಿಯಾದಂತಹ ಘಟನೆ ರಾಜ್ಯದಲ್ಲೇ ಇದೊಂದೇ.

> ದೇಶದಲ್ಲಿ ಹುಸಿ ಧಾರ್ಮಿಕತೆ, ಹುಸಿ ಸಂಸ್ಕೃತಿ ವಿಜೃಂಭಿಸುತ್ತಿದೆ. ರುಂಡಗಳನ್ನು ಕೇಳುವಂತಹ ತುಂಡು ತಂಡಗಳು ಹುಟ್ಟಿಕೊಂಡಿವೆ. ಭಿನ್ನಾಭಿಪ್ರಾಯಗಳಿಗೆ ಬಲಿಪೀಠಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ನಮಗೆ ಬಹುತ್ವದ ಭಾವೈಕ್ಯ ಭಾರತ ಬೇಕೋ ಅಥವಾ ಬಲಿಪೀಠದ ಭಾರತ ಬೇಕೋ ಎನ್ನುವುದನ್ನು ಪ್ರಶ್ನಿಸಿಕೊಳ್ಳಬೇಕಿದೆ.
>
> *– ಬರಗೂರು ರಾಮಚಂದ್ರಪ್ಪ, ಸಾಹಿತಿ ಚಿಂತಕ*

➘ ಇಡೀ ಜಿಲ್ಲೆಯಲ್ಲಿ 16 ಸಾವಿರದಷ್ಟು ಜನ ಭಾಗವಹಿಸಿದ ವರದಿಗಳು ಬಂದಿವೆ.

ಕೋಲಾರ

ಕೋಲಾರ ಜಿಲ್ಲೆಯಲ್ಲಿ 6 ಕೇಂದ್ರಗಳಲ್ಲಿ ಮಾನವ ಸರಪಣಿ ನಡೆದ ವರದಿಗಳು ಬಂದಿವೆ. ಕೋಲಾರ, ಮುಳಬಾಗಿಲು, ಬಂಗಾರಪೇಟೆ, ಕೆ ಜಿ ಎಫ್, ಶ್ರೀನಿವಾಸಪುರ, ಮಾಲೂರು – ಇವುಗಳೇ ಆ 6 ಕೇಂದ್ರಗಳು. ಹಲವು ಕೇಂದ್ರಗಳಲ್ಲಿ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಸಾಮೂಹಿಕವಾಗಿ ಭಾಗವಹಿಸಿದ್ದು ಮತ್ತು ಅದಕ್ಕೆ ಅನುಕೂಲವಾಗುವಂತೆ ಬೆಳಿಗೆ 11 ಗಂಟೆಗೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕೋಲಾರದಲ್ಲಿ 5.5. ಶ್ರೀನಿವಾಸಪುರದಲ್ಲಿ 4 ಸಾವಿರ ಜನ ಭಾಗವಹಿಸಿದ್ದು, ಒಟ್ಟು ಜಿಲ್ಲೆಯಲ್ಲಿ ಸುಮಾರು 15 ಸಾವಿರ ಜನ ಭಾಗವಹಿಸಿದರು ಎಂದು ವರದಿಯಾಗಿದೆ.

ಕೊಪ್ಪಳ

ಕೊಪ್ಪಳ ಜಿಲ್ಲೆಯಲ್ಲಿ ನಾಲ್ಕು ಸ್ಥಳಗಳಲ್ಲಿ – ಗಂಗಾವತಿ, ಕೊಪ್ಪಳ, ಕುಷ್ಟಗಿ, ಯಲಬುರ್ಗಾ ಗಳಲ್ಲಿ ಮಾನವ ಸರಪಣಿ ನಡೆದಿದೆ. ಗಂಗಾವತಿಯಲ್ಲಿ 8 ಸಾವಿರದಷ್ಟು ಜನ ಭಾಗವಹಿಸಿದ್ದು, ಇದು ಜಿಲ್ಲೆಯಲ್ಲಿಯೇ ಅತಿ ಹೆಚ್ಚು. ಜಿಲ್ಲೆಯಲ್ಲಿ ಒಟ್ಟು 14 ಸಾವಿರ ಜನ ಮಾನವ ಸರಪಣಿಯಲ್ಲಿ ಭಾಗವಹಿಸಿದರು ಎಂದು ತಿಳಿದು ಬಂದಿದೆ.

ಕಲಬುರ್ಗಿ

ಕಲಬುರ್ಗಿ ಜಿಲ್ಲೆಯಲ್ಲಿ 6 ಸ್ಥಳಗಳಲ್ಲಿ ಮಾನವ ಸರಪಣಿ ಮತ್ತು ಸಭೆಗಳು ನಡೆದ ಮಾಹಿತಿ ಸಿಕ್ಕಿದೆ. ಕಲಬುರ್ಗಿ ನಗರ, ಮಹಾಗಾನ ಕ್ರಾಸ್, ಅಫ್ಜಲಪುರ, ಜೇವರ್ಗಿ, ಶಹಬಾದ, ಚಿಂಚೋಳಿಗಳಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಒಟ್ಟು 12 ಸಾವಿರ ಜನ ಭಾಗವಹಿಸಿದ್ದರು ಎಂದು ವರದಿಯಾಗಿದೆ. ಇದರಲ್ಲಿ ಕಲಬುರ್ಗಿ ನಗರದಲ್ಲಿ ಭಾಗವಹಿಸುವಿಕೆ ಅತಿ ಹೆಚ್ಚಾಗಿದ್ದು, 7 ಸಾವಿರದಷ್ಟು ಜನ ಇದ್ದರು.

ಉತ್ತರ ಕನ್ನಡ

ಉತ್ತರ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ತಾಲೂಕು ಕೇಂದ್ರಗಳೂ ಸೇರಿದಂತೆ ಒಟ್ಟು 17 ಕೇಂದ್ರಗಳಲ್ಲಿ ಮಾನವ ಸರಪಳಿ ಮತ್ತು ಸಭೆ ನಡೆದ ವರದಿಗಳು ಬಂದಿವೆ. ಕಾರವಾರದ 4 ಕೇಂದ್ರಗಳಲ್ಲಿ, ಭಟ್ಕಳ ಮತ್ತು ಜೊಯಿಡಾ ತಾಲೂಕುಗಳಲ್ಲಿ 2 ಕೇಂದ್ರಗಳಲ್ಲಿ ಹಾಗೂ ಇತರ ಎಲ್ಲಾ ತಾಲೂಕುಗಳಲ್ಲಿ ಒಂದು ಕೇಂದ್ರದಲ್ಲಿ ಕಾರ್ಯಕ್ರಮ ನಡೆದಿವೆ. ಶಿರಸಿ. ಅಂಕೋಲಾ, ಹೊನ್ನಾವರ, ದಾಂಡೇಲಿ, ಯಲ್ಲಾಪುರ, ಕುಮಟಾ, ಸಿದ್ದಾಪುರ, ಹಳಿಯಾಳ, ಮಂಡಗೋಡ ಕಾರ್ಯಕ್ರಮ ನಡೆದ ಕೇಂದ್ರಗಳು. ಒಟ್ಟು 10 ಸಾವಿರ ಜನ ಭಾಗವಹಿಸಿದರು ಎಂಬ ಮಾಹಿತಿ ಬಂದಿದೆ.

ಹಾಸನ

ಹಾಸನದಲ್ಲಿ ಮಾನವ ಸರಪಳಿ ಸಿದ್ಧತಾ ಸಮಿತಿಯಲ್ಲಿ ನಗರದ ಕೆಲವು ಖ್ಯಾತ ವೈದ್ಯರು ಸಕ್ರಿಯವಾಗಿ ಕಾರ್ಯಕರ್ತರ ರಿತಿಯಲ್ಲಿ ಬೀದಿಗಿಳಿದು ಕೆಲಸ ಮಾಡಿದ್ದು ವಿಶೇಷವಾಗಿತ್ತು. ಅವರ ಪ್ರಯತ್ನದಿಂದಾಗಿಯೇ ಹಾಸನ ನಗರದಲ್ಲಿ ಮಾನವ ಸರಪಳಿಯಲ್ಲಿ ನಗರದ ಇಡೀ ವೈದ್ಯಕೀಯ ಸಮುದಾಯ ಅವರ ಸಮವಸ್ತ್ರ ಸಹಿತವಾಗಿ ಮಾನವ ಸರಪಳಿಯಲ್ಲಿ ಭಾಗವಹಿಸಿದ್ದರು. ಹಾಗೂ ಖಾಸಗಿ ಅವರ ಸಂಸ್ಥೆಯ ಆಂಬುಲೆನ್ಸ ಧ್ವನಿವರ್ಧಕಗಳನ್ನು ಬಳಸಿ ನಗರದಲ್ಲಿ ಮಾನವ ಸರಪಳಿ ಉದ್ದಕ್ಕೂ ಪ್ರಚಾರ ಮಾಡಿದ್ದು ವಿಶೇಷವಾಗಿತ್ತು. ಭಾರತೀಯ ವೈದ್ಯಕೀಯ ಸಂಘವೂ ಸಹ ಬೆಂಬಲ ವ್ಯಕ್ತಪಡಿಸಿ ಜಿಲ್ಲೆಯಾದ್ಯಂತ ಮಾನವ ಸರಪಳಿಯಲ್ಲಿ ಭಾಗವಹಿಸಿದ್ದರು.

ಶಾಲಾ ಮಕ್ಕಳು ಸೌಹಾರ್ದತೆಯ ಸಂಕೇತವಾಗಿ ವಿವೇಕಾನಂದ, ಬಸವಣ್ಣ, ಗಾಂಧಿ, ಅಂಬೇಡ್ಕರ್, ಮೌಲಾನಾ ಆಜಾದ್ ಇತ್ಯಾದಿ ಮಹಾನ್ ವ್ಯಕ್ತಿಗಳ ವೇಶ ಭೂಷಣಗಳೊಂದಿಗೆ ಮಾನವ ಸರಪಳಿಯಲ್ಲಿ ಕೊಂಡಿಯಾಗಿದ್ದರು. 100 ಮೀಟರ್ ಉದ್ದದ ಸೌಹಾರ್ದತೆ ಸಾರುವ ಚಿತ್ರ ರಚಿಸಿ ಪ್ರದರ್ಶಿಸಲಾಯಿತು. ಮಾನವ ಸರಪಳಿಗೆ ಪೂರಕವಾಗಿ ಸೌಹಾರ್ದ ಕವಿಗೋಷ್ಠಿ, ಪ್ರಬಂಧ ಸ್ಪರ್ಧೆ, ಸೌಹಾರ್ದ ಚಿತ್ರಕಲೆ ನಡೆಸಲಾಗಿತ್ತು. ಹಾಸನ ನಗರದಲ್ಲಿ 3 ಕಿ.ಮಿ.ಗೂ ಹೆಚ್ಚು ಉದ್ದದ ಮಾನವ ಸರಪಳಿ ರಚಿಸಲಾಯಿತು. ಅದು ಮಾನವ ಸರಪಳಿಗಿಂತ ಮಾನವ ಗೋಡೆಯಂತೆ ಕಾಣುತ್ತಿತ್ತು. ಕಾರಣ ಜನರು ಅಷ್ಟು ಒತ್ತೊತ್ತಾಗಿ ನಿಂತಿದ್ದರು. ಸುಮಾರು 3,500ರಿಂದ 4000 ಸಾವಿರದಷ್ಟು ಜನರು ಹಾಸನ ನಗರದಲ್ಲಿ ಭಾಗವಹಿಸಿದ್ದರು.

ಸಕಲೇಶಪುರ, ಚನ್ನರಾಯಪಟ್ಟಣ, ಹೊಳೆನರಸೀಪುರ ಹಾಗೂ ಬೇಲೂರು ನಗರಗಳಲ್ಲಿಯೂ ಸಹ ಜನರು ಅತ್ಯಂತ ಉತ್ಸಾಹದಿಂದ ಪಾಲುಗೊಂಡಿದ್ದಾರೆ. ಒಟ್ಟಾರೆ ಹಾಸನ ಜಿಲ್ಲೆಯಾದ್ಯಂತ 10 ಸಾವಿರ ಜನರು ಈ ಮಾನವ ಸರಪಳಿಯಲ್ಲಿ ಕೊಂಡಿಯಾಗಿದ್ದಾರೆ. ಹಾಗೂ ಲಕ್ಷಾಂತರ ಜನರಿಗೆ ಪ್ರಚಾರವಾಗಿದೆ. ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ದೊರಕಿದೆ.

> ಜಾತಿ, ಧರ್ಮ, ಕೋಮು ಹೆಸರಿನಲ್ಲಿ ಪ್ರೀತಿ, ಸಹಬಾಳ್ವೆಯ ಕೊಂಡಿಯನ್ನು ಮತಾಂಧರು ನಿರಂತರ ಕತ್ತರಿಸುತ್ತಿದ್ದಾರೆ. ಮಾನವೀಯತೆ ಮತ್ತು ಸೌಹಾರ್ದದ ಕೊಂಡಿ ಬೆಸೆಯುವವರಿಗೆ ಮಾತ್ರ ಈ ಭೂಮಿ ಮೇಲೆ ಬದುಕಲು ಹಕ್ಕಿದೆ ಎನ್ನುವುದನ್ನು ನಾವು ತೋರಿಸಬೇಕಿದೆ'
>
> *– ಪ್ರೊ.ಚಂದ್ರಶೇಖರ ಪಾಟೀಲ*

ಯಾದಗೀರ

ಯಾದಗೀರ ಜಿಲ್ಲೆಯಲ್ಲಿ 3 ಸ್ಥಳಗಳಲ್ಲಿ ಮಾನವ ಸರಪಣಿ ಮತ್ತು ಸಭೆಗಳು ನಡೆದ ಮಾಹಿತಿ ಸಿಕ್ಕಿದೆ. ಯಾದಗೀರ, ಶಹಾಪುರ, ಸುರಪುರಗಳಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಒಟ್ಟು 4500 ಜನ ಭಾಗವಹಿಸಿದ್ದರು ಎಂದು ವರದಿಯಾಗಿದೆ. ಇದರಲ್ಲಿ ಯಾದಗೀರದಲ್ಲಿ ಭಾಗವಹಿಸುವಿಕೆ ಅತಿ ಹೆಚ್ಚಾಗಿದ್ದು, 3 ಸಾವಿರದಷ್ಟು ಜನ ಇದ್ದರು. ಯಾದಗೀರದಲ್ಲಿ ಜಿಲ್ಲಾಧಿಕಾರಿ ಕಾರ್ಯಕ್ರಮಕ್ಕೆ ಅಡ್ಡಿ ಪಡಿಸುವ ಪ್ರಯತ್ನ ಮಾಡಿದ ವರದಿ ಬಂದಿದೆ. (ವಿವರಗಳನ್ನು ಬಾಕ್ಸ್ ನಲ್ಲಿ ನೋಡಿ) ಇಡೀ ರಾಜ್ಯದಲ್ಲಿ ಇಂತಹ ಒಂದೇ ಘಟನೆ ವರದಿಯಾಗಿರುವುದು.

ತುಮಕೂರು

ತುಮಕೂರು ನಗರದಲ್ಲಿ ಸ್ವಾತಂತ್ರ್ಯ ಚೌಕದಿಂದ ತುಮಕೂರು ವಿಶ್ವವಿದ್ಯಾಲಯದ ಮುಂಭಾಗದ ವರೆಗೆ ಮಾನವ ಸರಪಳಿ ರಚಿಸಲಾಯಿತು. ಸರಪಣಿಯ ಎರಡು ತುದಿಗಳಲ್ಲಿ ಎರಡು ಪ್ರತ್ಯೇಕ ಸಭೆಗಳು ನಡೆದವು. ಹಿರಿಯ ಗಾಂಧಿವಾದಿ ಎಚ್. ಎಸ್.ದೊರೆಸ್ವಾಮಿ ಭಾಗವಹಿಸಿ ಮಾತನಾಡಿದರು. ಸರಪಳಿ ಕಾರ್ಯಕ್ರಮಕ್ಕೆ ಸಿ.ಯತಿರಾಜ್ ಮತ್ತು ನಿವೃತ್ತ ಪ್ರಾಂಶುಪಾಲ ಜಿ.ಎಂ.ಶ್ರೀನಿವಾಸಯ್ಯ ಚಾಲನೆ ನೀಡಿದರು. ಪಿಯುಸಿಎಲ್ ಜಿಲ್ಲಾಧ್ಯಕ್ಷ ಕೆ.ದೊರೈರಾಜ್, ಅಂಬೇಡ್ಕರ್ ಅಧ್ಯಯನ ಕೇಂದ್ರದ ಮುಖ್ಯಸ್ಥ ಡಾ. ರಮೇಶ್, ನಟ ಹನುಮಂತೇಗೌಡ, ಮುಸ್ಲಿಂ ಸಮುದಾಯದ ಮುಖಂಡ ಆಶ್ರಫ್ ಹುಸೇನ್ ಮುಂತಾದವರು ಭಾಗವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಉಳಿದ ಸಿರಾ ಬಿಟ್ಟರೆ ಎಲ್ಲಾ ಅಂದರೆ – ಕುಣಿಗಲ್, ತಿಪಟೂರು, ಕೊರಟಗೆರೆ, ಮಧುಗಿರಿ, ಗುಬ್ಬಿ, ಪಾವಗಡ, ಚಿಕ್ಕನಾಯಕನಹಳ್ಳಿ, ತುರುವೇಕೆರೆ –ತಾಲೂಕುಗಳಲ್ಲಿ ಮಾನವ ಸರಪಳಿ ರಚಿಸಲಾಯಿತು. ಜಿಲ್ಲೆಯಲ್ಲಿ ಒಟ್ಟು ನಡೆದ 9 ಸರಪಣಿಗಳಲ್ಲಿ ಸುಮಾರು 6 ಸಾವಿರ ಜನ ಭಾಗವಹಿಸಿದರು ಎಂದು ತಿಳಿದು ಬಂದಿದೆ.

ಮೈಸೂರು

ಮೈಸೂರು ನಗರದಲ್ಲಿ ಕೋಟೆ ಆಂಜನೇಯಸ್ವಾಮಿ ದೇಗುಲದ ಆವರಣದಿಂದ ಪರಸ್ಪರ ಕೈ ಕೈ ಹಿಡಿದು ಸುಮಾರು 3 ಕಿ.ಮೀವರೆಗೂ ಕ್ರಮಿಸಿದರು. ಮೊದಲಿಗೆ ಚಾಮರಾಜೇಂದ್ರ ವೃತ್ತದಲ್ಲಿ ಮಾನವ ಸರಪಳಿ ರಚಿಸುವ ಮೂಲಕ ನಟ ಪ್ರಕಾಶ್ ರೈ ಸರಪಳಿಗೆ ಚಾಲನೆ ನೀಡಿದರು. ಒಬ್ಬೊಬ್ಬರಾಗಿ ರಸ್ತೆ ಬದಿಯಲ್ಲಿ ಸಾಗುತ್ತಿದ್ದ ಕಾರ್ಯಕರ್ತರು ನೋಡನೋಡುತ್ತಿದ್ದಂತೆ ಪುರಭವನ, ದೊಡ್ಡಗಡಿಯಾರ ದಾಟಿ, ಅಶೋಕ ರಸ್ತೆ ಮೂಲಕ ಅಜ್ಜಮ್ ಮಸೀದಿ, ಸಿಪಿಸಿ ಪಾಲಿಟೆಕ್ನಿಕ್ ಕಾಲೇಜಿನವರೆಗೂ ಕಾರ್ಯಕರ್ತರು ಮಾನವ ಸರಪಳಿ ರಚಿಸಿದರು. ಆಟೊದಲ್ಲಿ ರಸ್ತೆಯುದ್ದಕ್ಕೂ ಧ್ವನಿವರ್ಧಕದಲ್ಲಿ ಮಾನವ ಸರಪಳಿಯ ಉದ್ದೇಶ, ಗುರಿಗಳನ್ನು ಜನರಿಗೆ ವಿವರಿಸಲಾಗುತ್ತಿತ್ತು. ಸಂಜೆ ನಿಗದಿಯಾಗಿದ್ದಂತೆ 4 ಗಂಟೆಗೆ ಸರಿಯಾಗಿ ಆರಂಭಗೊಂಡ ಸರಪಳಿ 4.45ರ ವರೆಗೂ ನಡೆಯಿತು. ನಂತರ ಪುರಭವನದ ಆವರಣದಲ್ಲಿ ಜಮಾವಣೆಗೊಂಡ ಕಾರ್ಯಕರ್ತರು, ದೇವನೂರ ಮಹಾದೇವ ಅವರಿಂದ ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಹುಣಸೂರು, ಹೆಗ್ಗಡದೇವನ ಕೋಟೆ, ನಂಜನಗೂಡು ಕೇಂದ್ರಗಳಲ್ಲೂ ಮಾನವ ಸರಪಣಿ ನಡೆದ ವರದಿಗಳು ಬಂದಿವೆ.

ಅವಿಭಜಿತ ಧಾರವಾಡ

ಅವಿಭಜಿತ ಧಾರವಾಡ ಜಿಲ್ಲೆಯಲ್ಲಿ 6 ಕೇಂದ್ರಗಳಲ್ಲಿ – ಹುಬ್ಬಳ್ಳಿಯ ಚೆನ್ನಮ್ಮ ಸರ್ಕಲ್, ಧಾರವಾಡದ ಜ್ಯೂಬಲಿ ಸರ್ಕಲ್, ಗಜೇಂದ್ರಗಡದಲ್ಲಿ, ಹಾವೇರಿಯ ಹೊಸಮನಿ ವೃತ್ತದಲ್ಲಿ, ಗದಗದ ಭೂಮರೆಡ್ಡಿ ವೃತ್ತದಲ್ಲಿ – ಮಾನವ ಸರಪಣಿ ಮತ್ತು ಸಭೆಗಳನ್ನು ನಡೆಸಲಾಯಿತು. ಒಟ್ಟು ಸುಮಾರು 4 ಸಾವಿರ ಜನ ಭಾಗವಹಿಸಿದರು ಎಂಬ ಮಾಹಿತಿ ಬಂದಿದೆ.

ಬಿಜಾಪುರ

ಬಿಜಾಪುರ ಜಿಲ್ಲೆಯಲ್ಲಿ 4 ಸ್ಥಳಗಳಲ್ಲಿ ಮಾನವ ಸರಪಣಿ ಮತ್ತು ಸಭೆಗಳು ನಡೆದ ಮಾಹಿತಿ ಸಿಕ್ಕಿದೆ. ಬಿಜಾಪುರ ನಗರ, ಇಂಡಿ, ಚಡಚಣ, ಸಿಂದಗಿ ಗಳಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಒಟ್ಟು 4 ಸಾವಿರ ಜನ ಭಾಗವಹಿಸಿದ್ದರು ಎಂದು ವರದಿಯಾಗಿದೆ. ಇದರಲ್ಲಿ ಇಂಡಿಯಲ್ಲಿ ಭಾಗವಹಿಸುವಿಕೆ ಅತಿ ಹೆಚ್ಚಾಗಿದ್ದು, 2 ಸಾವಿರದಷ್ಟು ಜನ ಇದ್ದರು.

> ಇಲ್ಲಿ ಯಾರು ಸಹ ಜಾತಿ, ಧರ್ಮ, ಹಣ ನೋಡಿಕೊಂಡು ಇಲ್ಲಿಗೆ ಬಂದಿಲ್ಲ. ಯಾರನ್ನೂ ಹಣ ಕೊಟ್ಟು ಲಾರಿ ಮೂಲಕ ಕರೆಸಿಲ್ಲ. ದೇಶದಲ್ಲಿ ನಡೆಯುತ್ತಿರುವ ವಿದ್ಯಮಾನಗಳಿಂದ ರೋಸಿ ಹೋಗಿ ಕೋಮುಸೌಹಾರ್ದತೆ ಬಯಸಿ, ಶಾಂತಿಗಾಗಿ ಬಂದಿದ್ದೀರಿ. ಇದೊಂದು ಬಹುದೊಡ್ಡ ಮೌನ ಪ್ರತಿಭಟನೆ. ಇದು ಮತ್ತಷ್ಟು ದೊಡ್ಡದಾಗಲಿದೆ. ಈ ಭಾಷೆ ಕೋಮು ದಳ್ಳುರಿ ಸೃಷ್ಟಿಸುವವರಿಗೆ ಅರ್ಥವಾಗುತ್ತದೆ ಎಂದುಕೊಂಡಿದ್ದೇನೆ
>
> *– ಪ್ರಕಾಶ್ ರೈ, ಬಹುಭಾಷಾ ನಟ*

> ಸೌಹಾರ್ದದ ಕೊಂಡಿಗಳನ್ನು ತುಂಡರಿಸಲು ಆಗಾಗ ಪ್ರಯತ್ನಗಳು ನಡೆಯುತ್ತಲೇ ಇರುತ್ತವೆ. ಅವುಗಳಲ್ಲಿ ಕೆಲವು ನಮ್ಮೊಳಗೂ ಇರುತ್ತವೆ. ಬಿಲ್ಲವ ಯುವಕರ ಸಾವಿಗೆ, ಅವರು ಜೈಲು ಸೇರಲು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕಾರಣವಾಗಿರುವ ಪ್ರಭಾಕರ ಭಟ್ ಜತೆ ಜನಾರ್ದನ ಪೂಜಾರಿ ಕೈ ಜೋಡಿಸಿದ್ದಾರೆ. ಸ್ವಾರ್ಥ, ವೈಯಕ್ತಿಕ ರಾಜಕೀಯ ಕಾರಣಗಳಿಗಾಗಿ ಸೈದ್ಧಾಂತಿಕವಾಗಿ ರಾಜಿ ಆಗಿದ್ದಾರೆ .. .. ಶತ್ರು ಮತ್ತು ಮಿತ್ರರನ್ನು ಗುರುತಿಸಲು ಸಾಧ್ಯವಾಗದಂತೆ ಸೈದ್ಧಾಂತಿಕ ದ್ರೋಹ ಬಗೆಯುವುದನ್ನು ಸಹಿಸಲು ಸಾಧ್ಯವಿಲ್ಲ.
>
> *– ದಿನೇಶ್ ಅಮಿನ್ ಮಟ್ಟು, ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ*

ಮಂಡ್ಯ

ಮಂಡ್ಯ ನಗರ, ಕೆ ಎಂ ದೊಡ್ಡಿ, ಮದ್ದೂರು, ಮಳವಳ್ಳಿಗಳಲ್ಲಿ ಒಟ್ಟು ನಾಲ್ಕು ಕೇಂದ್ರಗಳಲ್ಲಿ ಮಾನವ ಸರಪಳಿ ಮತ್ತು ಸಭೆ ನಡೆದಿರುವುದಾಗಿ ತಿಳಿದು ಬಂದಿದೆ. ಜಿಲ್ಲೆಯಲ್ಲಿ ಒಟ್ಟು ಸುಮಾರು 10 ಸಾವಿರ ಜನ ಭಾಗವಹಿಸಿದ್ದಾರೆ.

ಬೀದರ

ಬೀದರ, ಬಸವಕಲ್ಯಾಣ, ಔರಾದ್ ಗಳಲ್ಲಿ ಒಟ್ಟು 3 ಕೇಂದ್ರಗಳಲ್ಲಿ ಮಾನವ ಸರಪಳಿ ಮತ್ತು ಸಭೆ ನಡೆದಿರುವುದಾಗಿ ತಿಳಿದು ಬಂದಿದೆ. ಜಿಲ್ಲೆಯಲ್ಲಿ ಒಟ್ಟು ಸುಮಾರು 2500 ಜನ ಭಾಗವಹಿಸಿದ್ದಾರೆ.

ಕೊಡಗು

ಕೊಡಗು ಜಿಲ್ಲೆಯಲ್ಲಿ ನಾಲ್ಕು ಸ್ಥಳಗಳಲ್ಲಿ – ವಿರಾಜಪೇಟೆ, ಮಡಿಕೇರಿ, ಕುಶಾಲನಗರ, ಸೋಮವಾರಪೇಟೆ ಗಳಲ್ಲಿ ಮಾನವ ಸರಪಣಿ ನಡೆದಿದೆ. ಜಿಲ್ಲೆಯಲ್ಲಿ ಒಟ್ಟು 3 ಸಾವಿರ ಜನ ಮಾನವ ಸರಪಣಿಯಲ್ಲಿ ಭಾಗವಹಿಸಿದರು ಎಂದು ತಿಳಿದು ಬಂದಿದೆ.

ದಾವಣಗೆರೆ

ದಾವಣಗೆರೆ ಜಯದೇವ ವೃತ್ತದಲ್ಲಿ ಸುಮಾರು ಮೂರು ಸುತ್ತಿನ ಮಾನವ ಸರಪಳಿಯನ್ನು ರಚಿಸುವ ಮೂಲಕ ಸೌಹಾರ್ದತೆ ಸಂದೇಶ ಸಾರಿದರು. ನಂತರದಲ್ಲಿ ಸಮಾವೇಶಗೊಂಡು ಸಭೆಯನ್ನು ನಡೆಸಿದರು. ಸಭೆಯನ್ನುದ್ದೇಶಿಸಿ ಮಾತನಾಡಿದವರಲ್ಲಿ ಡಾ. ಎ.ಬಿ, ರಾಮಚಂದ್ರಪ್ಪ, ಸಿಪಿಐ ರಾಜ್ಯ ಮುಖಂಡ ಡಾ ಸಿದ್ದನ ಗೌಡ ಪಾಟೀಲ್, ಬಂಡಾಯ ಸಾಹಿತಿ ಆರ್.ಜಿ.ಹಳ್ಳಿ ನಾಗರಾಜ್ ಇದ್ದರು. ಜಗಳೂರಿನಲ್ಲಿ ಅಂಬೇಡ್ಕರ್ ವೃತ್ತದಲ್ಲಿ ಮತ್ತು ಹರಪನಹಳ್ಳಿಯಲ್ಲಿ ಬಸದ ಸ್ಟಾಂಡ್ ಬಳಿ ಮಾನವ ಸರಪಳಿ ರಚಿಸಲಾಯಿತು. ಒಟ್ಟು ಜಿಲ್ಲೆಯಲ್ಲಿ 1500 ಜನ ಭಾಗವಹಿಸಿದ್ದಾರೆ.


ಬೆಳಗಾವಿ

ಬೆಳಗಾವಿಯಲ್ಲಿ ಚನ್ನಮ್ಮ ಸರ್ಕಲ್ ನಲ್ಲಿ ಮಾನವ ಸರಪಣಿ ರಚಿಸಲಾಯಿತು. ಶಾಂತಿಯ ಸಂಕೇತವಾಗಿ ನಾಗನೂರ ಮಠದ ರಾಮೇಶ್ವರ ಸ್ವಾಮಿಗಳು ಮತ್ತು ಹಿರಿಯ ಕಾರ್ಮಿಕ ಮುಖಂಡ ವ್ಹಿ.ಪಿ.ಕುಲಕರ್ಣಿರವರು ಪಾರಿವಾಳ ಹಾರಿಸುವದರ ಮೂಲಕ ಕಾರ್ಯಕ್ರಮವವನ್ನು ಉದ್ಘಾಟಿಸಿದರು.

ಚಾಮರಾಜನಗರ

ಚಾಮರಾಜನಗರ ಜಿಲ್ಲೆಯಲ್ಲೂ ಮಾನವ ಸರಪಣಿ ನಡೆದಿದೆ ಎಂದು ತಿಳಿದು ಬಂದಿದೆ. ●

ನಾಲ್ಕು 'ಸುಗಮ ವ್ಯಾಪಾರ'ದ ಬಜೆಟ್‌ಗಳ ನಂತರ ಒಂದು 'ಸುಗಮ ಬದುಕಿ'ನ ಬಜೆಟ್



ಇದೀಗ 'ವ್ಯಾಪಾರ ಸುಗಮತೆ'ಯ ಅಚ್ಛೇ ದಿನ್‌ಗಳ ನಂತರ 'ಬದುಕಿನ ಸುಗಮತೆ'ಯ ದಿನಗಳತ್ತ ಹೊರಟಿದ್ದೇವೆ ಎಂದು ಹಣಕಾಸು ಮಂತ್ರಿಗಳು ಸಂಸತ್ತಿನಲ್ಲಿ ಈ ವರ್ಷದ ಬಜೆಟ್ ಮಂಡಿಸುತ್ತ ಹೇಳಿದ್ದಾರೆ. ವ್ಯಾಪಾರ ಸುಗಮತೆ' ಯಾರಿಗೆ ಎಂಬುದರಲ್ಲಿ ಸಂದೇಹವೇನೂ ಇರಲಿಲ್ಲ. ಆದರೆ ಅವರ ಬಜೆಟ್ ಭಾಷಣ ಮುಗಿಸುವ ವೇಳೆಗೆ, ಈ 'ಬದುಕಿನ ಸುಗಮತೆ' ನಿಜವಾಗಿ ಯಾರಿಗೆ ಎಂಬ ಪ್ರಶ್ನೆ ಹಲವರನ್ನು ಕಾಡುತ್ತಿದೆ.

ಈ ಸಂಚಿಕೆಯ ಇತರ ಪುಟಗಳನ್ನು ನೋಡಿದರೆ 'ಕಾರ್ಮಿಕರು, ರೈತರು, ಮಹಿಳೆಯರ ನಡುವೆ ಹಲವು ವರ್ಷಗಳಿಂದ ಕೆಲಸ ಮಾಡುತ್ತಿರುವವರಿಗೆ ಮಾತ್ರವಲ್ಲ, ಮಧ್ಯಮ ವರ್ಗದವರಿಗೂ ಈ ಬಜೆಟ್ ನಂತರ ಬದುಕು ಸುಗಮವಾಗ ಬಹುದಾದಂತಹ ಅಂಶಗಳೇನೂ ಕಂಡಿಲ್ಲ. ಅಲ್ಪ 'ಗೌರವಧನ' ಕೊಟ್ಟು ದಿನವಿಡೀ ದುಡಿಸಿಕೊಳ್ಳುವ ನಮಗೆ ಕಾನೂನುಬದ್ಧ ಕನಿಷ್ಟ ಕೂಲಿಯಾದರೂ ಕೊಡಿ, ಬದುಕು ತುಸುವಾದರೂ ಸುಗಮಗೊಳ್ಳುತ್ತದೆ ಎಂದು ಸತತವಾಗಿ ಪ್ರಧಾನಿಗಳನ್ನು ಕೇಳುತ್ತಿರುವ ಒಂದು ಕೋಟಿ ಸ್ಕೀಮ್ ಕಾರ್ಮಿಕರಂತೂ ಈ ಬಜೆಟಿನಿಂದ ಆಕ್ರೋಶಗೊಂಡು ಎನ್‌ಡಿಎ ಪ್ರತಿಕೃತಿಗಳನ್ನು ದಹನ ಮಾಡಿರುವ ಸುದ್ದಿಗಳು ಬರುತ್ತಿವೆ.

ಈ ಬಜೆಟನ್ನು ಆಮೂಲಾಗ್ರವಾಗಿ ವಿಶ್ಲೇಷಿಸಿರುವ ಆರ್ಥಿಕ ತಜ್ಞರೂ ಆದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ವಾಸ್ತವವಾಗಿ ಇದು ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರಾಗಿಸುವುವದನ್ನು ಮತ್ತಷ್ಟು ಸುಗಮಗೊಳಿಸುವ ಪ್ರಯತ್ನ ಎಂದು ವರ್ಣಿಸುತ್ತಾರೆ. ಏಕೆಂದರೆ 2017ರಲ್ಲಿ ಉತ್ಪತ್ತಿಯಾದ ಸಂಪತ್ತಿನ 73% ವನ್ನು 1% ಅತಿ ಶ್ರೀಮಂತರು ಬಾಚಿಕೊಂಡಿದ್ದಾರೆ ಎಂಬುದು ಈ ಅಚ್ಛೇದಿನ್‌ಗಳಲ್ಲಿ ಶ್ರೀಮಂತರ ಬದುಕು ಎಷ್ಟು ಸುಗಮವಾಗಿದೆ ಎಂಬುದನ್ನು ಸಾರಿ ಹೇಳಿದೆ.

ಹಣಕಾಸು ಮಂತ್ರಿಗಳು ಜಗತ್ತಿನ ಅತ್ಯಂತ ದೊಡ್ಡ ಸರಕಾರೀ ನೆರವಿನ ಆರೋಗ್ಯಪಾಲನೆ ಕಾರ್ಯಕ್ರಮವನ್ನು ಪ್ರಕಟಿಸುತ್ತಿರುವುದಾಗಿ ಹೇಳಿದರು. ಇದು 10 ಕೋಟಿ ಬಡ ಮತ್ತು ಅಭದ್ರ ಸ್ಥಿತಿಯಲ್ಲಿರುವ ಕುಟುಂಬಗಳಿಗೆ (ಸುಮಾರು 50 ಕೋಟಿ ಫಲಾನುಭವಿಗಳಿಗೆ) ಪ್ರತಿ ಕುಟುಂಬಕ್ಕೆ ವರ್ಷಕ್ಕೆ 5ಲಕ್ಷ ರೂ.ಗಳ ವರೆಗಿನ ಎರಡನೇ ಮತ್ತು ಮೂರನೇ ಹಂತದ ಆರೋಗ್ಯರಕ್ಷಣೆಯನ್ನು ಒದಗಿಸುತ್ತದೆ ಎಂದರು.

ನಿಜಕ್ಕೂ 50 ಕೋಟಿ ಜನಗಳ ಬದುಕನ್ನು ಸುಗಮಗೊಳಿಸಬಹುದ ಆದ ಯೋಜನೆ.ಆದರೆ ಈ ಲೆಕ್ಕಾಚಾರಗಳನ್ನು ನೊಡಿ. ಇದೊಮದು ವಿಮಾಯೋಜನೆ. ಅಂದರೆ ಸರಕಾರ ಪ್ರತಿ ಕುಟುಂಬಕ್ಕೆ ವರ್ಷಕ್ಕೆ 15,000ರೂ. ಪ್ರೀಮಿಯಂ ತೆರಬೇಕಾದೀತು. ಅಂದರೆ 1.5ಲಕ್ಷ ಕೋಟಿ ರೂ.ಗಳನ್ನು ಖರ್ಚು ಮಾಡಬೇಕು. ಆದರೆ ಇಷ್ಟನ್ನು ಬಜೆಟಿನಲ್ಲಿ ಕೊಟ್ಟಿಲ್ಲ. ಇದು ಈ ಬಜೆಟಿನ ಒಟ್ಟು ಆರೋಗ್ಯ ವೆಚ್ಚದ ಮೂರು ಪಟ್ಟಾಗುತ್ತದೆ.

ಜಗತ್ತಿನ ಈ ಅತಿ ದೊಡ್ಡ ಆರೋಗ್ಯ ರಕ್ಷಣೆ ಕಾರ್ಯಕ್ರಮದ ನಂತರವೂ ಈ ಸರಕಾರದ ಆರೋಗ್ಯ ಬಾಬ್ತಿನ ವೆಚ್ಚ ಜಿಡಿಪಿಯ 0.32% ದಿಂದ 0.29% ಕ್ಕೆ ಇಳಿಯುತ್ತದೆ ಎಂಬ ಸಂಗತಿಯತ್ತ ಯೆಚುರಿ ಗಮನ ಸೆಳೆಯುತ್ತಾರೆ. ನಿಜಕ್ಕೂ ಅಚ್ಛೇ ದಿನ್‌ಗಳ ಅದ್ಭುತ ಮ್ಯಾಜಿಕ್.

ಇನ್ನೊಂದು ಸಂಗತಿಯನ್ನು ಗಮನಿಸಿ. ಹಣಕಾಸು ಮಂತ್ರಿಗಳು ಈ ಬೃಹತ್ ಯೋಜನೆಗೆ 30,000 ಕೋಟಿ ರೂ. ನೀಡಿರುವದಾಗಿ ಬಜೆಟ್ ಭಾಷಣದಲ್ಲಿ ಹೇಳಿದ್ದರು. ಆದರೆ ರೆವಿನ್ಯೂ ಕಾರ್ಯದರ್ಶಿ ಹಸ್‌ಮುಖ್ ಆಧಿಯ ಪ್ರಕಾರ ಇದಕ್ಕೆ ನೀಡಿರುವುದು 2000 ಕೋಟಿ ರೂ. ಎಂದಿದ್ದಾರೆ. ನಿಜವಾಗಿಯೂ ಈ ಬೃಹತ್ ಯೋಜನೆ ಸುಗಮವಾಗಿ ಸಾಗುತ್ತದೆಯೇ?

ನಿಜ ಹೇಳಬೇಕೆಂದರೆ, ಈ ಮೂಲಕ ಸರಕಾರ ಸಾರ್ವತ್ರಿಕ ಆರೋಗ್ಯರಕ್ಷಣೆ ಒದಗಿಸಬೇಕಾದ ತನ್ನ ಕರ್ತವ್ಯದಿಂದ ವಿಮುಖಗೊಂಡಿದೆ ಎನ್ನುತ್ತಾರೆ 'ಶಾಂತಿ ಮತ್ತು ಅಭಿವೃದ್ಧಿಗಾಗಿ ಭಾರತೀಯ ವೈದ್ಯರುಗಳು '(ಐಡಿಪಿಡಿ) ಸಂಘಟನೆಯ ಉಪಾಧ್ಯಕ್ಷರಾದ ಡಾ. ಅರುಣ್ ಮಿತ್ರ. ಇದು ಕೇವಲ ಅಂಕೆಗಳ ಕಸರತ್ತು. ಇಂತಹ ವಿಮಾ ಯೋಜನೆ ಈಗಾಗಲೇ ಇದ್ದು ಇದು ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ಹೆಸರಲ್ಲಿ ವಿಮಾ ಕಂಪನಿಗಳಿಗೆ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಪ್ರಯೋಜನ ವರ್ಗಾಯಿಸುವ ಕ್ರಮವಷ್ಟೇ ಎಂದು ಹೇಳಿಕೆಯೊಂದರಲ್ಲಿ ಅವರು ತಿಳಿಸಿದ್ದಾರೆ.

ಈ ಸರಕಾರ ಕೇವಲ 24 ಸರಕಾರೀ ಮೆಡಿಕಲ್ ಕಾಲೇಜುಗಳನ್ನು ಮೇಲ್ದರ್ಜೆಗೆ ಏರಿಸ ಬೇಕೆಂದಿದೆ. ಅಂದರೆ ವೈದ್ಯಕೀಯ ಶಿಕ್ಷಣವನ್ನು ಖಾಸಗಿಯವರಿಗೆ ಹೆಚ್ಚೆಚ್ಚು ತೆರೆಯಲಾಗುತ್ತದೆ, ಇದು ಆರೋಗ್ಯ ಪಾಲನೆಯನ್ನು ಇನ್ನಷ್ಟು ವೆಚ್ಚದಾಯಕ ಗೊಳಿಸುತ್ತದಷ್ಟೇ ಎಂದು ಡಾ. ಮಿತ್ರ ಹೇಳುತ್ತಾರೆ.

ಇದೀಗ 'ಸುಗಮ ಬದುಕಿ'ನ ಒಂದು ಸ್ಯಾಂಪಲ್!



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು ಟೈಂಸ್ ಆಫ್ ಇಂಡಿಯ

ಚುನಾವಣಾ ಟ್ರಸ್ಟ್‌ಗಳಿಂದ ರಾಜಕೀಯ ವಂತಿಗೆಗಳ ಹೊಸ ದಾಖಲೆ

ರಾಜಕೀಯ ಪಕ್ಷ ಗಳಿಗೆ ಕಾರ್ಪೊರೇಟ್‌ಗಳ ವಂತಿಗೆಯಲ್ಲಿ ಪಾರದರ್ಶಕತೆ ತರಲೆಂದು ಅವನ್ನು ಚುನಾವಣಾ ಟ್ರಸ್ಟ್‌ಗಳ ಮೂಲಕ ಕೊಡಬೇಕೆಂಬ ವ್ಯವಸ್ಥೆ ಕಲ್ಪಿಸಲಾಗಿದೆ. ಇದು 2016–17ರಲ್ಲಿ ಹೊಸ ದಾಖಲೆ ನಿರ್ಮಿಸಿದೆ ಎಂದು ಈ ಕುರಿತು ನಿಗಾ ಇಟ್ಟಿರುವ ಸಾರ್ವಜನಿಕ ಹಿತಾಸಕ್ತಿಯ ಸಂಸ್ಥೆ ಎಡಿಆರ್ ಹೇಳಿದೆ.

ಕಳೆದ ಸಾರ್ವತ್ರಿಕ ಚುನಾವಣೆಯ ವರ್ಷ 2013–14ರಲ್ಲಿ ಇದು 85.4 ಕೋಟಿ ರೂ. ಇತ್ತು. 2014–15ರಲ್ಲಿ ಇದು 177.4 ಕೋಟಿ ರೂ.ಗೇರಿತು; 2015–16ರಲ್ಲಿ 49.5 ಕೋಟಿಗಿಳಿಯಿತು, ಈಗ ಅದು 325.3 ಕೋಟಿ ರೂ.ಗೇರಿದೆ. ಅಂದರೆ 2014–15ಕ್ಕೆ ಹೋಲಿಸಿದರೂ 83% ಏರಿಕೆ, ಅಥವ ಸುಮಾರು ದುಪ್ಪಟ್ಟು. ಮತ್ತೊಂದು ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿದೆ ತಾನೇ?

ಈ ಹಣ ಯಾರಿಗೆ ಎಷ್ಟು ಹೋಗಿದೆ ಎಂಬ ಅಂಕಿ–ಅಂಶಗಳು ಇದನ್ನು ಇನ್ನಷ್ಟು ಸ್ಪಷ್ಟಗೊಳಿಸುತ್ತವೆ.

ಏಕೆ ಹೋಗುತ್ತವೆ ಎಂಬುದನ್ನು ಪಕ್ಕದ ಕಾರ್ಟೂನ್ ಹೇಳುತ್ತದೆ.

2013–14ರಲ್ಲಿ
ಬಿಜೆಪಿಗೆ 48% , ಕಾಂಗ್ರೆಸಿಗೆ 43%, ಇತರರಿಗೆ 9%
2014–15ರಲ್ಲಿ
ಇದು ಅನುಕ್ರಮವಾಗಿ 63%, 18% ಮತ್ತು 19%
2015–16ರಲ್ಲಿ ಅನುಕ್ರಮವಾಗಿ 93% 4& ಮತ್ತು 3%
2016–17ರಲ್ಲಿ ಅನುಕ್ರಮವಾಗಿ ಅಂದರೆ,
ಬಿಜೆಪಿಗೆ 89%, ಕಾಂಗ್ರೆಸಿಗೆ 5% ಮತ್ತು ಇತರರಿಗೆ 6%

ಇವು ಲೆಕ್ಕಕ್ಕೆ ಸಿಕ್ಕಿರುವ ಉದಾರ ಕೊಡುಗೆಗಳು.

ಬಹುಶಃ ಇನ್ನು ಮುಂದೆ ಚುನಾವಣಾ ಬಾಂಡ್‌ಗಳ ಯುಗ ಆರಂಭವಾದ ಮೇಲೆ ಈ ವಿವರಗಳೂ ಸಿಗಲಾರವು


ಅಚ್ಛೇ ದಿನ್‌ಗಳಲ್ಲಿ ಹುತಾತ್ಮರೂ ಮತ್ತು ಗಲಭೆಕೋರರೂ

"ವಿಚಿತ್ರ ಪದ್ಧತಿಯಾಗಿ ಬಿಟ್ಟಿದೆ. ಮುಸ್ಲಿಂ ಮೊಹಲ್ಲಾಗಳಲ್ಲಿ ಮೆರವಣಿಗೆ ತಗೊಂಡು ಹೋಗಿ, ಪಾಕಿಸ್ತಾನ್ ಮುರ್ದಾಬಾದ್ ಘೋಷಣೆ ಹಾಕಿ. ಯಾಕಣ್ಣಾ, ಈ ಮಂದಿ ಪಾಕಿಸ್ತಾನದವರೇನು?" ಇದು ಉತ್ತರಪ್ರದೇಶದ ಬರೇಲಿ ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟ್‌ರವರ ಫೇಸ್‌ಬುಕ್ ಪೋಸ್ಟ್.

ಆ ರಾಜ್ಯದ ಕಾಸ್‌ಗಂಜ್‌ನಲ್ಲಿ ಗಣತಂತ್ರ ದಿನದಂದು ಆರಂಭವಾದ ಗಲಭೆಗೆ ಸ್ಪಂದಿಸುತ್ತ ಆತ ಹೀಗೆ ಬರೆದಿದ್ದರು.

ಹೌದು, ಒಳ್ಳೆಯ ದಿನಗಳಲ್ಲಿ ಇಂತಹ ಹೊಸ ಹೊಸ ಪದ್ಧತಿಗಳು ಹುಟ್ಟಿಕೊಳ್ಳುತ್ತಿವೆ. ಈಗ ಅಲ್ಪಸಂಖ್ಯಾತ ಸಮುದಾಯದವರು ತ್ರಿವರ್ಣ ಬಾವುಟ ಹಾರಿಸದಿದ್ದರೂ ಆಕ್ಷೇಪ, ಹಾರಿಸಿದರೂ ಆಕ್ಷೇಪ ಎಂಬ ಪರಿಸ್ಥಿತಿ ಎಂದು ಇನ್ನೊಬ್ಬರು ಟಿಪ್ಪಣಿ ಮಾಡಿದ್ದಾರೆ.

ಅಂದು ಬೆಳಿಗ್ಗೆ ಕಾಸ್‌ಗಂಝ್‌ನ ಬದ್ದುನಗರ್‌ನ ಅಬ್ದುಲ್ ಹಮೀದ್ ಜಂಕ್ಷನ್‌ನಲ್ಲಿ ತ್ರಿವರ್ಣ ಧ್ವಜಾರೋಹಣದ ಕಾರ್ಯಕ್ರಮಕ್ಕೆ ತಯಾರಿ ನಡೆಯುತ್ತಿತ್ತು. ಭಾರತ–ಪಾಕ್ ಯುದ್ಧದಲ್ಲಿ ಅಪ್ರತಿಮ ಸಾಹಸ ತೋರಿ ಹುತಾತ್ಮನಾದ, ನಂತರ ದೇಶದ ಅತ್ಯುನ್ನತ ಮಿಲಿಟರಿ ಪ್ರಶಸ್ತಿಯಾದ 'ಪರಮ ವೀರ ಚಕ್ರ' ಪಡೆದ ಅಬ್ದುಲ್ ಹಮೀದ್ ನೆನಪಿನ ಜಂಕ್ಷನ್ ಇದು. ಹೌದು, ಮುಸ್ಲಿಮರು ಬಹುಸಂಖ್ಯೆಯಲ್ಲಿರುವ ಪ್ರದೇಶ. ಆಗ ಇದ್ದಕ್ಕಿದ್ದಂತೆ ಮೋಟಾರು ಬೈಕ್‌ಗಳಲ್ಲಿ ಹಲವು ಯುವಕರು ಬಂದರು, ನಮ್ಮ ತಿರಂಗಾ ಯಾತ್ರಾಕ್ಕೆ ದಾರಿ ಬಿಡಿ, ಇಲ್ಲಿ ಹಾಕಿರುವ ಕುರ್ಚಿಗಳನ್ನು ತೆಗೆಸಿ ಎಂದು ಆಗ್ರಹಿಸುತ್ತಾರೆ. ಆಗ, ನಾವೂ ಗಣತಂತ್ರ ದಿನಾಚರಣೆಗೇ ಇದನ್ನು ಹಾಕಿರುವುದು. ನೀವೂ ಭಾಗವಹಿಸಿ, ಕಾರ್ಯಕ್ರಮದ ನಂತರ ತೆಗೆಯುತ್ತೇವೆ ಎಂದರೂ ಕೇಳುವದಿಲ್ಲ. ಸ್ವಲ್ಪ ಸಮಯದ ನಂತರ ಸ್ವಲ್ಪ ದೂರದ ಪ್ರದೇಶದಲ್ಲಿ ಗಲಭೆಗಳು ಆರಂಭವಾದವು. ಗುಂಡಿನ ಸದ್ದು ಕೇಳಿಸಿತು. ಚಂದನ್ ಗುಪ್ತ ಮತ್ತು ನೌಶಾದ್ ಎಂಬ ಇಬ್ಬರು ಗುಂಡೇಟಿನಿಂದ ಗಾಯಗೊಂಡರು. ಚಂದನ್ ಗುಪ್ತ ಆಸ್ಪತ್ರೆಯಲ್ಲಿ ಅಸು ನೀಗಿದ. ನೌಶಾದ್‌ನನು ಹೆಚ್ಚಿನ ಚಿಕಿತ್ಸೆಗೆ ಅಲಿಗಡಕ್ಕೆ ಕಳಿಸಲಾಯ್ತು. ಹಲವಾರು ಮನೆಗಳು, ವಾಹನಗಳು ಬೆಂಕಿಗೆ ಆಹುತಿಯಾದವು, ಕೋಮುಗಲಭೆಗಳನ್ನು ಕಂಡಿರದ ಈ ಸ್ಥಳದಲ್ಲಿ ಈಗಲೂ ಉದ್ರಿಕ್ತ ಪರಿಸ್ತಿತಿಯಿದೆ.



ವ್ಯಂಗ್ಯಚಿತ್ರ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಚಂದನ್ ಗುಪ್ತ ಕುಟುಂಬಕ್ಕೆ ರಾಜ್ಯ ಸರಕಾರ 20 ಲಕ್ಷ ರೂ. ಪರಿಹಾರ ಘೋಷಿಸಿದೆ. ಆದರೆ ಈ ಪರಿಹಾರ ಬೇಕಿಲ್ಲ, ಚಂದನ್ ಗುಪ್ತ ಜನವರಿ 26ರಂದು ಭಾರತ್ ಮಾತಾಕೀ ಜೈ ಎನ್ನುತ್ತ ಹುತಾತ್ಮನಾಗಿದ್ದಾನೆ, ಅವನಿಗೆ ಹುತಾತ್ಮ ಸ್ಥಾನಮಾನ ಘೋಷಿಸಬೇಕು ಎಂಬುದು ಆತನ ಕುಟುಂಬದ ಮತ್ತು ಬಹುಶಃ ತಿರಂಗ ಯಾತ್ರಾದ ಆತನ ಜತೆಗಾರರ ಬೇಡಿಕೆ ಎಂದು ವರದಿಯಾಗಿದೆ.

ನಿಜವಾಗಿ ನಡೆದದ್ದೇನು? ಚಂದನ್ ಗುಪ್ತನ ತಂದೆಯ ಎಫ್‌ಐಆರ್ ಪ್ರಕಾರ ಚಂದನ್ ಮತ್ತು ಆತನ ಗೆಳೆಯರು ತಿರಂಗಾ ಯಾತ್ರಾ ಒಯ್ಯುವಾಗ ಮುಸ್ಲಿಂ ಪ್ರದೇಶದಲ್ಲಿ ಅವರನ್ನು ತಡೆದು ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಿಸಲು ಒತ್ತಾಯಿಸಲಾಯಿತು. ಅದಕ್ಕೆ ನಿರಾಕರಿಸಿ ಭಾರತ್ ಮಾತಾಕೀ ಜೈ ಎಂದಾಗ ಸಲಿಂ ಜವೇದ್ ಎಂಬಾತನ ಗುಂಡಿಗೆ ಚಂದನ್ ಗುಪ್ತ ಬಲಿಯಾದ. ಈಗ ಸಲೀಂನನ್ನು ಬಂಧಿಸಲಾಗಿದೆ. ಆತನ ಇಬ್ಬರು ಸೋದರರನ್ನೂ ಬಂಧಿಸಿ ಬಿಡಲಾಗಿದೆ. ಯಾಥಾಪ್ರಕಾರ 'ಒಂದೇ ಸಮುದಾಯದ ಹಲವಾರು ಹುಡುಗರನ್ನೂ ಬಂಧಿಸಲಾಗಿದೆ.

ಆದರೆ ಈ ನಡುವೆ ಹಲವು ವೀಡಿಯೋಗಳು ಪ್ರಸಾರದಲ್ಲಿದ್ದು, ಅದರಲ್ಲಿ ಮೋಟಾರು ಬೈಕ್‌ಗಳಲ್ಲಿ ಬಂದಿದ್ದ ಯುವಕರ ಕೈಗಳಲ್ಲಿ ತ್ರಿವರ್ಣ ಬಾವುಟಗಳೊಂದಿಗೆ ಕೇಸರಿ ಬಾವುಟಗಳೂ ಇದ್ದವು. ಜತೆಗೆ ಪಿಸ್ತೂಲು, ದೊಣ್ಣೆ ಇತ್ಯಾದಿಗಳೂ ಇದ್ದವು. ದೀಪಕ್ ಗುಪ್ತನನ್ನು ಬಲಿ ತೆಗೆದುಕೊಂಡ ಗುಂಡು ಎಲ್ಲಿಂದ ಬಂತು? ದೀಪಕ್ ನಿಜವಾಗಿಯೂ ಭಾರತ್ ಮಾತಾಕೀ ಜೈ ಎನ್ನುತ್ತ ಪ್ರಾಣ ಬಿಟ್ಟನೇ? ಇಂತಹ ಹಲವು ಪ್ರಶ್ನೆಗಳು ಎದ್ದಿವೆ.

ವಾಸ್ತವವಾಗಿ ಅಂದು ನಡೆದದ್ದೇನು? ವರದಿಗಳ ಪ್ರಕಾರ ಈ ತಿರಂಗಾಯಾತ್ರದ ಹುಡುಗರು ಹಮೀದ್ ಜಂಕ್ಷನ್‌ನಲ್ಲಿ ತ್ರಿವರ್ಣದ ಜತೆಗೆ ಕೇಸರೀ ಬಾವುಟವನ್ನೂ ಹಾರಿಸಬೇಕು ಎಂದು ಹೇಳಿದರು. ಇದಕ್ಕೆ ಒಪ್ಪದಿದ್ದಾಗ ಹಿಂದುಸ್ತಾನ್ ಮೇ ರಹನಾ ಹೈ ತೋ ವಂದೇ ಮಾತರಂ ಕಹನಾ ಹೋಗಾ, ಪಾಕಿಸ್ತಾನ್ ಮುರ್ದಾಬಾದ್ ಇತ್ಯಾದಿ ಘೋಷಣೆಗಳನ್ನು ಹಾಕಿದರು, ಆಗ ಗಲಭೆ ಆರಂಭವಾಯಿತು, ಅವರೆಲ್ಲ ಅಲ್ಲಿಂದ ಕಾಲು ಕಿತ್ತರು. ಆದರೆ ಸ್ವಲ್ಪ ದೂರದಲ್ಲಿ ಗಲಭೆ ಆರಂಭವಾಯಿತು.

ವಾಸ್ತವವಾಗಿ ಇದು ಪೂರ್ವಸಿದ್ದತೆಯೊಂದಿಗೆ ನಡೆದ ಗಲಭೆ, ಈ ಬಗ್ಗೆ ದೀಪಕ್ ಗುಪ್ತ ಕೆಲಸ ಮಾಡುವ ಸಂಸ್ಥೆಯ ಹಿರಿಯರೊಬ್ಬರಿಗೆ ಹಿಂದಿನ ದಿನವೇ ತಿಳಿದು ಬಂದಾಗ ಅವರು ಪೋಲೀಸರಿಗೆ, ಆಡಳಿತಕ್ಕೆ, ಸರಕಾರಕ್ಕೆ ತಿಳಿಸಿದರು. ಆದರೆ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ ಎನ್ನುತ್ತಾರೆ ಅವರು.

ಮೇಲೆ ಹೇಳಿದ ಬರೇಲಿ ಜಿಲ್ಲಾ ಮ್ಯಾಜಿಸ್ಟ್ರೇಟ್‌ರನ್ನು ಲಕ್ನೌಗೆ ಕರೆಸಲಾಯಿತಂತೆ. ಆತ 'ಭಾವನೆಗಳನ್ನು ಘಾಸಿಗೊಳಿಸಿದ್ದಕ್ಕೆ' ಕ್ಷಮೆ ಕೋರಿ ತಾನು ಬರದದ್ದನ್ನು ಹಿಂತೆಗೆದುಕೊಳ್ಳುವಂತೆ ಮಾಡಲಾಗಿದೆ. ಇಷ್ಟಕ್ಕೆ ನಿಲ್ಲದೆ. ಆತ 'ರಾಜಕೀಯ ಮುಖಂಡರಂತೆ ಮಾತಾಡಿದ್ದಾರೆ, ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದು ರಾಜ್ಯದ ಉಪಮುಖ್ಯಮಂತ್ರಿಗಳೇ 'ಭರವಸೆ' ಕೊಟ್ಟಿದ್ದಾರಂತೆ.

ಈ ಘಟನೆಯ ವಸ್ತುನಿಷ್ಟ ವರದಿ ಕೊಟ್ಟ ಎಬಿಪಿ ಚಾನೆಲ್‌ನ ಸುದ್ದಿ ಸಂಪಾದಕರಿಗೆ ಜೀವ ಬೆದರಿಕೆಗಳು ಬರುತ್ತಿವೆಯಂತೆ.



ವ್ಯಂಗ್ಯಚಿತ್ರ: ಅಲೋಕ್ ನಿರಂತರ್

‘ಪಕೋಡ ಉದ್ಯೋಗ’ಗಳ ಪ್ರಧಾನ ಮಂತ್ರಿ ಭರವಸೆ

ನಿಯಮಿತ ಅಥವ ಔಪಚಾರಿಕ ವಲಯದಲ್ಲಿ ಉದ್ಯೋಗ ಸಿಗದಂತಾದಾಗ, ಕಾರ್ಖಾನೆಗಳು ಮುಚ್ಚಿದಾಗ ಹೇಗಾದರೂ ಬದುಕುಳಿಯಲು ಜನಗಳು ಬೀದಿಗಳಲ್ಲಿ ಪಕೋಡ ಮಾರುವುದು ಮುಂತಾದ ‘ಸ್ವ-ಉದ್ಯೋಗ’ಗಳ ಮೊರೆ ಹೋಗುತ್ತಾರೆ. ಇದು ಬೃಹತ್ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿ ಎಂಬುದು ದೇಶದ ಪ್ರಧಾನ ಮಂತ್ರಿಗಳು ಮುಂದಿಡಬಹುದಾದ ಕರುಣಾಜನಕ ತರ್ಕ. ಇದು ಕಳೆದ ಮೂರೂವರೆ ವರ್ಷಗಳಲ್ಲಿ ಯಾವುದೇ ಅರ್ಥಪೂರ್ಣ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ನಿರ್ಮಿಸುವಲ್ಲಿ ಮತ್ತು ಹೊಸ ಉದ್ಯೋಗಗಳನ್ನು ಸೃಷ್ಟಿಸುವಲ್ಲಿ ಮೋದಿ ಸರಕಾರದ ಸಂಪೂರ್ಣ ವಿಫಲತೆಯನ್ನು ಬಯಲಿಗೆ ತರುತ್ತದಷ್ಟೇ.

ಪ್ರಕಾಶ ಕಾರಟ್



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಕಳೆದ ವಾರ ಒಂದು ಖಾಸಗಿ ಟೆಲಿವಿಶನ್ ವಾಹಿನಿಗೆ ನೀಡಿದ ಸಂದರ್ಶನದಲ್ಲಿ ರಸ್ತೆಯಲ್ಲಿ ಒಂದು ಪಕೋಡ ಅಂಗಡಿ ತೆರೆಯುವವವನೂ ಉದ್ಯೋಗಿ ಎಂದು ಪರಿಗಣಿಸಬೇಕು ಎಂದು ವಾದ ಹೂಡಿದರು. ದಿನಕ್ಕೆ 200ರೂ. ಗಳಿಸುವ ಆತನ ಆದಾಯ ಯಾವ ಲೆಕ್ಕ ಪುಸ್ತಕದಲ್ಲೂ ಕಾಣುವುದಿಲ್ಲ ಎಂದೂ ಹೇಳಿದರು. “ನಿಜ ಎಂದರೆ ಬಹುದೊಡ್ಡ ಸಂಖ್ಯೆಯಲ್ಲಿ ಜನಗಳು ಉದ್ಯೋಗದಲ್ಲಿ ಇದ್ದಾರೆ” ಎಂದು ಅವರು ಹೇಳಿದರು.

ಅಂದರೆ ಈಗ ರಸ್ತೆಗಳಲ್ಲಿ ಸರಕುಗಳನ್ನು ಮಾರುವವರು ಬೃಹತ್ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಸುತ್ತಿದ್ದಾರೆ ಎಂದು ಸ್ವತಃ ಪ್ರಧಾನ ಮಂತ್ರಿಗಳ ಬಾಯಿಂದಲೇ ಕೇಳುತ್ತಿದ್ದೇವೆ. ಇವರೆಲ್ಲ ‘ಸ್ವ-ಉದ್ಯೋಗಿಗಳು’. ಇದೀಗ ಪ್ರಧಾನ ಮಂತ್ರಿಗಳು ಮುಂದಿಡಬಹುದಾದ ಕರುಣಾಜನಕ ವಾದ. ಇದು ಕಳೆದ ಮೂರೂವರೆ ವರ್ಷಗಳಲ್ಲಿ ಯಾವುದೇ ಅರ್ಥಪೂರ್ಣ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ನಿರ್ಮಿಸುವಲ್ಲಿ ಮತ್ತು ಹೊಸ ಉದ್ಯೋಗಗಳನ್ನು ಸೃಷ್ಟಿಸುವಲ್ಲಿ ಮೋದಿ ಸರಕಾರದ ಸಂಪೂರ್ಣ ವಿಫಲತೆಯನ್ನು ಬಯಲಿಗೆ ತರುತ್ತದಷ್ಟೇ. ಚುನಾವಣೆಗಳ ಸಮಯದಲ್ಲಿ ಮೋದಿಯವರು ವರ್ಷಕ್ಕೆ 2 ಕೋಟಿ ಉದ್ಯೋಗ ನಿರ್ಮಾಣದ ಭರವಸೆ ಕೊಟ್ಟಿದ್ದರು ಎಂಬುದನ್ನು ನೆನಪಿಸಿಕೊಳ್ಳಿ.

ಮೋದಿಯವರು ಎಂತಹ ಉದ್ಯೋಗದ ಬಗ್ಗೆ ಹೇಳುತ್ತಿದ್ದಾರೆ? ‘ಉದ್ಯೋಗ-ನಿರುದ್ಯೋಗ ಸರ್ವೆ 2015-16ರ ವರದಿ’ಯ ಪ್ರಕಾರ ಭಾರತದ ಅರ್ಧದಷ್ಟು ದುಡಿಮೆಗಾರರು (46.6ಶೇ.) ಸ್ವ-ಉದ್ಯೋಗ ನಡೆಸುವವರು. ಇವರಲ್ಲಿ 41% ಮಂದಿಯ ಆದಾಯ ವರ್ಷಕ್ಕೆ 60,000ರೂ. , ಅಂದರೆ ತಿಂಗಳಿಗೆ 5000ರೂ. ಮಾತ್ರ. ಅಂದರೆ ಇದು ಬಹಳ ಕಡಿಮೆ ಆದಾಯ ತರುವ ಉದ್ಯೋಗ.

ನಮಗೆಲ್ಲರಿಗೂ ತಿಳಿದಿರುವಂತೆ ನಿಯಮಿತ ಅಥವ ಔಪಚಾರಿಕ ವಲಯದಲ್ಲಿ ಉದ್ಯೋಗ ಸಿಗದಂತಾದಾಗಲೇ ಜನಗಳು ‘ಸ್ವ-ಉದ್ಯೋಗ’ ನಡೆಸುತ್ತಾರೆ. ನವ-ಉದಾರವಾದಿ ಧೋರಣೆಗಳ ಕೃಪೆಯೆಂದರೆ, ಅದು ತಂದಿರುವ ಆರ್ಥಿಕ ಬೆಳವಣಿಗೆಯ ವಿಧಾನದಲ್ಲಿ ಅನೌಪಚಾರಿಕ ವಲಯದಲ್ಲಿ ಕಡಿಮೆ ಸಂಬಳದ ಉದ್ಯೋಗಗಳು ಮತ್ತು ಸಂಘಟಿತ ವಲಯದಲ್ಲಿ ಕಾಂಟ್ರಾಕ್ಟ್ ಉದ್ಯೋಗಗಳನ್ನು ಬಿಟ್ಟು ಬೇರೆ ಉದ್ಯೋಗಗಳನ್ನು ಸೃಷ್ಟಿಸುವುದಿಲ್ಲ.

ಆರ್ಥಿಕ ಮಂದಗತಿ ಮತ್ತು ನೋಟುರದ್ದತಿ ಎಲ್ಲೆಡೆಗಳಲ್ಲೂ ಉದ್ಯೋಗ ನಿರ್ಮಾಣದ ಸಾಧ್ಯತೆಗಳನ್ನು ಸಾಯಿಸಿ ಬಿಟ್ಟಿದೆ. ಗ್ರಾಮೀಣ ಉದ್ಯೋಗದ ಅವಕಾಶಗಳು ಕುಂಠಿತಗೊಳ್ಳುತ್ತಿರುವುದು ಕೂಡ ಪರಿಸ್ಥಿತಿಯನ್ನು ಉಲ್ಬಣಗೊಳಿಸಿದೆ.

ಇಂತಹ ಒಂದು ಸನ್ನಿವೇಶದಲ್ಲಿ ಮೋದಿಯವರು ರಸ್ತೆಗಳಲ್ಲಿ ಪಕೋಡ ಮಾರುವುದು ಒಂದು ಉದ್ಯೋಗ ಎಂಬ ವಿಲಕ್ಷಣ ವಾದ ಹೂಡಿದ್ದಾರೆ.

ಇದು ಕಾರ್ಖಾನೆಯಿಂದ ಕೆಲಸ ಕಳಕೊಂಡು ಹತಾಶನಾಗಿ ಸ್ವಲ್ಪವಾದರೂ ಹಣ ಗಳಿಸಲು ಕೈಗಾಡಿಯಲ್ಲಿ ತರಕಾರಿ ಮಾರಲು ಮುಂದಾಗಬೇಕಾದ ಕಾರ್ಮಿಕನ ಮೇಲೆ, ಹಳ್ಳಿಗಳಿಂದ ದೊಡ್ಡ ಸಂಖ್ಯೆಯಲ್ಲಿ ನಗರಗಳಿಗೆ ಜೀವನೋಪಾಯ ಹುಡುಕಿಕೊಂಡು ಬಂದು ರಸ್ತೆಯಲ್ಲಿ ಯಾವುದು ಸಿಗುತ್ತದೋ ಅದನ್ನು ಮಾರುವ ‘ಸ್ವ-ಉದ್ಯೋಗಿ’ಗಳ ಪ್ರವಾಹವನ್ನು ಸೇರಿಕೊಳ್ಳುವ ಅಪಾರ ಸಂಖ್ಯೆಯ ಗ್ರಾಮೀಣ ಬಡವರ ಮೇಲೆ ಮಾಡಿರುವ ಕ್ರೂರ ವ್ಯಂಗ್ಯ. ಈ ಎಲ್ಲ ಜನಗಳೂ ವಾಸ್ತವವಾಗಿ ಸಾಕಷ್ಟು ಉದ್ಯೋಗವಿಲ್ಲದೆ ಹೇಗಾದರೂ ಬದುಕುಳಿಯಲು ಹೆಣಗುತ್ತಿರುವವರು.

ಸರಕಾರ ಸ್ವ-ಉದ್ಯೋಗಿಗಳಿಗೆ ಸಾಲ ಒದಗಿಸುವ ಮುದ್ರಾ ಯೋಜನೆಯ ಬಗ್ಗೆ ಬಹಳಷ್ಟು ಅಬ್ಬರಿಸಿದೆ. ವಾಸ್ತವವಾಗಿ 90% ದಷ್ಟು ಸ್ವ-ಉದ್ಯೋಗಿಗಳಿಗೆ ಸಿಕ್ಕಿದ್ದು 50,000ರೂ.ಗಿಂತಲೂ ಕಡಿಮೆ ಸಾಲ. ಇದು ಯಾವುದೇ ಪ್ರಯೋಜನಕಾರಿ ಉದ್ಯೋಗ ಒದಗಿಸಲಾರದ ಹೂಡಿಕೆ.

ಮೋದಿಯವರ ‘ ಮೇಕ್ ಇನ್ ಇಂಡಿಯಾ’ ಘೋಷಣೆ ಸರಕು ತಯಾರಿಕಾ ವಲಯಕ್ಕೆ ಉತ್ತೇಜನೆ ನೀಡಿ ಗುಣಮಟ್ಟದ ಉದ್ಯೋಗಾವಕಾಶಗಳನ್ನು ನಿರ್ಮಿಸಲಿಕ್ಕಾಗಿ ಎಂದಿತ್ತು. ಆದರೆ ಆ ಯೋಜನೆ ನೆಲದಿಂದ ಮೇಲೇಳಲೇ ಇಲ್ಲ. ತಯಾರಿಕಾ ವಲಯದ ಬೆಳವಣಿಗೆ ಮುಗ್ಗರಿಸಿಕೊಂಡೇ ಇದೆ. ಕಳೆದ ವರ್ಷ ಹಲವು ಕಂಪನಿಗಳು ರಿಟ್ರೆಂಚ್‌ಮೆಂಟ್ ನಡೆಸಿದವು.

ಹೀಗೆ ನಮಗೆ ಮುನ್ನೆಚ್ಚರಿಕೆ ಬಂದಿದೆ. ಉದ್ಯೋಗ ಮಾರುಕಟ್ಟೆಗೆ ಬರುವ ಕೋಟ್ಯಂತರ ಹೊಸಬರಿಗೆ ಪ್ರಧಾನ ಮಂತ್ರಿಗಳು ಹೆಚ್ಚೆಚ್ಚು ‘ಪಕೋಡ ಉದ್ಯೋಗ’ಗಳ ಭರವಸೆ ನೀಡುತ್ತಿದ್ದಾರೆ.

ವ್ಯೂಹಾತ್ಮಕ ಚಿಂತನೆಯಿಲ್ಲದೆ ಕೈಕಟ್ಟಿ ಕೂತಿರುವ ಆರ್ಥಿಕ ಸರ್ವೆ 2017-18

ವಾರ್ಷಿಕ ಬಜೆಟಿನ ಮೊದಲು ದೇಶದ ಆರ್ಥಿಕ ಪರಿಸ್ಥಿತಿಯ ಪರಾಮರ್ಶೆ ನಡೆಸುವ ಸರಕಾರದ ಮುಖ್ಯ ಆರ್ಥಿಕ ಸಲಹೆಗಾರರ ಆರ್ಥಿಕ ಸರ್ವೆ ದೇಶದ ಆರ್ಥಿಕ ಪರಿಸ್ಥಿತಿ ಅಭದ್ರವಾಗಿದೆ ಎಂದು ಗುರುತಿಸಿದೆ. ಅವನ್ನು ಎದುರಿಸುವ ಬಗೆಯನ್ನು ವಿಶ್ಲೇಷಿಸಬೇಕಾಗಿತ್ತು. ಆದರೆ ಅಂತದ್ದೇನನ್ನೂ ಅದು ಮಾಡಿಲ್ಲ, ಕೈಕಟ್ಟಿ ಕೂತಿದೆ.

ಪ್ರೊ. ಪ್ರಭಾತ್ ಪಟ್ನಾಯಕ್

ಭಾರತ ಸರಕಾರದ 2017-18ರ ಆರ್ಥಿಕ ಸರ್ವೇಕ್ಷಣೆ ಭಾರತದ ಆರ್ಥಿಕ ವ್ಯವಸ್ಥೆ ಹುಲಿಯ ಮೇಲೆ ಸವಾರಿ ಮಾಡುತ್ತಿರುವವನಂತಿದೆ ಎಂಬುದನ್ನು ಗುರುತಿಸಿದೆ. ಆದರೆ ಈ ಅಭದ್ರ ಸ್ಥಿತಿಯಿಂದ ಪಾರಾಗಲು ಅದರ ಪರಿಹಾರವೆಂದರೆ ಸುಮ್ಮನೇ ಕೈಕಟ್ಟಿ ಕೂತುಕೊಂಡು ಹೇಗೋ ಸವಾರಿ ಮುಂದುವರಿಯುತ್ತದೆಂದು ನಿರೀಕ್ಷಿಸುವುದು

ಈ ಸರ್ವೆ ಪ್ರಸ್ತುತ ಪಡಿಸುವ ಮಾಹಿತಿಗಳು ಭಾರತ ಸರಕಾರದ ಕೇಂದ್ರೀಯ ಸಾಂಖ್ಯಿಕ ಕಚೇರಿ(ಸಿಎಸ್‌ಒ) ಅಂಕಿ-ಅಂಶಗಳಿಗಿಂತ ಹೆಚ್ಚಾಗಿ ಐಎಂಎಫ್ ದಾವೊಸ್ ಸಭೆಗೆ ಸಿದ್ಧಪಡಿಸಿದ್ದ ಮಾಹಿತಿಗಳಿಗೆ ಸಮೀಪವಾಗಿದೆ.

ಜಾಗತಿಕ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತಿದೆ, ಮತ್ತು ಮೋದಿ ಸರಕಾರ ನೋಟುರದ್ಧತಿಯಂತಹ ದುಸ್ಸಾಹಸಕ್ಕೆ ಇಳಿಯುವುದಿಲ್ಲ ಎಂಬ ನಂಬಿಕೆಯ ಮೇಲೆ ಈ ಸರ್ವೆ ನಿಂತಿದೆ.

ಎರಡು ಮೂಲಗಳಿಂದ ತೊಂದರೆಗಳು ಬರಬಹುದು ಎಂದು ಅದು ನಿರೀಕ್ಷಿಸುತ್ತದೆ- ಒಂದು, ಜಾಗತಿಕ ತೈಲ ಬೆಲೆಗಳಲ್ಲಿ ಮತ್ತಷ್ಟು ಏರಿಕೆ, ಮತ್ತು ಎರಡು, ದೇಶದಲ್ಲಿ ಸದ್ಯಕ್ಕೆ ಕಾಣುತ್ತಿರುವ ಶೇರು ಮಾರುಕಟ್ಟೆಯ ತೇಜಿ ಕುಸಿಯುವ ಭೀತಿ. ಕೆಳಮಟ್ಟದಲ್ಲಿದ್ದ ತೈಲಬೆಲೆಗಳು ಮತ್ತು ಶೇರು ಮಾರುಕಟ್ಟೆ ತೇಜಿ ಇದುವರೆಗೆ ಪರಿಸ್ಥಿತಿಯನ್ನು ಸಮಾಧಾನಕರವಾಗಿಟ್ಟಿವೆ, ವಿದೇಶಿ ಹಣಕಾಸು ಬಂಡವಾಳ ಬರುತ್ತಿರಲು ಮತ್ತು ವಿದೇಶಿ ವಿನಿಮಯ ಮೀಸಲು ಉತ್ತಮ ವಾಗಿರಲು ನೆರವಾಗಿವೆ.

ಅಂದರೆ ದೇಶದ ಆರ್ಥಿಕ ಬೆಳವಣಿಗೆ ದರದ ಏರಿಕೆಯಲ್ಲಿ ಶೇರು ಮಾರುಕಟ್ಟೆಯ ಗುಳ್ಳೆಯ ಪಾತ್ರ ಇದೆ ಎಂಬುದನ್ನು ಅದು ಗುರುತಿಸುತ್ತದೆ. ಈ ಗುಳ್ಳೆ ಒಡೆದರೆ, ಹಣಕಾಸು ಹೊರಗೆ ಹರಿದು ಹೋಗುತ್ತದೆ, ಅದನ್ನು ಎದುರಿಸಲು ಬಡ್ಡಿದರಗಳನ್ನು ಹೆಚ್ಚಿಸಬೇಕಾಗುತ್ತದೆ, ಅದರಿಂದ ದೇಶ ಆರ್ಥಿಕ ಹಿಂಜರಿತದತ್ತ ನೂಕಲ್ಪಡುತ್ತದೆ.

ಆದರೆ ಹೀಗೆ ಶೇರು ಮಾರುಕಟ್ಟೆಯ ಗುಳ್ಳೆ ಒಡೆದರೆ ದೇಶದ ಆರ್ಥಿಕಕ್ಕೆ ಆಗುವ ತೊಂದರೆಯನ್ನು ಮೀರುವದು ಹೇಗೆ, ಈ ಗುಳ್ಳೆಯ ಮೇಲಿನ ಅವಲಂಬನೆಯನ್ನು ತಪ್ಪಿಸುವುದು ಹೇಗೆ ಎಂಬ ಯೋಚನೆಯ ಸಂಕೇತವೂ ಈ ಸರ್ವೆಯಲ್ಲಿಲ್ಲ, ಬದಲಿಗೆ ಈ ಗುಳ್ಳೆ ಮುಂದುವರೆಯಲಿ ಎಂಬ ಮೌನ ನಿರೀಕ್ಷೆಯೇ ಇದ್ದಂತಿದೆ.

ಇನ್ನೂ ಆತಂಕದ ಸಂಗತಿಯೆಂದರೆ ಭಾರತದ ಅರ್ಥಿಕ ಬೆಳವಣಿಗೆಯ ಈಗಿನ ಅಭದ್ರ ಸ್ಥಿತಿ ಕೇವಲ ಮೇಲೆ ಹೇಳಿದ ಎರಡು ಅಂಶಗಳ ಮೇಲಷ್ಟೇ ಅವಲಂಬಿಸಿಲ್ಲ. ಇನ್ನೂ ಹಲವು ಅಂಶಗಳನ್ನು ಅವಲಂಬಿಸಿದೆ. ಉದಾಹರಣೆಗೆ, ಅಮೆರಿಕಾದಲ್ಲಿ ಬಡ್ಡಿದರಗಳು. ಅದು ಏರುವ ಸಂಭವಗಳು ಈಗ ಬಹಳಷ್ಟಿವೆ. ಹಾಗೇನಾದರೂ ಏರಿದರೆ, ಹಣಕಾಸು ಭಾರತದಂತಹ ದೇಶಗಳಿಂದ ಅಮೆರಿಕಾಕ್ಕೆ ಹಿಂದಕ್ಕೆ ಹರಿದು ಹೋಗುತ್ತದೆ. ಇದರಿಂದ ಕೂಡ ಭಾರತದ ಶೇರು ಮಾರುಕಟ್ಟೆ ಕುಸಿಯಬಹುದು.

ಇಲ್ಲಿ ಪರಿಗಣಿಸಬೇಕಾದ ಇನ್ನೊಂದು ಅಂಶ ಎಂದರೆ ಇರಾನ್ ಕುರಿತಂತೆ ಟ್ರಂಪ್ ಯುದ್ಧಕೋರತನ. ಕಚ್ಚಾ ತೈಲ ಬೆಲೆ ಬ್ಯಾರಲ್‌ಗೆ 70 ಡಾಲರ್ ತಲುಪಿದೆ. ಅದು ಇಳಿಯುವ ಸಂಕೇತಗಳಿಲ್ಲ. ಟ್ರಂಪ್ ಏನಾದರೂ ಇರಾನಿನ ಮೇಲೆ ನಿರ್ಬಂಧಗಳನ್ನೇನಾದರೂ ಹೇರಿದರೆ ತೈಲ ಬೆಲೆಗಳು ವಿಪರೀತವಾಗಿ ಏರಬಹುದು. ಅದು ಭಾರತೀಯ ಆರ್ಥಿಕ ವ್ಯವಸ್ಥೆಯ ಮೇಲೆ ನೇರವಾಗಿಯೂ, ಪರೋಕ್ಷವಾಗಿಯೂ ಪ್ರತಿಕೂಲ ಪರಿಣಾಮಗಳನ್ನು ಬೀರಬಹುದು- ಹಣದುಬ್ಬರ ದರದ ಮೇಲೆ, ಪಾವತಿ ಬಾಕಿಯ ಮೇಲೆ ಮತ್ತು ಬೆಳವಣಿಗೆ ದರದ ಮೇಲೂ.

ಮೂರನೆಯದಾಗಿ, ರಫ್ತು ಬೆಳವಣಿಗೆ ಮುಂದೆಯೂ ದೇಶದ ಆರ್ಥಿಕತೆಗೆ ಉತ್ತೇಜನೆ ನೀಡುತ್ತಿರುತ್ತದೆ ಎಂಬ ನಿರೀಕ್ಷೆಯೂ ಹುಸಿಯಾಗಬಹದು. ಇದು ಎರಡು ಅಂಶಗಳಿಂದ ಆಗಬಹುದು. ಒಂದು, ತೈಲ ಬೆಲೆಗಳ ಏರಿಕೆ, ಮತ್ತು ಅಮೆರಿಕಾದಲ್ಲಿ ಬಡ್ಡಿ ದರಗಳ ಏರಿಕೆಯಿಂದ ಜಾಗತಿಕ ಅರ್ಥಿಕ ವ್ಯವಸ್ಥೆಯ ಬೆಳವಣಿಗೆ ದರ ಕೆಳಕ್ಕೆ ಬೀಳಬಹುದು, ಎರಡನೆಯದಾಗಿ, ಅಮೆರಿಕಾದಲ್ಲಿ ತನ್ನ ಮಾರುಕಟ್ಟೆಗ ಎಬೇರೆಯವರು ಪ್ರವೇಶಿಸದಂತೆ ತಡೆಯುವ ಸಂರಕ್ಷಣಾ ಧೋರಣೆ ಭಾರತದ ಸೇವಾವಲಯದ ರಫ್ತುಗಳಿಗೆ ಅಡ್ಡಿಯುಂಟು ಮಾಡಬಹದು. ಈಗಾಗಲೇ ಜಾಗತಿಕ ಅರ್ಥಿಕ ಏರು ಸ್ಥಿತಿಯಲ್ಲಿರುವಾಗಲೂ ಐಟಿ ಸಂಬಂಧಿತ ಸೇವಾ ಉದ್ಯೋಗಗಳಲ್ಲಿ ಇಳಿಕೆ ಕಾಣುತ್ತಿದೆ.

ಅಲ್ಲದೆ ಚೀನಾದ ಆರ್ಥಿಕವೂ ಮಂದಗತಿಯನ್ನು ಎದುರಿಸಲಿದೆ ಎನ್ನಲಾಗುತ್ತಿದೆ. ಆದರೆ ಅದು ಈ ಮಂದಗತಿಯನ್ನು ಕಣ್ಣು ಮುಚ್ಚಿ ಒಪ್ಪಿಕೊಳ್ಳಿಕ್ಕಿಲ್ಲ, ಭಾರತದಂತಹ ದೇಶಗಳ ಮಾರುಕಟ್ಟೆಗಳನ್ನು ಗಳಿಸಲು ದೃಢಪ್ರಯತ್ನ ಮಾಡಬಹದು. ದಾವೊಸ್‌ನಲ್ಲಿ ನಮ್ಮ ಪ್ರಧಾನ ಮಂತ್ರಿಗಳು ಆಮದುಗಳ ಮೇಲೆ ತಡೆ ಹಾಕುವ ಸಂರಕ್ಷಕ ಪ್ರವೃತ್ತಿ ಭಯೋತ್ಪಾದನೆಯಷ್ಟೇ ಕೆಟ್ಟದು ಎಂದಿರುವಾಗ ಭಾರತೀಯ ಉತ್ಪಾದನೆಯನ್ನು ರಕ್ಷಿಸಿಕೊಳ್ಳಲು ಯಾವುದೇ ಕಾರ್ಯತಂತ್ರ ಸರಕಾರದ ಬಳಿ ಇಲ್ಲ.

ಈ ಸರ್ವೆಯ ಬಳಿ ನ್ಯಾಯಾಂಗ ಸುಧಾರಣೆ, ಲಿಂಗ ಸಮಾನತೆ, ವಿಜ್ಞಾನದ ಮೇಲೆ ಖರ್ಚು ಮುಂತಾದವುಗಳ ಬಗ್ಗೆ ದಂಡಿಯಾಗಿ ಸಲಹೆ-ಸೂಚನೆಗಳಿದ್ದರೂ, ದೇಶದ ಆರ್ಥಿಕ ವ್ಯವಸ್ಥೆಗೆ ಇರುವ ಮೇಲೆ ಹೇಳಿದ ಬೆದರಿಕೆಗಳ ಹಿನ್ನೆಲೆಯಲ್ಲಿ ಅವನ್ನು ಹೇಗೆ ಎದುರಿಸುವುದು, ನಿವಾರಿಸುವುದು ಎಂಬ ಬಗ್ಗೆ ಕಾದು ನೋಡುವ ಸ್ಪಂದನೆಯಷ್ಟೇ ಕಾಣುತ್ತಿದೆ. ವ್ಯೂಹಾತ್ಮಕ ಮರುಚಿಂತನೆನ್ನೇನೂ ಈ ಸರ್ವೆ ಮಾಡಿಲ್ಲ.

ಈ ನಿಟ್ಟಿನಲ್ಲಿ ಚೀನಾದ ವ್ಯೂಹಾತ್ಮಕ ಚಿಂತನೆ ಭಾರತಕ್ಕಿಂತ ಬಹಳ ಮುಂದಿದೆ. ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನ ಸಂದರ್ಭದಲ್ಲಿ ಅಲ್ಲಿ ಆಂತರಿಕ ಮಾರುಕಟ್ಟೆಯನ್ನು ವಿಸ್ತರಿಸುವ, ರಫ್ತು ಮಾರುಕಟ್ಟೆಯ ಮೇಲೆ ವಿಪರೀತ ಅವಲಂಬನೆಯಿಂದ ದೂರ ಸಾಗುವ ಅಗತ್ಯದ ಬಗ್ಗೆ ಬಲವಾದ ಚಿಂತನೆ ನಡೆಯಿತು. ಇದರಿಂದಾಗಿ ಹಣಕಾಸು ಉತ್ತೇಜನೆಯೊಂದಿಗೆ, ಸಂಬಳದ ದರಗಳಲ್ಲಿ ಏರಿಕೆ ತರಲಾಯಿತು. ಇದು ಚೀನೀ ರಫ್ತುಗಳ ಮೇಲೆ ಸ್ವಲ್ಪ ಪ್ರತಿಕೂಲ ಪರಿಣಾಮ ಬೀರಿದರೂ, ಆಂತರಿಕ ಮಾರುಕಟ್ಟೆ ವಿಸ್ತಾರಗೊಂಡಿತು.

ಚೀನಾಕ್ಕೆ ರಫ್ತುಗಳ ಮೇಲೆ ಅವಲಂಬನೆಯನ್ನು ತಗ್ಗಿಸಲು, ಬೆಳವಣಿಗೆಯ ನೆಲೆಯನ್ನು ಆಂತರಿಕ ಮಾರುಕಟ್ಟೆಯತ್ತ ತಿರುಗಿಸಲು ಸಾಧ್ಯವಾಗುತ್ತದೋ ಇಲ್ಲವೋ ಗೊತ್ತಿಲ್ಲ. ಆದರೆ ಭಾರತದಲ್ಲಿ ಅಧಿಕೃತ ವಲಯಗಳಲ್ಲಿ ಇಂತಹ ಪ್ರಶ್ನೆಗಳ ಚರ್ಚೆಯೂ ನಡೆಯುತ್ತಿಲ್ಲ ಎಂಬುದು ಈ ಸರ್ವೆ ಈ ಕುರಿತು ತಾಳಿರುವ ದೊಡ್ಡ ಮೌನದಲ್ಲಿ ಸ್ಪಷ್ಟವಾಗುತ್ತದೆ.

ಬಿಜೆಪಿಗೆ ಇಂತಹ ಪ್ರಶ್ನೆಗಳ ಅರಿವೇ ಇಲ್ಲ ಎಂಬುದು ಅರ್ಥವಾಗುತ್ತದೆ, ಏಕೆಂದರೆ ಅದರ ಅರ್ಥಶಾಸ್ತ್ರದ ತಿಳುವಳಿಕೆಯೂ ಅಷ್ಟೇ. ಆದರೆ ಈ ಆರ್ಥಿಕ ಸರ್ವೆಯಾದರೂ ಇದನ್ನು ಗುರುತಿಸಿ ತೋರಿಸಬೇಕಾಗಿತ್ತು. ಆದರೇನು ಮಾಡುವುದು, ಅಂತದ್ದೇನನ್ನೂ ಅದು ಮಾಡಿಲ್ಲ.

ನಿಜ, ಒಂದು ಕ್ಷೇತ್ರದಲ್ಲಿ ಅದು ಒಂದು ಕುತೂಹಲಕಾರೀ ಸಲಹೆ ಮಾಡುತ್ತದೆ. ರೈತರಿಗೆ ಉತ್ತರ ಭಾರತದ ಧಾನ್ಯ ಬೆಳೆಯುವ ನೀರಾವರಿ ಪ್ರದೇಶಗಳಲ್ಲಿ ಲಾಗುವಾಡುಗಳ ಸಬ್ಸಿಡಿಗಳು, ಬೆಂಬಲ ಬೆಲೆಗಳ ಬದಲು ನೇರ ಪ್ರಯೋಜನಗಳ ನಗದು ವರ್ಗಾವಣೆಗಳ ಸಲಹೆ. ಇದು ಡಬ್ಲ್ಯುಟಿಒ ದಲ್ಲಿ ಮುಂದುವರೆದ ದೇಶಗಳ ಒಂದು ಬೇಡಿಕೆ. ಭಾರತ ಸರಕಾರ ಇದನ್ನು ವ್ಯವಸ್ಥಿತವಾಗಿ ವಿರೋಧಿಸುತ್ತ ಬಂದಿದ್ದರೂ, ಭಾರತ ಸರಕಾರದ ದಸ್ತಾವೇಜಿನಲ್ಲಿಯೇ ಈ ಪ್ರಸ್ತಾಪ ಇರುವುದು ವಿಚಿತ್ರವೇ ಸರಿ.

ಇದು ಈ ಆರ್ಥಿಕ ಸರ್ವೆಯ ನಿಜವಾದ ಸ್ಥಾನಮಾನ ಏನು ಎಂಬ ಪ್ರಶ್ನೆಯನ್ನು ಎತ್ತುತ್ತದೆ. ಇದು ಸರಕಾರದ ಮುಖ್ಯ ಆರ್ಥಿಕ ಸಲಹೆಗಾರರ, ಜತೆಗೆ ಅವರು ಈ ಹಿಂದೆ ಇದ್ದ(ಐಎಂಎಫ್ ಕೂಡ ಇದರಲ್ಲಿ ಸೇರಿದೆ) ಸಂಸ್ಥೆಗಳ ವೈಯಕ್ತಿ ಕ ಅಭಿಪ್ರಾಯಗಳೋ ಅಥವ ಅದು ಸರಕಾರದ ನಿಲುವನ್ನು ಪ್ರತಿನಿಧಿಸುಸುತ್ತದೋ?

ಸರಕಾರ 2022 ರ ವೇಳೆಗೆ ಕೃಷಿ ಆದಾಯಗಳನ್ನು ದ್ವಿಗುಣಗೊಳಿಸುವ ಗುರಿಯಿಟ್ಟುಕೊಂಡಿದ್ದನ್ನು ಹೊಗಳುವ ಈ ಆರ್ಥಿಕ ಸರ್ವೆ ಅದನ್ನು ಸಾಧಿಸಲು ನೆರವಾಗಬಹುದಾದ ಯಾವುದೇ ಕ್ರಮಗಳ ಪ್ರಸ್ತಾಪವನ್ನೂ ಮಾಡದಿರುವುದು ಕುತೂಹಲದ ಸಂಗತಿ. ಇದು ಬಹುಶಃ ಈ ವಾರ್ಷಿಕ ಆರ್ಥಿಕ ಸರ್ವೆ ಭಾರತ ಸರಕಾರದ ಎದುರು ತನ್ನದೇ ಆದ ಸ್ವಾಯತ್ತತೆಯನ್ನು ಪಡೆದಿರುವುದನ್ನು ಬಿಂಬಿಸುತ್ತದೆ.

ತೆಲಂಗಾಣದಲ್ಲಿ ಬಹುಜನ ಎಡರಂಗ ರಚನೆ

ರಾಜ್ಯಗಳ ಸುತ್ತ



ಈ ಬಾರಿಯ ಗಣತಂತ್ರ ಮುನ್ನಾದಿನ ತೆಲಂಗಾಣದಲ್ಲಿ ಬಂಡವಾಳಶಾಹಿ ಪಕ್ಷಗಳಿಗೆ ಒಂದು ಪರ್ಯಾಯವಾಗಿ ಎಡ ಪಕ್ಷಗಳು ಮತ್ತು ಅಂಬೇಡ್ಕರ್‌ವಾದಿ ಪಕ್ಷಗಳ ಒಂದು ಸಂಯುಕ್ತ ರಂಗವಾಗಿ ಬಹುಜನ ಎಡರಂಗ ರಚನೆಗೊಂಡಿದೆ. ಅಂದು ಹೈದರಾಬಾದಿನಲ್ಲಿ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಇದರ ಉದ್ಘಾಟನೆ ನಡೆಯಿತು. ಇದರಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ, ದಲಿತ ಮುಖಂಡ ಪ್ರಕಾಶ್ ಅಂಬೇಡ್ಕರ್, ಎಂಸಿಪಿಐ(ಯು) ಮುಖಂಡ ಎಂ ಡಿ ಗೌಸ್, ಪ್ರೊ. ಕಂಚ ಇಲಯ್ಯ ಭಾಗವಹಿಸಿದರು.

ಇಂತಹ ಒಂದು ಪರ್ಯಾಯ ರಾಜಕೀಯ ರಂಗದ ರಚನೆ ಒಂದು ಮಹಾನ್ ಹೆಜ್ಜೆ, ದೇಶದ ಇತರೆಡೆಗಳಲ್ಲಿಒಂದು ಉದಾಹರಣೆಯಾಗುವಂತದ್ದು ಎಂದು ಸೀತಾರಾಮ್ ಯೆಚುರಿ ಸಭೆಯನ್ನುದ್ದೇಶಿಸಿ ಮಾತನಾಡುತ್ತ ಹೇಳಿದರು.

ಸಿಪಿಐ(ಎಂ), ಎಂಸಿಪಿಐ(ಯು), ಲೋಕಸತ್ತಾ ಪಾರ್ಟಿ, ಆಮ್ ಆದ್ಮಿ ಪಾರ್ಟಿ, ಮಜ್ಲಿಸ್ ಬಚಾವೊ ತಹರೀಕ್, ರಾಜ್ಯಾಧಿಕಾರ ಪಾರ್ಟಿ ಮುಂತಾದ ಒಟ್ಟು 28 ರಾಜಕೀಯ ಸಂಘಟನೆಗಳು ಈ ರಂಗದಲ್ಲಿ ಸೇರಿವೆ. ಇತರ ಎಡಪಕ್ಷಗಳು ಮತ್ತು ಬಿಎಸ್‌ಪಿ ಈ ರಂಗವನ್ನು ಸೇರುವ ಬಗ್ಗೆ ಇನ್ನೂ ದೃಢಪಡಿಸಿಲ್ಲ. ಈ ರಂಗ 2019ರಲ್ಲಿ 119 ಕ್ಷೇತ್ರಗಳಲ್ಲಿ ಭಾಗವಹಿಸಲಿದೆ. ದಲಿತ–ದಮನಿತ ವಿಭಾಗಗಳ ಮುಖಂಡರನ್ನು ಚುನಾಯಿಸಿ ಒಂದು ಜನತೆಯ ಸರಕಾರವನ್ನು ರಚಿಸುವುದು ಇದರ ಅಜೆಂಡಾ. ನಲ್ಲ ಸೂರ್ಯಪ್ರಕಾಶ್ ಇದರ ಅಧ್ಯಕ್ಷರಾಗಿ ಮತ್ತು ತಮ್ಮಿನೇನಿ ವೀರಭದ್ರಂ ಸಂಯೋಜಕರಾಗಿ ಆಯ್ಕೆಯಾಗಿದ್ದಾರೆ.

ತ್ರಿಪುರಾ: ಎಡರಂಗದ ತೀವ್ರ ಪ್ರಚಾರ–ಬಿಜೆಪಿಯ ವಿಭಜಕ ತಂತ್ರಗಳಿಗೆ ಸವಾಲು

ತ್ರಿಪುರಾದಲ್ಲಿ ಎಡರಂಗದ ಪ್ರಚಾರ ತೀವ್ರಗೊಳ್ಳುತ್ತಿದೆ. ರಾಜ್ಯಾದ್ಯಂತ ತೀವ್ರ ಪ್ರಚಾರ ನಡೆಸುತ್ತಿರುವ ಮುಖ್ಯಮಂತ್ರಿ ಮತ್ತು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ಮಾಣಿಕ್ ಸರಕಾರ್ ಅವರೊಂದಿಗೆ ಈ ವಾರ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ಪೊಲಿಟ್‌ಬ್ಯುರೊ ಸದಸ್ಯರುಗಳಾದ ಸೂರ್ಯಕಾಂತ್ ಮಿಶ್ರ ಹಾಗೂ ಬಿಮನ್ ಬಸು ರವರು ಮಾತನಾಡಿದ ವಿವಿಧ ಚುನಾವಣಾ ಸಭೆಗಳಲ್ಲಿ ಸಾವಿರಾರು ಮಂದಿ ಭಾಗವಹಿಸಿ ಆರೆಸ್ಸೆಸ್–ಬಿಜೆಪಿಯ ವಿಭಜನಕಾರೀ ಅಜೆಂಡಾವನ್ನು ಇಲ್ಲಿಯ ಮತದಾರರು ಸಂಪೂರ್ಣವಾಗಿ ತಿರಸ್ಕರಿಸುವ ಸಂಕೇತವನ್ನು ನೀಡುತ್ತಿದ್ದಾರೆ.

ದೇಶದ ಎಲ್ಲೆಡೆಗಳಲ್ಲಿ ಬಿಜೆಪಿ ಸರಕಾರದ ಕಾರ್ಮಿಕ–ವಿರೋಧಿ, ರೈತ–ವಿರೋಧಿ ಮತ್ತು ಕೋಮುವಾದಿ ಅಜೆಂಡಾದ ವಿರುದ್ಧ ದನಿಗಳು ಎದ್ದು ಬರುತ್ತಿವೆ, ಪ್ರತಿಯೊಂದು ಮನೆಯಲ್ಲಿ 2019ರಲ್ಲಿ ದೇಶದ ಆಳುವವರನ್ನು ಬದಲಿಸುವ ಸಿದ್ಧತೆ ನಡೆಯುತ್ತಿದೆ, ಇದಕ್ಕೆ ತ್ರಿಪುರಾ ದಾರಿ ತೋರಿಸುತ್ತದೆ ಎಂದು ಮಾಣಿಕ್ ಸರಕಾರ್ ಹೇಳಿದ್ದಾರೆ.

ಐಪಿಎಫ್‌ಟಿ–ಬಿಜೆಪಿ ಮೈತ್ರಿ: ವಿವಾದ ಸೃಷ್ಟಿಸುವ ಅಸ್ಸಾಂ ಮಂತ್ರಿಯ ಘೋಷಣೆ–ಐಎಂಎಫ್‌ಟಿ ಬಂಡಾಯ

ತ್ರಿಪುರಾದ ಮೂಲನಿವಾಸಿಗಳ ರಂಗ ಎಂದು ಹೇಳಿಕೊಳ್ಳುವ ಮತ್ತು ಪ್ರತ್ಯೇಕತೆಯನ್ನು ಪ್ರತಿಪಾದಿಸುವ ಐಪಿಎಫ್‌ಟಿಯ ಎನ್‌ಸಿ ದೇಬಬರ್ಮ ಬಣದೊಂದಿಗೆ ತನ್ನ ಚುನಾವಣಾ ಮೈತ್ರಿಯನ್ನು ಬಿಜೆಪಿ ಪ್ರಕಟಿಸಿದೆ. ಇದರ ಪ್ರಕಾರ ಈ ಗುಂಪು 9 ಸೀಟುಗಳಲ್ಲಿ ಸ್ಪರ್ಧಿಸುತ್ತದೆ, ಉಳಿದ ಎಲ್ಲ 51 ಕ್ಷೇತ್ರಗಳಲ್ಲಿ ಬಿಜೆಪಿ ಸ್ಪರ್ಧಿಸುತ್ತದೆ. ಕೆಲವು ತಿಂಗಳ ಹಿಂದೆ ಕ್ಯಾನ್ಸರ್ ಹಿಂದಿನ ಜನ್ಮದ ಪಾಪಗಳ ದುಷ್ಫಲ ಎಂದು ವಿವಾದ ಸೃಷ್ಟಿಸಿದ್ದ ಅಸ್ಸಾಂನ ಆರೋಗ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಈ ವಿಭಜನಕಾರೀ ಮೈತ್ರಿಯ ರೂವಾರಿ ಎನ್ನಲಾಗಿದೆ. 2016 ರವರೆಗೆ ಕಾಂಗ್ರೆಸಿನಲ್ಲಿದ್ದು ಅಸ್ಸಾಂ ನಲ್ಲಿ ವಿಧಾನಸಭಾ ಚುನಾವಣೆಯ ಮೊದಲು ಬಿಜೆಪಿಗೆ ಪಕ್ಷಾಂತರಗೊಂಡ ಈತ ಇತ್ತೀಚೆಗೆ ಮಾಣಿಕ್ ಸರಕಾರ್ ಅವರನ್ನು ಬಾಂಗ್ಲಾದೇಶ್‌ಗೆ ಕಳಿಸುವುದಾಗಿ ಹೇಳಿ ಇನ್ನೊಂದು ವಿವಾದ ಸೃಷ್ಟಿಸಿದ್ದರು.

ಐಪಿಎಫ್‌ಟಿಯ ರಾಜೇಶ್ವರ್ ದೇಬ್‌ಬರ್ಮ ನೇತೃತ್ವದ ಇನ್ನೊಂದು ಬಣ ಕಾಂಗ್ರೆಸಿನೊಂದಿಗೆ ಮೈತ್ರಿ ರಚಿಸಿಕೊಳ್ಳಲು ಪ್ರಯತ್ನಿಸುತ್ತಿದೆಯಂತೆ. ಈ ನಡುವೆ ಐಪಿಎಫ್‌ಟಿಯ ಮಹಿಳಾ ವಿಭಾಗವಾದ ಐಡಬ್ಲ್ಯುಎಫ್‌ಟಿ ಮೈತ್ರಿಕೂಟದಿಂದ ಹೊರನಡೆಯುವುದಾಗಿ ಹೇಳಿದೆ. 9 ಸೀಟುಗಳಲ್ಲಿ ಒಂದನ್ನೂ ಮಹಿಳೆಯರಿಗೆ ಕೊಡದಿರುವುದೇ ಇದಕ್ಕೆ ಕಾರಣ ಎನ್ನಲಾಗಿದೆ. ರಾಜ್ಯದ ಎಲ್ಲ ರಾಜಕೀಯ ಪಕ್ಷಗಳಲ್ಲಿ ಸಿಪಿಐ(ಎಂ) ಮಾತ್ರವೇ ಮಹಿಳೆಯರಿಗೆ ಗೌರವ ವ್ಯಕ್ತಪಡಿಸಿದೆ ಎಂದು ಈ ಸಂಘಟನೆಯ ಅಧ್ಯಕ್ಷೆ ಸಂಧ್ಯಾರಾಣಿ ದೇಬ್‌ಬರ್ಮ ಹೇಳಿರುವುದಾಗಿ ವರದಿಯಾಗಿದೆ.

ಮುಖ್ಯಮಂತ್ರಿ ಕ್ಷೇತ್ರದಲ್ಲಿ ಬಿಜೆಪಿ ಕಾರ್ಯಕರ್ತನ ಮನೆಯಲ್ಲಿ ಮದ್ದುಗುಂಡುಗಳು ವಶ

ಐಪಿಎಫ್‌ಟಿ ಯೊಂದಿಗೆ ಮೈತ್ರಿಯನ್ನು ಬಿಜೆಪಿ ಅಧಿಕೃತವಾಗಿ ಪ್ರಕಟಿಸುವ ದಿನವೇ ಮುಖ್ಯಮಂತ್ರಿಗಳ ಕ್ಷೇತ್ರವಾದ ಧನ್‌ಪುರ್‌ನಲ್ಲಿ ತಾರಾಪುರ್ ಎಂಬ ಭಾರತ–ಬಾಂಗಾದೇಶ್ ಗಡಿ ಪ್ರದೇಶದ ಹಳ್ಳಿಯಲ್ಲಿ ಬಿಜೆಪಿ ಕಾರ್ಯಕರ್ತ ಅಬ್ದುರ್ ರಹಮಾನ್ ಎಂಬ ವ್ಯಕ್ತಿಯ ಮನೆಯಲ್ಲಿ ಬಿಎಸ್‌ಎಫ್ ಒಂದು ಪಿಸ್ತೂಲ್, ಮದ್ದು ಗುಂಡುಗಳು ಮತ್ತು ಮಾದಕ ದ್ರವ್ಯಗಳನ್ನು ವಶಪಡಿಸಿಕೊಂಡಿದೆ ಎಂದು ಪಿಟಿಐ ವರದಿ ಮಾಡಿದೆ. ಅಲ್ಲದೆ ಸುಮಾರು 2ಲಕ್ಷ ರೂ. ಮತ್ತು 10.402 ಬಾಂಗ್ಲಾದೇಶಿ ಟಕ ನಗದು ಕೂಡ ಸಿಕ್ಕಿದೆಯಂತೆ. ಚುನಾವಣೆಯ ಮೊದಲು ಬಾಂಗ್ಲಾದೇಶ್‌ನಿಂದ ಶಸ್ತ್ರಾಸ್ತ್ರಗಳ ಕಳ್ಳಸಾಗಾಣಿಕೆಯ ಬಗ್ಗೆ ಮಾಹಿತಿಯ ಮೇಲೆ ಬಿಎಸ್‌ಎಫ್ ಈ ಕಾರ್ಯಾಚರಣೆ ನಡೆಸಿತ್ತು ಎಂದು ಪಿಟಿಐ ವರದಿ ಹೇಳುತ್ತದೆ.

ಅಸ್ಸಾಂ: ಕೇಂದ್ರ ಸರಕಾರದ ಸಮಯಸಾಧಕ ಹುನ್ನಾರಕ್ಕೆ ಎರಡು ಜೀವಗಳ ಬಲಿ
ತಕ್ಷಣವೇ 'ನಾಗಾ ಚೌಕಟ್ಟು ಒಪ್ಪಂದ'ವನ್ನು ಬಹಿರಂಗ ಪಡಿಸಿ–ಸಿಪಿಐ(ಎಂ) ಆಗ್ರಹ

ಜನವರಿ 25ರಂದು ಅಸ್ಸಾಂನ ಹಫ್ಲೊಂಗ್ ಎಂಬಲ್ಲಿ ಪೋಲೀಸ್ ಗೋಲೀಬಾರಿನಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಪ್ರತ್ಯೇಕ 'ನಾಗಾಲಿಂ'ನಲ್ಲಿ ಅಸ್ಸಾಂನ ದಿಮ ಹಸಓ ವನ್ನು ವಿಲೀನಗೊಳಿಸಲಾಗುತ್ತದೆ ಎಂಬ ಆರೆಸ್ಸೆಸ್ ಮುಖಂಡರೊಬ್ಬರ ಹೇಳಿಕೆಯಿಂದ ಆಕ್ರೋಶಗೊಂಡು ಪ್ರತಿಭಟಿಸುತ್ತಿದ್ದ ಜನಗಳ ಮೇಲೆ ಪೋಲೀಸರು ಗೋಲೀಬಾರ್ ನಡೆಸಿದ್ದರಿಂದ ಇದು ಸಂಭವಿಸಿದೆ.

ಸಿಪಿಐ(ಎಂ) ಅಸ್ಸಾಂ ರಾಜ್ಯಸಮಿತಿ ಇದನ್ನು ಬಲವಾಗಿ ಖಂಡಿಸಿದೆ. ಈ ಹೀನ ಕೃತ್ಯವನ್ನು ಎಸಗಿರುವ ಪೋಲೀಸ್ ಆಡಳಿತದ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಅದು ಆಗ್ರಹಿಸಿದೆ.

ಇದು ನಾಗಾ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಲಾಗಿದೆ ಎಂಬ ಕೇಂದ್ರದ ಬಿಜೆಪಿ ಸರಕಾರದ ದಾವೆಯನ್ನು ಬಯಲಿಗೆಳೆದಿದೆ ಎಂದು ರಾಜ್ಯಸಮಿತಿ ನೆನಪಿಸಿದೆ.

ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಹೊಸದರಲ್ಲೇ ಬಹುಕಾಲದಿಂದ ನೆನಗುದಿಗೆ ಬಿದ್ದಿರುವ ನಾಗಾ ಪ್ರಶ್ನೆಗೆ ಪರಿಹಾರ ಹುಡುಕಿದ್ದೇವೆ ಎಂದು ಸಾರ್ವಜನಿಕವಾಗಿ ಈ ಸರಕಾರ ಸಾರಿತ್ತು. ಆದರೆ ಅದರ ವಿವರಗಳನ್ನು ಗುಟ್ಟಾಗಿಯೇ ಇಡಲಾಗಿದೆ. ಇದುವರೆಗೂ ಈ ಶಾಂತಿ ಒಪ್ಪಂದ ಎನ್ನಲಾಗುವ ಕೇಂದ್ರ ಸರಕಾರ ಮತ್ತು ಎನ್‌ಎಸ್‌ಸಿಎನ್(ಐಎಂ) ನಡುವಿನ 'ನಾಗಾ ಚೌಕಟ್ಟು ಒಪ್ಪಂದ'ದ ವಿವರಗಳು ಎರಡು ವರ್ಷಗಳ ಮೇಲಾದರೂ ಗುಟ್ಟಾಗಿಯೇ ಇವೆ. ವಾಸ್ತವವಾಗಿ ಬಿಜೆಪಿ ಸರಕಾರ ಹೇಳಿಕೊಳ್ಳುವಂತೆ ಶಾಂತಿ ಒಪ್ಪಂದ ಮಾಡಿಕೊಳ್ಳುವಲ್ಲಿ ಅದು ನಿಜವಾಗಿಯೂ ಯಶಸ್ವಿಯಾಗಿದೆಯೇ, ಅಥವ ಇದೂ ಈ ಸರಕಾರದ ಟೊಳ್ಳು ದಾವೆಯೇ ಎಂಬ ಬಗ್ಗೆ ಸಂದೇಹ ಉಂಟಾಗಿರುವುದರಲ್ಲಿ ಆಶ್ಚರ್ಯವಿಲ್ಲ.

ಈ ನಡುವೆ ಈ ಒಪ್ಪಂದದ ಭಾಗವಾಗಿ ದಿಮ ಹಸಓ ನಲ್ಲಿ 'ನಾಗಾ ಸ್ವಾಯತ್ತ ಮಂಡಳಿ' ರಚನೆಯಾಗಲಿದೆ ಎಂದು ಆರೆಸ್ಸೆಸ್ ಮುಖಂಡರೊಬ್ಬರ ಹೇಳಿಕೆ ಈ ಪ್ರದೇಶದ ಜನಗಳಲ್ಲಿ ಆಕ್ರೋಶ ಉಂಟು ಮಾಡಿತ್ತು. ಅವರ ಈ ಆಕ್ರೋಶಕ್ಕೆ ಸ್ಪಷ್ಟೀಕರಣ ನೀಡುವ ಬದಲು ಅಸ್ಸಾಂನ ಬಿಜೆಪಿ ಸರಕಾರ ಇದನ್ನು ಕೇವಲ ಕಾನೂನು–ವ್ಯವಸ್ಥೆಯ ಪ್ರಶ್ನೆಯಾಗಿ ಕಂಡಿದ್ದರಿಂದ ಎರಡು ಜೀವಗಳು ಬಲಿಯಾಗಿವೆ.

ಇವರ ಕುಟುಂಬಗಳಿಗೆ ಸಾಕಷ್ಟು ಪರಿಹಾರಗಳನ್ನು ನೀಡಬೇಕು, ತಕ್ಷಣವೇ 'ನಾಗಾ ಚೌಕಟ್ಟು ಒಪ್ಪಂದ'ವನ್ನು ಸಾರ್ವಜನಿಕಗೊಳಿಸಬೇಕು ಮತ್ತು ಅಸ್ಸಾಂನ ಯಾವ ಭಾಗವನ್ನೂ ಪ್ರಸ್ತಾವಿತ 'ನಾಗಾಲಿಂ'ನಲ್ಲಿ ಸೇರಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕು ಹಾಗೂ ಈ ಪ್ರದೇಶದಲ್ಲಿ ಉದ್ರಿಕ್ತ ವಾತಾವರಣ ಸೃಷ್ಟಿಯಾಗಲು ಕಾರಣನಾದ ಆರೆಸ್ಸೆಸ್ ಮುಖಂಡನ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಅಸ್ಸಾಂ ರಾಜ್ಯ ಸಮಿತಿ ಆಗ್ರಹಿಸಿದೆ.

ಕಾಶ್ಮೀರ: ಪ್ರತಿಭಟನಾಕಾರರ ಮೇಲೆ ಭದ್ರತಾ ಪಡೆಗಳ ಗೋಲೀಬಾರ್‌ನಲ್ಲಿ ಮೂವರು ನಾಗರಿಕರ ಸಾವು
'ಇನ್ನೆಷ್ಟು ದಿನ ನಾಗರಿಕರ ರಕ್ತ ಹರಿಯಬೇಕು?'–ತರಿಗಾಮಿ

ದಕ್ಷಿಣ ಕಾಶ್ಮೀರದ ಶೋಪಿಯನ್ ಜಿಲ್ಲೆಯ ಗನೊಪೊರದಲ್ಲಿ ಮತ್ತೆ ಮೂವರು ಯುವ ಕಾಶ್ಮೀರಿಗಳ ಸಾವಿನ ಸುದ್ದಿ ಬಂದಿದೆ. ಅವರು ಸತ್ತದ್ದು ಭದ್ರತಾ ಪಡೆಗಳು ನಿಶ್ಶಸ್ತ್ರ ಪ್ರತಿಭಟನಾಕಾರರ ಮೇಲೆ ನಡೆಸಿದ ಗೋಲೀಬಾರಿನಲ್ಲಿ. ಇದನ್ನು ಬಲವಾಗಿ ಖಂಡಿಸುತ್ತ ಸಿಪಿಐ(ಎಂ) ಹಿರಿಯ ಮುಖಂಡ ಮತ್ತು ಶಾಸಕ ಮಹಮ್ಮದ್ ತರಿಗಾಮಿ ಇಲ್ಲಿ ಇನ್ನೆಷ್ಟು ನಾಗರಿಕರ ರಕ್ತ ಹರಿಯಬೇಕು ಎಂದು ರಾಜ್ಯಸರಕಾರವನ್ನು ಆತಂಕದಿಂದ ಪ್ರಶ್ನಿಸಿದ್ದಾರೆ.

ಈ ಬಾರಿ ಪಿಡಿಪಿ–ಬಿಜೆಪಿ ಸರಕಾರದ ಮುಖ್ಯಮಂತ್ರಿಗಳೂ ಗಲಿಬಿಲಿಗೊಂಡಂತೆ ಕಾಣುತ್ತದೆ. ಈ ಬಗ್ಗೆ ರಕ್ಷಣಾ ಮಂತ್ರಿಗಳನ್ನು ಸಂಪರ್ಕಿಸಿ ತನಿಖೆಗೆ ಆದೇಶ ನೀಡಲಾಗಿದೆ ಎಂದಿದ್ದಾರೆ, ಸೇನೆಯ ಮೇಲೆ ಎಫ್‌ಐಆರ್ ಕೂಡ ದಾಖಲಿಸಿರುವುದಾಗಿ ವರದಿಯಾಗಿದೆ. ಆದರೆ ಬಿಜೆಪಿಯ ಒತ್ತಡದಿಮದಾಗಿ ಈ ಎಫ್‌ಐಆರ್‌ನಲ್ಲಿ ನಂತರ ಭದ್ರತಾಪಡೆಗಳ ಸಮರ್ಥನೆಯನ್ನೂ ಅದರಲ್ಲಿ ಸೇರಿಸಲಾಗಿದೆ ಎಂದು ವರದಿಯಾಗಿದೆ. ತಮ್ಮ ಮೇಲೆ ಪ್ರತಿಭಟನಾಕಾರರು ಕಲ್ಲೆಸೆಯುತ್ತಿದ್ದುದರಿಂದ ಆತ್ಮರಕ್ಷಣೆಯಲ್ಲಿ ಭದ್ರತಾ ಪಡೆ ತುಕಡಿ ಗೋಲೀಬಾರ್ ನಡೆಸಬೇಕಾಯಿತು ಎಂದು ಸೇನಾ ವಕ್ತಾರರು ಹೇಳಿದ್ದಾರೆ. ಆದರೆ ರಾಜ್ಯ ಪೋಲೀಸರ ಸಲಹೆಯನ್ನೂ ಧಿಕ್ಕರಿಸಿ ಆ ಸೇನಾತುಕಡಿ ಆ ದಾರಿಯಲ್ಲಿ ಹೋಗಿತ್ತು ಎಂದು ಇನ್ನೊಂದು ವರದಿ ತಿಳಿಸಿದೆ.

ಅದೇನೇ ಇರಲಿ, ಇಂತಹ ಘಟನೆಗಳು ನಡೆದಾಗಲೆಲ್ಲ ತನಿಖೆ ನಡೆಸುವುದಾಗಿ ಹೇಳುತ್ತ ಬರಲಾಗಿದೆ. ಆದರೆ ಅದರಿಂದೇನೂ ಪ್ರಯೋಜನವಾಗಿಲ್ಲ. ಜನ ಈ ತನಿಖೆಗಳಲ್ಲಿ ನಂಬಿಕೆ ಕಳಕೊಂಡಿದ್ದಾರೆ. ಭದ್ರತಾ ಪಡೆಗಳು, ಕಾನೂನು ಜಾರಿ ಸಂಸ್ಥೆಗಳು ಅನುಭವದಿಂದ ಪಾಠ ಕಲಿಯುವಂತೆ ಕಾಣುತ್ತಿಲ್ಲ, ದಿಲ್ಲಿ ಮತ್ತು ಶ್ರೀನಗರದಲ್ಲಿನ ಆಳುವ ಮಂದಿಯ ಉದಾಸೀನ ನಿಲುವು ಮುಂದುವರೆದಿದೆ ಎಂದು ತರಿಗಾಮಿ ಬಹಳ ಖಾರವಾಗಿ ಈ ಘಟನೆಗೆ ಪ್ರತಿಕ್ರಿಯಿಸಿದ್ದಾರೆ.

ಜನವರಿ 31 ರಂದು ಜಮ್ಮು–ಕಾಶ್ಮೀರ ವಿಧಾನ ಸಭೆಯಲ್ಲಿ ಈ ಬಗ್ಗೆ ಮಾತಾಡುತ್ತ "ಸಶಸ್ತ್ರ ಪಡೆಗಳ ವಿಶೇಷ ಅಧಿಕಾರಗಳ ಕಾಯ್ದೆಯ ಅಗತ್ಯ ಇಲ್ಲ ಎಂದು ಮುಖ್ಯಮಂತ್ರಿಗಳು ಸದನದಲ್ಲಿ ಪ್ರಕಟಿಸಬೇಕು ಎಂದು ನಾನು ಬಯಸುತ್ತೇನೆ. ನೀವು ಪಂಚಾಯತ್ ಚುನಾವಣೆ ಕೇಳುತ್ತಿದ್ದೀರಿ. ಸನ್ನಿವೇಶ ಇಂತಹ ಮಟ್ಟಕ್ಕೆ ಹಿಂದಿರುಗಿದ್ದರೆ ರಾಜ್ಯದ ಆಂತರಿಕ ಭದ್ರತೆಯಲ್ಲಿ ಸೇನೆಯ ಅಗತ್ಯವೇನಿದೆ?" ಎಂದು ವರು ಪ್ರಶ್ನಿಸಿದರು.

ರಾಜಕೀಯ ಪಕ್ಷಗಳು ಸಂಕುಚಿತ ಪರಿಗಣನೆಯಿಂದ ಮೇಲೆದ್ದು ನಿಲ್ಲಬೇಕು, ಪರಸ್ಪರ ದೂಷಣೆ ಬದಿಗಿಟ್ಟು ಈ ಪ್ರದೇಶದಲ್ಲಿ ರಕ್ತಪಾತವನ್ನು ಕೊನೆಗೊಳಿಸುವ ಬಗ್ಗೆ ಯೋಚಿಸಬೇಕು. ಇದು ಮೂಲತಃ ಒಂದು ರಾಜಕೀಯ ಪ್ರಶ್ನೆ, ಇದನ್ನು ಒಂದು ಭದ್ರತಾ ಪ್ರಶ್ನೆಯಾಗಿಸುವ ಪ್ರಯತ್ನ ನಡೆದಿದೆ, ಜಮ್ಮು–ಕಾಶ್ಮೀರ ವಿಧಾನಸಭೆ ಕೇಂದ್ರ ಸರಕಾರ ಗಂಭೀರ ರಾಜಕೀಯ ಸಂವಾದ ನಡೆಸಬೇಕು ಎಂದು ಆಗ್ರಹಿಸುವ ಒಂದು ಸಾಲಿನ ನಿರ್ಣಯವನ್ನು ಅಂಗೀಕರಿಸಬೇಕು ಎಂದು ತರಿಗಾಮಿ ಸೂಚಿಸಿದರು.

ಸೇನಾಪಡೆಗಳ ಮೇಲೆ ವಿಪರೀತ ಭಾರ ಹೊರಿಸಬೇಡಿ, ಅದು ಗಡಿಗಳನ್ನು ಕಾಯುವ ತನ್ನ ಪಾತ್ರವನ್ನಷ್ಟೇ ವಹಿಸಲಿ ಎಂದು ತರಿಗಾಮಿ ಕೇಂದ್ರ ಸರಕಾರವನ್ನು ಆಗ್ರಹಿಸಿದರು. ಕೇಂದ್ರ ಸರಕಾರ ಒಬ್ಬ ವಿಶೇಷ ಪ್ರತಿನಿಧಿಯನ್ನು ನೇಮಿಸಿದೆ. ಅವರಿಗೆ ಏನು ಕೆಲಸ ಹಚ್ಚಲಾಗಿದೆ ಎಂಬುದನ್ನು ಕೇಂದ್ರ ಸರಕಾರ ಸ್ಪಷ್ಟಪಡಿಸಬೇಕು ಎಂದೂ ತರಿಗಾಮಿ ಆಗ್ರಹಿಸಿದರು.

ಸುಡಾನ್ ಮತ್ತು ಟರ್ಕಿ: ಸರ್ವಾಧಿಕಾರಿಶಾಹಿ ವಿರುದ್ಧ ಕಮ್ಯೂನಿಸ್ಟ್‌ರ ಹೋರಾಟ-ಕ್ರೂರ ದಮನ

ಜಗದ ಸುತ್ತ

ನಾಗರಾಜ ನಂಜುಂಡಯ್ಯ


ಕಳೆದ ವಾರವಷ್ಟೆ 'ದಾವೊಸ್' ನಗರದಲ್ಲಿ 'ವಿಶ್ವ ಆರ್ಥಿಕ ವೇದಿಕೆ' ಯಡಿಯಲ್ಲಿ ವಿವಿಧ ದೇಶಗಳ ಆರ್ಥಿಕ ಪರಿಣಿತರ ಹಾಗೂ ಮಂತ್ರಿಗಳ ಸಭೆ ಜರುಗಿದ್ದು ಸುದ್ದಿಯಾಗಿದೆ. ಜಗತ್ತಿನ ಎಲ್ಲಾ ದೇಶಗಳ ಮಾರುಕಟ್ಟೆಗಳ ಆಮೂಲಾಗ್ರ ಸಂಪನ್ಮೂಲಗಳನ್ನು ಮುಕ್ತ ಮಾರುಕಟ್ಟೆಯ ಹೆಸರಿನಲ್ಲಿ ಹೇಗೆ ಮತ್ತಷ್ಟು ಶೋಷಣೆಯನ್ನು ಮುಂದುವರಿಸಬೇಕೆಂಬುದರ ಬಗ್ಗೆಯೇ ಹೆಚ್ಚಾಗಿ ಚರ್ಚೆ ನಡೆಸಲಾಗಿದೆ. ಮತ್ತೊಂದೆಡೆ ಜಗತ್ತಿನ ಅನೇಕ ಭಾಗಗಳಲ್ಲಿ ಇವರಿಂದ ಶೋಷಣೆಗೆ ತುತ್ತಾದ ಜನರು ಬಹುದೊಡ್ಡ ಸಂಖ್ಯೆಯಲ್ಲಿ ಪ್ರತಿಭಟನೆಗಳನ್ನು ನಡೆಸಿರುವ ವರದಿಗಳು ಕೂಡ ಸುದ್ದಿಯಾಗಿವೆ. ಪ್ರಮುಖವಾಗಿ ಸುಡಾನ್ ಮತ್ತು ಟರ್ಕಿ ದೇಶಗಳಲ್ಲಿ ಈ ಪ್ರತಿಭಟನೆಗಳು ಹೆಚ್ಚು ಪರಿಣಾಮಕಾರಿಯಾಗಿಯೇ ನಡೆದಿವೆ. ಈ ಪ್ರತಿಭಟನೆಗಳ ನೇತೃತ್ವವನ್ನು ಆರಂಭದಿಂದಲೂ ಕಮ್ಯೂನಿಸ್ಟ್‌ರೇ ವಹಿಸಿದಾಗ್ಯೂ, ಆ ನಂತರ ಎಲ್ಲಾ ಜನ ವಿಭಾಗಗಳನ್ನು ತಮ್ಮತ್ತ ಆಕರ್ಷಿಸುವಲ್ಲಿ ಪ್ರತಿಭಟನೆಗಳು ಯಶಸ್ವಿಯಾಗಿರುವುದನ್ನು ಇಲ್ಲಿ ಗಂಭೀರವಾಗಿ ಗಮನಿಸಬೇಕಾಗಿದೆ.

ಈ ಎರಡೂ ದೇಶಗಳಲ್ಲಿನ ಧಾರ್ಮಿಕ ಮೂಲಭೂತವಾದಿ ನೇತೃತ್ವದ ಸರ್ವಾಧಿಕಾರಿ ಸರ್ಕಾರಗಳು ಈ ಪ್ರತಿಭಟನೆಕಾರರ ಮೇಲೆ ಕ್ರೂರವಾಗಿ, ಆಕ್ರಮಣಕೋರ ದಾಳಿ ನಡೆಸುವ ಮೂಲಕ ಚಳುವಳಿಯನ್ನು ನಿಗ್ರಹಿಸಲು ಪ್ರಯತ್ನ ನಡೆಸಿವೆ. ಈ ದಾಳಿಗಳ ಹಿಂದೆ ಅಮೆರಿಕಾದ ಕುಮ್ಮಕ್ಕು ಇರುವುದನ್ನು ಕಡೆಗಣಿಸಲಾಗದು.

ಸುಡಾನ್ : ಕೆರಳಿ – ಎಲ್ಲಾ ಪ್ರದೇಶಗಳಿಗೂ ಹಬ್ಬಿದ ಪ್ರತಿಭಟನೆಗಳು

ಮೊದಲು ಸುಡಾನ್ ಪ್ರತಿಭಟನೆಗಳ ಬಗ್ಗೆ ತಿಳಿಯೋಣ. ಈ ಎರಡೂ ದೇಶಗಳಲ್ಲಿನ ಪ್ರತಿಭಟನೆಗಳಿಗೆ ಮೂಲಕಾರಣಗಳಲ್ಲಿ ಸಾಮ್ಯತೆ ಇದೆ. ಆಕ್ಸ್‌ಫಾಮ್(Oxfam) ಎಂಬ ಸಂಸ್ಥೆಯು ಬಿಡುಗಡೆ ಮಾಡಿರುವ ಸಮೀಕ್ಷೆಯ ಅಂಕಿ-ಅಂಶಗಳ ಪ್ರಕಾರ 'ಹೆಚ್ಚಾಗಿರುವ ಆರ್ಥಿಕ ಅಸಮಾನತೆಯ ಅಂತರ', ಅದರಲ್ಲಿ ಪ್ರಮುಖವಾಗಿ ಶೇಕಡ 1 ರಷ್ಟು ವಿಶ್ವದಲ್ಲಿನ ಶ್ರೀಮಂತರು, ಕಳೆದ ಒಂದು ವರ್ಷದಿಂದೀಚೆಗೆ ಉತ್ಪತ್ತಿಯಾದ ಸಂಪತ್ತಿನ ಶೇಕಡ 82 ರಷ್ಟು ಪಾಲನ್ನು ಬಾಚಿಕೊಂಡಿದ್ದಾರೆ. (ದೋಚಿಕೊಂಡಿದ್ದಾರೆ ಎಂದು ಕರೆದರು ಅತಿಶೋಯಕ್ತಿಯಲ್ಲ). ಶತಕೋಟ್ಯಾಧಿಪತಿಗಳ ಸಂಪತ್ತು 2010 ರಿಂದೀಚೆಗೆ ವಾರ್ಷಿಕ ಸರಾಸರಿ ಶೇ. 13 ರಷ್ಟು ವೃದ್ಧಿಯಾಗಿದೆ. ಆದರೆ, ಇದಕ್ಕೆ ತದ್ವಿರುದ್ಧವಾಗಿ, ದುಡಿಯುವ ಅಥವಾ ಲಾಭ ತಂದುಕೊಡುವ ಶ್ರಮಿಕ ವರ್ಗದ ವೇತನ ಸರಾಸರಿ ಶೇ. 2 ರಷ್ಟು ಮಾತ್ರ ಏರಿಕೆಯಾಗಿದೆ. ಲಾಭಾಂಶದ ಹಂಚಿಕೆಯಲ್ಲಿ ನಡೆದಿರುವ ದ್ರೋಹದಿಂದಾಗಿ ಅಥವಾ ಶೋಷಣೆಯಿಂದಾಗಿ ಬಿಲಿಯಾಧಿಪತಿಗಳ ಆದಾಯವು ಕಳೆದ ವರ್ಷದ ಅವಧಿಯಲ್ಲಿ ಅತಿ ದೊಡ್ಡ ಪ್ರಮಾಣದಲ್ಲಿ ಏರಿಕೆಯಾಗಿದೆ. ವಿಶ್ವದ ಅರ್ಧದಷ್ಟು ಬಡಜನತೆಯ ಸಂಪತ್ತು ಮಾತ್ರ ಹೆಚ್ಚಾಗುವ ಬದಲು, ತೀವ್ರತರದಲ್ಲಿ ಕುಸಿದಿದೆ ಎಂದು ಈ ಸಮೀಕ್ಷೆ ವರದಿಮಾಡಿದೆ.

ಮತ್ತೊಂದೆಡೆ, ಉದ್ಯೋಗ ಸೃಷ್ಟಿ ಸಂಪೂರ್ಣ ಮರೀಚಿಕೆಯಾಗಿದೆ. ಜೊತೆಗೆ ಅಗತ್ಯ ವಸ್ತುಗಳ



ಸುಡಾನ್ ಕಮ್ಯುನಿಸ್ಟ್ ಪಕ್ಷದ
ಪ್ರಧಾನ ಕಾರ್ಯದರ್ಶಿ ಮೊಖ್ತರ್ ಅಲ್-ಖತಿಭ್



ಬೆಲೆಗಳು ವಿಪರೀತವಾಗಿ ಗಗನ ಮುಖಿಯಾಗಿವೆ. ಇವೆಲ್ಲವುಗಳ ಪರಿಣಾಮ ಜನತೆಯ ಜೀವನಾಧಾರ ಕುಸಿಯುತ್ತಿದೆ. 2013 ರಿಂದಲೇ ಆರಂಭಗೊಂಡ ಈ ಕುಸಿತ ಜನರನ್ನು ಅನಿವಾರ್ಯವಾಗಿ ಪ್ರತಿಭಟನೆಗಳಿಗೆ ಧುಮುಕಿಸಿದೆ. ಇದು ವಿಶ್ವದಾದ್ಯಂತ ಅನೇಕ ದೇಶಗಳಲ್ಲಿ ಕಂಡು ಬಂದಿರುವ ಪರಿಸ್ಥಿತಿಯಾದರೂ ಸಹ, ಸುಡಾನ್ ದೇಶದಲ್ಲಿ ಇದೀಗ ಉಗ್ರ ರೂಪಕ್ಕೆ ತಿರುಗಿದೆ, ಮಾತ್ರವಲ್ಲದೆ ಈ ದೇಶದ ಎಲ್ಲಾ ಪ್ರದೇಶಗಳಿಗೂ ಹಬ್ಬಿದೆ. ಈ ಪ್ರತಿಭಟನೆಗಳು ಕಮ್ಯೂನಿಸ್ಟ್‌ರ ಮುನ್ನಡೆಯಲ್ಲಿರುವುದರಿಂದ, ಸರ್ಕಾರ ದಮನಕಾರಿ ನೀತಿಯನ್ನು ಅನುಸರಿಸುತ್ತಿದೆ.

ಸರ್ಕಾರದ ಈ ಕ್ರೂರ ದಾಳಿಗಳು ಪ್ರತಿಭಟನೆಕಾರರನ್ನು ಮತ್ತಷ್ಟು ಕೆರಳಿಸಿದೆ. ಸಾಮಾನ್ಯ ಜನರು ಕೂಡ ಕೋಪಗೊಂಡಿದ್ದಾರೆ. ಮೊದಲು 'ಡಾರ್‌ಫರ್' ಪ್ರದೇಶದ ದೂರದಲ್ಲಿನ ಪಶ್ಚಿಮದಲ್ಲಿರುವ ಎಲ್ ಜೀನೀನಾದಿಂದ ಆರಂಭಗೊಂಡ ಪ್ರತಿಭಟನೆ ಸುಡಾನ್ ದೇಶದ ಎಲ್ಲಾ ಪ್ರದೇಶಗಳಿಗೂ ಆವರಿಸಿಕೊಂಡಿದೆ. ರಾಜಧಾನಿ ಖಾರ್ಟೌಮ್ ನಲ್ಲಿಯೂ ಭಾರೀ ಪ್ರತಿಭಟನೆ ನಡೆದಿದೆ.

ಸರ್ಕಾರದ ವಿರುದ್ಧ ಉಗ್ರವಾದ ಘೋಷಣೆಗಳು ಕೇಳಿ ಬಂದಿವೆ. ತಮ್ಮ ಮೂಲಭೂತ-ಜೀವನಾಧಾರವನ್ನು ಕಸಿದು ಕೊಳ್ಳುತ್ತಿರುವ ಸರ್ಕಾರ, ಸರಕುಗಳ ಮೇಲಿನ ಸಬ್ಸಿಡಿಗಳನ್ನು ತೆಗೆದು ಹಾಕಿರುವುದು ಪರಿಸ್ಥಿತಿಯ ವಿಕೋಪಕ್ಕೆ ಕಾರಣವಾಗಿದೆ. 'ಹಸಿವು ನಮಗೆ ಬೇಡ; ಏರಿರುವ ಬೆಲೆಗಳು ನಮಗೆ ಬೇಡ' ಎಂಬ ಘೋಷಣೆಗಳನ್ನು ಆಕ್ರೋಶದಿಂದ ಕೂಗುತ್ತಿದ್ದಾರೆ.

ಬ್ರೆಡ್ ಪ್ರೈಸ್ ಪ್ರೋಟೆಸ್ಟ್

ಖಾಸಗಿ ಕಂಪನಿಗಳಿಗೆ ಧಾನ್ಯಗಳ ಆಮದನ್ನು ಸರ್ಕಾರ ವಹಿಸಿಕೊಟ್ಟ ನಿರ್ಧಾರದಿಂದಾಗಿ, 'ಗೋಧಿ ಸರಬರಾಜು ಕಡಿಮೆಯಾಯಿತು, ಇದರಿಂದಾಗಿ ಬ್ರೆಡ್ ಹಿಟ್ಟಿನ ತಯಾರಿಕಾ ವೆಚ್ಚ ವಿಪರೀತ ಹೆಚ್ಚಾಗಿ, ಅದರ ಬೆಲೆ ಗಗಮಕ್ಕೆ ಏರಿತು. ಅಂದರೆ 50 ಕೆ.ಜಿ. ಸ್ಟಾಕ್ ಹಿಟ್ಟಿಗೆ 167 ಸುಡಾನ್ ಪೌಂಡುಗಳು ಇದ್ದದ್ದು; 450 ಪೌಂಡುಗಳಿಗೆ ಏರಿಕೆಯಾಯಿತು. ಪ್ರತಿಭಟನೆಗಳು ಇಡೀ ಸುಡಾನ್ ನ ನಗರ ಪ್ರದೇಶಗಳಿಗೆ ಹಬ್ಬಲು ಹಾಗೂ ಜನರು ಕೋಪೋದ್ರಿಕ್ತರಾಗಲು ಬ್ರೆಡ್ ಹಿಟ್ಟಿನ ಬೆಲೆ ಏರಿಕೆ ಮೂಲ ಕಾರಣವಾಯಿತು. 2018 ರ ಬಜೆಟ್ ನಲ್ಲಿ ಐಎಂಎಫ್‌ನ ಶಿಫಾರಸ್ಸಿನಂತೆ ಸಬ್ಸಿಡಿ ಹಿಂಪಡೆಯುವುದಾಗಿ ಸರ್ಕಾರ ಸೂಚನೆ ನೀಡಿತ್ತು. ಆಗಲೇ ಪ್ರತಿಭಟನೆಗಳು ಆರಂಭಗೊಂಡಿದ್ದು 'ಸುಡಾನೀಸ್ ಕಮ್ಯೂನಿಸ್ಟ್ ಪಕ್ಷ (ಎಸ್.ಸಿ.ಪಿ) ವು ಈ ಪ್ರತಿಭಟನೆಯನ್ನು ಆರಂಭಿಸಿತು. ಆ ನಂತರ ವಿರೋಧ ಪಕ್ಷಗಳು ಹಾಗೂ ಇತರೆ ಗುಂಪುಗಳು ಕೂಡ ಪ್ರತಿಭಟನೆಯ ರೂಪಾಂತರ ನೋಡಿ ನಂತರ ಸೇರಿಕೊಂಡರು.

ಕ್ರೂರ ದಾಳಿ – ಕಮ್ಯುನಿಸ್ಟ ಮುಖಂಡರ ಬಂಧನ

ಕಮ್ಯುನಿಸ್ಟ್ ಪಕ್ಷದ 'ಆಹಾರ ಭದ್ರತೆ'ಯ ಈ ಕರೆಗೆ ಸುಡಾನಿನ ಬಹುತೇಕ ಜನ ವಿಭಾಗ ಸ್ವಯಂ-ಪ್ರೇರಣೆಯಿಂದಲೇ ಪ್ರತಿಕ್ರಿಯಿಸಿ, ಪ್ರತಿಭಟನೆಯ ಭಾಗವಾಗಿದ್ದಾರೆ. ಇದನ್ನು ಸರ್ಕಾರ ಹತ್ತಿಕ್ಕಲು ಪೊಲೀಸರನ್ನೂ ಬಳಸಿಕೊಂಡು ಕ್ರೂರವಾಗಿ ಗುಂಡಿನ ಸುರಿಮಳೆ ಗೈದಿದ್ದಾರೆ. ಟಿಯರ್ ಗ್ಯಾಸ್-ಅನಿಲ ದಾಳಿಗಳನ್ನೂ ನಡೆಸಿದ್ದಾರೆ. ಜೊತೆಗೆ ನಾಚಿಕೆಯಿಲ್ಲದೆ ಕೊಳಚೆ ನೀರಿನಿಂದ ಬೀದಿಗಳಲ್ಲಿ ಪ್ರವಾಹವನ್ನುಂಟು ಮಾಡಿದ್ದಾರೆ. ಸುಡಾನ್‌ನ ಪ್ರಬಲ ರಾಷ್ಟ್ರೀಯ ಗುಪ್ತಚರ ಮತ್ತು ಭದ್ರತಾ ಸೇವೆ (ಎನ್.ಐ.ಎಸ್.ಎಸ್) ರವರು, ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮೊಖ್ತರ್ ಅಲ್-ಖತಿಭ್ ರವರನ್ನು ಬಂಧಿಸಿದ್ದಾರೆ. ಹಾಗೆಯೇ, 5 ಪೋಲಿಟ್ ಬ್ಯೂರೋ ಸದಸ್ಯರು ಹಾಗೂ ಒಬ್ಬ ಕೇಂದ್ರ ಸಮಿತಿ ಸದಸ್ಯರನ್ನು ಹಾಗೂ ಸುಡಾನಿನ ಕಮ್ಯುನಿಸ್ಟ್ ಪಕ್ಷದ ಹಲವು ಹಿರಿಯ ಮುಖಂಡರನ್ನು ಬಂದಿಸಿದ್ದಾರೆ.

ಮಾಧ್ಯಮಗಳ ಮೇಲೆ ನಿರ್ಬಂಧ


ಸರ್ಕಾರವು ಈ ಪ್ರತಿಭಟನೆಯಿಂದ ಎಷ್ಟು ಭಯ – ಭೀತಿ ಹೊಂದಿತ್ತೆಂದರೆ, ಆಡಳಿತಾರೂಢ ರಾಷ್ಟ್ರೀಯ ಕಾಂಗ್ರೇಸ್ ಪಕ್ಷ (ಎನ್.ಸಿ.ಪಿ)ವು ಎನ್.ಐ.ಎಸ್.ಎಸ್. ನ ಮೂಲಕ ಪತ್ರಿಕಾ ಸಂಪಾದಕರಿಗೆ ಪ್ರತಿಭಟನೆಗೆ ಸಂಬಂಧಿಸಿದ ಯಾವುದೇ ಸುದ್ದಿಗಳನ್ನು ಪ್ರಕಟಿಸಬಾರದೆಂದು ನಿರ್ಬಂಧನೆಗಳ ಸೂಚನೆಯನ್ನು ಹೊರಡಿಸಿತ್ತು. ಬ್ರೆಡ್ ಬೆಲೆಗಳ ಹೆಚ್ಚಳ ಕುರಿತಂತೆ ಪಾರದರ್ಶಕ ಸುದ್ದಿಗಳನ್ನು ಮುದ್ರಿಸಿ ಪ್ರಕಟಣೆ ಮಾಡಿದ್ದರಿಂದ ಹಾಗೂ ಪ್ರತಿಭಟನೆಕಾರರ ಮೇಲಿನ ಕ್ರೂರ ತರದ ದಾಳಿಗಳನ್ನು ಉಗ್ರವಾಗಿ ಟೀಕಿಸಿದ್ದರಿಂದ ನಮ್ಮ ಪತ್ರಿಕೆಯ ಪ್ರತಿಗಳನ್ನು ಸ್ವಾದೀನ ಪಡಿಸಿಕೊಳ್ಳಲಾಗಿದೆ ಎಂದು ಪ್ರಸಿದ್ಧ ಪತ್ರಿಕೆಯ ಸಂಪಾದಕರಾದ ಅಖ್ಬರ್ ಅಲ್-ವತನ್ ರವರು ಹೇಳಿದ್ದಾರೆ. ಸರ್ಕಾರದ ಈ ಕ್ರಮದಿಂದ ಮತ್ತಷ್ಟು ಕುಪಿತಗೊಂಡ ಪ್ರತಿಭಟನೆಕಾರರು, ಆರ್ಥಿಕ ಬೇಡಿಕೆಗಳ ಜೊತೆಗೆ, ಸರ್ವಾಧಿಕಾರಿ ಅಲ್-ಭಸಿರ್ ರವರ ಸರ್ಕಾರವನ್ನು ಉಚ್ಚಾಟಿಸಿ, ಹೊಸ ಚುನಾವಣೆ ನಡೆಸಬೇಕೆಂಬ ಘೋಷಣೆಯನ್ನು ಸೇರಿಸಿಕೊಂಡಿದ್ದಾರೆ.

ರಾಜಕೀಯ ಮುಷ್ಕರಕ್ಕೆ-ವಿಶಾಲ ಮೈತ್ರಿ ತಯಾರಿ

ಅಂತೆಯೇ, ಹಲವಾರು ವಿರೋಧ ಪಕ್ಷಗಳು ಕೈ ಜೋಡಿಸಿ, ಒಟ್ಟಾರೆಯಾಗಿ ಏಳು ಗುರಿಗಳೊಂದಿಗೆ ಜಂಟೀಯಾಗಿ ವಿಶಾಲ ಮೈತ್ರಿ ಕ್ರಿಯಾ ವೇದಿಕೆಯ ಅಡಿಯಲ್ಲಿ ಸುಡಾನ್‌ಲ್ಲಿ ವೈವಿಧ್ಯತೆಯ ನಿರ್ವಹಣೆ ಮತ್ತು ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಪರ್ಯಾಯ ನೀತಿಗಳ ಅನುಷ್ಠಾನಗೊಳಿಸುವ ಆಧಾರದ ಮೇಲೆ ಸಶಸ್ತ ಚಳುವಳಿಯೊಂದಿಗೆ 'ಸಮಗ್ರ ಶಾಂತಿ' ಒಪ್ಪಂದವನ್ನು ಸ್ಥಾಪಿಸಲು ನಂತರ 'ಶಾಶ್ವತ ಸಂವಿಧಾನ' ರಚಿಸಲು ಒಂದು ವಿಶಾಲ ರಾಷ್ಟ್ರೀಯ ಸಾಂವಿಧಾನಿಕ ಸಮಾವೇಶ ನಡೆಸಲು ತೀರ್ಮಾನಿಸಿದ್ದಾರೆ. ಇದಕ್ಕೆ ಸುಡಾನಿನ ವರ್ಕರ್ಸ್ ಯೂನಿಯನ್, ಡಾಕ್ಟರ್‌ರವರ ಸಿಂಡಿಕೇಟ್ ಮತ್ತು ಇಂಜಿನಿಯರುಗಳು, ವಕೀಲರು, ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಹಾಗೂ ಎಲ್ಲಾ ಇತರೆ ವೃತ್ತಿ ಪರ ಒಕ್ಕೂಟಗಳು ಒಪ್ಪಿದ್ದಾರೆ. ಆಡಳಿತರೂಢ ಧಾರ್ಮಿಕ ಮೂಲಭೂತ – ಸರ್ವಾಧಿಕಾರಿ ದಬ್ಬಾಳಿಕೆಯ ಸರ್ಕಾರವನ್ನೂ ಕಿತ್ತುಹಾಕಲು 'ವಿಶಾಲ ಸೇನೆ'ಯನ್ನು ಈ ಎಲ್ಲರು ಸೇರಿಕೊಂಡಿರುವುದು ಹಾಗೂ ಆ ಮೂಲಕ ಶಾಂತಿಯುತ ಸಾರ್ವಜನಿಕ ಪ್ರತಿಭಟನೆಗಳನ್ನು ನಡೆಸಿ ಮಾನವ ಹಕ್ಕುಗಳ ಖಾತ್ರಿಗಾಗಿ ಹಾಗೂ ಒಂದು ಪರಿವರ್ತನಾ ರಾಜಕೀಯ ಮೈತ್ರಿ ಮೂಡಿಸಲು ತಯಾರಿ ನಡೆಸಿದ್ದಾರೆ.

ಟರ್ಕಿ: ಕಮ್ಯುನಿಸ್ಟ್‌ರ ಚಟುವಟಿಕೆಗಳ ಮೇಲೆ ದಾಳಿ

ಟರ್ಕಿಯಲ್ಲಿ ಧಾರ್ಮಿಕ ಮೂಲಭೂತವಾದಿ ಅಧ್ಯಕ್ಷ 'ಎರ್ಡೋಗನ್' ಸರ್ವಾಧಿಕಾರ ಆಡಳಿತ ನಡೆಸುತ್ತಿದೆ. ಟರ್ಕಿಯ ಕಮ್ಯುನಿಸ್ಟ ಪಕ್ಷ (ಟಿಕೆಪಿ) ದ ಪ್ರಧಾನ ಕಾರ್ಯದರ್ಶಿ 'ಕೆಮಾಲ್ ಒಕುಯಾನ್ ರವರು ಅಧ್ಯಕ್ಷ ಎರ್ಡೋಗನ್ ರ ವಿರುದ್ಧ 'ಮಾನನಷ್ಟ' ಲೇಖನವನ್ನು ಬರೆದಿದ್ದಾರೆ ಎಂಬ ಆಧಾರದ ಮೇಲೆ 11 ತಿಂಗಳ 20 ದಿನಗಳ ಕಾಲ ಜೈಲು ಶಿಕ್ಷೆಯನ್ನು ವಿಧಿಸಲಾಗಿದೆ. ಎರ್ಡೋಗನ್ ರವರ ಆಡಳಿತದ ವೈಖರಿ ಕುರಿತಂತೆ ಬರೆದ ರಾಜಕೀಯ ಲೇಖನ ಇದಾಗಿತ್ತು. ಕಮ್ಯುನಿಸ್ಟ್ ಪಕ್ಷದ ಅನೇಕ ಕೇಂದ್ರ ಸಮಿತಿಯ ಸದಸ್ಯರ ರಾಜಕೀಯ ಬರಹಗಳನ್ನು ಟರ್ಕಿಯ ನಗರದಲ್ಲಿ ಹಂಚುತ್ತಿದ್ದ ಸಾವಿರಾರು ಪಕ್ಷದ ಸದಸ್ಯರು ಚಟುವಟಿಕೆಗಳನ್ನು ನಿಗ್ರಹಿಸಿ, ಹಲವರನ್ನು ಜೈಲು ಶಿಕ್ಷೆಗೆ ಗುರಿಪಡಿಸಲಾಗಿದೆ. ಇದರಿಂದಾಗಿ ಟರ್ಕಿಯ ಆಡಳಿತರೂಢ ಸರ್ವಾಧಿಕಾರ ಸರ್ಕಾರವು, ಟಿಕೆಪಿ ಯ ಚಟುವಟಿಕೆಗಳನ್ನು ಮೌನಗೊಳಿಸಲು– ಈ ದಾಳಿಕೋರ ನೀತಿಯನ್ನು ಅನುಸರಿಸುತ್ತಿದೆ.



ಟರ್ಕಿಯ ಕಮ್ಯುನಿಸ್ಟ್ ಪಕ್ಷವನ್ನೂ ಚುನಾವಣೆಯಲ್ಲಿ ಸ್ಪರ್ದಿಸದ ಹಾಗೆ ತಡೆಯೊಡ್ಡುವುದಾಗಿ ಅಲ್ಲಿನ ಸರ್ವೋಚ್ಚ ಚುನಾವಣಾ ಮಂಡಲಿಯು ಟಿಕೆಪಿ ಯ ಗಮನಕ್ಕೆ ತಂದಿದೆ.

ಟರ್ಕಿಯ ಕಮ್ಯುನಿಸ್ಟ್ ಪಕ್ಷದ ಹೋರಾಟಗಳಿಗೆ ಧೈರ್ಯಕ್ಕೆ ಸಿಪಿಐ(ಎಂ) ಪಕ್ಷವು ತನ್ನ ಸೌಹಾರ್ದಯುತ ಬೆಂಬಲ ವ್ಯಕ್ತಪಡಿಸಿದೆ. ಅದಕ್ಕೆ ತನ್ನ ಕೃತಜ್ಞತೆಯನ್ನೂ ವ್ಯಕ್ತಪಡಿಸಿರುವ ಟಿಕೆಪಿಯು ಈ ರೀತಿ ಹೇಳಿಕೆ ನೀಡಿದೆ. ನಾವು ಒಕುಯಾನ್ ರ ಮೇಲೆ ವಿಧಿಸಿದ ಜೈಲು ಶಿಕ್ಷೆಯನ್ನು ಪ್ರದರ್ಶನಕ್ಕೆ ಬಳಸಿಕೊಳ್ಳುವುದಿಲ್ಲ. ಬದಲಿಗೆ ಟರ್ಕಿಯಲ್ಲಿ ಜೈಲು ಶಿಕ್ಷೆಗೆ ಒಳಗಾದ ಜನರು ವ್ಯವಸ್ಥಿತವಾಗಿ ಪಕ್ಷವನ್ನು ದೃಡವಾಗಿ ಕಟ್ಟುವ ನಿಟ್ಟಿನಲ್ಲಿ ರೂಪಾಂತರಗೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಟಿಕೆಪಿ ಪಕ್ಷದ ನಾಯಕತ್ವವು ತಮ್ಮ ರಾಜಕೀಯ ಚಟುವಟಿಕೆಗಳನ್ನು ಆತ್ಮ ವಿಶ್ವಾಸದಿಂದಲೇ ಮುಂದುವರಿಸುತ್ತದೆ.

ಆಡಳಿತಾರೂಢ ಸರ್ಕಾರವು ಎಷ್ಟೇ ದಬ್ಬಾಳಿಕೆ ನಡೆಸಿದರು, ಬೆದರುವ ಪ್ರಶ್ನೆಯು ಉದ್ಭವಿಸುವುದಿಲ್ಲ, ಬದಲಿಗೆ ಪಕ್ಷದ ಜಾಲವನ್ನು ವಿಸ್ತರಿಸಲು ದೃಡತೆಯಿಂದ ಮುಂದೆ ಸಾಗುತ್ತೇವೆ. ಕಳೆದ ಐದು ತಿಂಗಳುಗಳಿಂದ ಪಕ್ಷದ ಸದಸ್ಯರು, ತಮ್ಮ ಕಾರ್ಯಸ್ಥಳಗಳನ್ನು ಹಾಗೂ ಘಟಕಗಳನ್ನು ಹೆಚ್ಚಿಸುವ ಉದ್ದೇಶದಿಂದ ವ್ಯವಸ್ಥಿತ ರೀತಿಯಲ್ಲಿ ಸಜ್ಜುಗೊಳ್ಳುತ್ತಿದ್ದಾರೆ. ಏತನ್ಮಧ್ಯೆ, ಸಂಪ್ರದಾಯಶರಣ ಪಡೆಗಳು ಸಾಕಷ್ಟು ಬಲವಾಗಿರುವ ಪ್ರದೇಶಗಳಲ್ಲೂ 13 ಹೊಸ ಕಛೇರಿಗಳನ್ನು ತೆರೆದಿದ್ದಾರೆ. ಮೇ 2018 ರ ವೇಳೆಗೆ, ಕನಿಷ್ಠ 20 ಹೆಚ್ಚುವರಿ ನಗರ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಪಕ್ಷದ ಕಛೇರಿಗಳನ್ನು ತೆರೆಯಲು ಯೋಜನೆ ರೂಪಿಸಲಾಗಿದೆ. ಮಾರ್ಕ್ಸ್‌ವಾದಿ- ಲೆನಿನ್‌ವಾದೀ ಸಿದ್ಧಾಂತದ ಮೇಲಿನ ತಮ್ಮ ಬದ್ಧತೆಯನ್ನು ಗಟ್ಟಿಗೊಳಿಸುವ ಭರವಸೆಯೊಂದಿರುವ ಟಿಕೆಪಿಯು ಹೋರಾಟಕ್ಕೆ ಸಿಪಿಐ(ಎಂ) ಬೆಂಬಲ ವ್ಯಕ್ತಪಡಿಸಿದೆ.

ಸುಡಾನ್ ಮತ್ತು ಟರ್ಕಿ ದೇಶಗಳಲ್ಲಿ ಧಾರ್ಮಿಕ ಮೂಲಭೂತವಾದಿಗಳ ಪ್ರಾಬಲ್ಯ ಮತ್ತ ಸಾಮ್ರಾಜ್ಯಶಾಹಿ ಪಡೆಗಳು ಬೆಂಬಲಿಸುವ ಸರ್ವಾಧಿಕಾರಿ ಸರ್ಕಾರಗಳು ಇವೆ ಎಂಬುದನ್ನು ನೆನಪಿನಲ್ಲಿಡಬೇಕಾಗಿದೆ. ಧಾರ್ಮಿಕ ಮೂಲಭೂತವಾದದ ವರ್ತನೆಗಳು, ಕಾರ್ಮಿಕ ವರ್ಗದ ಏಕತೆಯನ್ನು ಮುರಿಯಲು ಪ್ರಯತ್ನಗಳನ್ನು ಮುಂದುವರಿಸುತ್ತಾರೆ. ಈ ಎರಡೂ ದೇಶಗಳಲ್ಲಿನ ಕಮ್ಯೂನಿಸ್ಟ್ ಪಕ್ಷಗಳು, ಜನರ ಜೀವನಾಧಾರದ ಪ್ರಶ್ನೆಗಳನ್ನೂ ಕೈಗೆತ್ತಿಕೊಂಡು ಹೋರಾಟಗಳನ್ನು ನಡೆಸುತ್ತಿವೆ. ಹಾಗೆಯೇ ಮೂಲಭೂತವಾದ ಮತ್ತು ಪಂಥೀಯತೆಯ ವಿರುದ್ಧದ ಹೋರಾಟಗಳನ್ನು ನವ- ಉದಾರವಾದ ನೀತಿಗಳ ವಿರುದ್ಧದ ಹೋರಾಟಗಳಲ್ಲಿ ಒಗ್ಗೂಡಿಸುತ್ತಿವೆ. ಪರ್ಯಾಯ ನೀತಿಗಳನ್ನು ಜಾರಿಗೊಳಿಸುವುದು, ಗುರಿಗಳಿಗೆ-ಇರುವ ಏಕೈಕ ಮಾರ್ಗ ಇದಲ್ಲದೆ, ಬೇರೆ ಯಾವುದು ಇಲ್ಲವೆಂಬ ಸ್ಪಷ್ಟತೆಗೆ ಕಮ್ಯುನಿಸ್ಟರು ಬಂದಿದ್ದಾರೆ. ಅವರ ಪರ್ಯಾಯ ನೀತಿಗಳಿಗಾಗಿ ನಡೆಯುತ್ತಿರುವ ಹೋರಾಟಗಳಿಗೆ ಜಯಸಿಗಲಿ ಎಂದು ಆಶಿಸೋಣ.

JANASHAKTHI KANNADA VARA PATRIKE Feb 5-11, 2018 Price : Rs. 10/- Date of Publication : 2 February 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283



ಬೆಂಗಳೂರು ಹೊಸೂರು ರೋಡಿನಲ್ಲಿ



ವಿದ್ಯಾರ್ಥಿ ಸರಪಣಿಯಲ್ಲಿ





ಕೇಂದ್ರೀಯ ಉದ್ಯಮದ ಕಾರ್ಮಿಕರು ಸರಪಣಿಯಲ್ಲಿ



ಸರಪಣಿಗೆ ಕುಂಚ ಬೆಂಬಲ – ತುಮಕೂರು



ಕೊರಟಗೆರೆಯಲ್ಲಿ

“ಸೌಹಾರ್ದತೆಗಾಗಿ ಕರ್ನಾಟಕ” ಮೈಕೊಡವಿ ಎದ್ದು ನಿಂತಾಗ..



ಮಡಿಕೇರಿಯಲ್ಲಿ



ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ



ಹೈಕೋರ್ಟಿನೆದುರು ವಕೀಲರು ಸರಪಣಿಯಲ್ಲಿ



ಶಿವಮೊಗ್ಗದಲ್ಲಿ



ಸಿಂಧನೂರಿನಲ್ಲಿ



ನಂಜನಗೂಡಿನಲ್ಲಿ



ವಿರಾಜಪೇಟೆಯಲ್ಲಿ



ತುಮಕೂರಿನಲ್ಲಿ



ಶ್ರೀನಿವಾಸಪುರದಲ್ಲಿ

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**